# ಅಂಕಣಗಳು - ಅಡ್ಡೂರು ಕೃಷ್ಣರಾವ್

## 2025ರಲ್ಲಿ ನಮ್ಮ ಮಕ್ಕಳಿಗೆ ನೀರು ಸಾಕಾದೀತೇ?:

ಯಾರನ್ನೇ ಕೇಳಿ: ನಿಮ್ಮ ಬೆಳ್ಳಿಬಂಗಾರ, ಮನೆ, ಆಸ್ತಿಪಾಸ್ತಿ, ಬ್ಯಾಂಕ್‌ಬ್ಯಾಲೆನ್ಸ್ – ಇವೆಲ್ಲ ಯಾರಿಗಾಗಿ? "ನಮ್ಮ ಮಕ್ಕಳಿಗಾಗಿ" ಅಂತಾರೆ. ಮಕ್ಕಳಿಗಾಗಿ ಇವನ್ನೆಲ್ಲ ಜೋಪಾನವಾಗಿ ಕೂಡಿಡುವ ನಾವು, ಅವರಿಗೆ ನೀರು ಸಿಕ್ಕೀತೇ? ಎಂದು ಯಾವತ್ತಾದರೂ ಚಿಂತಿಸಿದ್ದೇವೆಯೇ?

ಇನ್ನಾದರೂ ಚಿಂತಿಸಬೇಕಾಗಿದೆ. ಯಾಕೆಂದರೆ ಆಗಸ್ಟ್ ೧೨, ೨೦೦೯ರ ಪತ್ರಿಕಾ ವರದಿ (ಡೆಕ್ಕನ್ ಹೆರಾಲ್ಡ್, ಪುಟ ೯) ನಮ್ಮ ಮಕ್ಕಳ ಕಾಲದಲ್ಲಿ ನೀರಿನ ಪರಿಸ್ಥಿತಿ ಹೇಗಿರುತ್ತದೆ? ಎಂಬ ಚಿತ್ರಣ ನೀಡಿದೆ.

ಅದು, ನಾಸಾ (ಎನ್‌ಎಎಸ್‌ಎ) ಉಪಗ್ರಹ ತೆಗೆದ ಫೋಟೋಗಳನ್ನು ಅಧ್ಯಯನ ಮಾಡಿ, ಯುಎಸ್‌ಎ ದೇಶದ ಪರಿಣತರು ಸಿದ್ಧಪಡಿಸಿದ ವರದಿ. ಮೂಲತಃ "ನೇಚರ್" ಪತ್ರಿಕೆಯಲ್ಲಿ ಪ್ರಕಟವಾಗಿರುವ ಆ ವರದಿಯ ಸತ್ಯಾಸತ್ಯತೆ ಬಗ್ಗೆ ಸಂದೇಹ ಪಡಬೇಕಾಗಿಲ್ಲ. ಅದರ ಪ್ರಕಾರ ಪಂಜಾಬ್, ಹರಿಯಾಣ, ರಾಜಸ್ಥಾನ ಮತ್ತು ಡೆಲ್ಲಿಯಲ್ಲಿ ೨೦೦೨ರಿಂದ ೨೦೦೮ರ ತನಕ, ಅಂತರ್ಜಲ ಮಟ್ಟ ಕುಸಿದಿದೆ; ವರುಷಕ್ಕೆ ೪ ಸೆಂಟಿಮೀಟರಿನಂತೆ ಒಟ್ಟು ೨೪ ಸೆಮೀ ಕುಸಿದಿದೆ.

ಇದರ ಅರ್ಥವೇನು? ಆ ಪ್ರದೇಶಗಳು ವರುಷಕ್ಕೆ ೧೮ ಘನ ಕಿ.ಮೀ.ನಂತೆ, ೬ ವರುಷಗಳಲ್ಲಿ ೧೦೯ ಘನ ಕಿ.ಮೀ. ನೀರು ಕಳೆದುಕೊಂಡಿವೆ. ಇದು ಭಾರತದ ಅತಿ ದೊಡ್ಡ ಜಲಾಶಯ (ಮಧ್ಯಪ್ರದೇಶದ ಅಪ್ಪರ್ ವಾಯಿನ್‌ಗಂಗಾ ಜಲಾಶಯ)ದಲ್ಲಿರುವ ನೀರಿನ ಪರಿಮಾಣಕ್ಕಿಂತ ಜಾಸ್ತಿ!

ಅಂತರ್ಜಲ ಮಟ್ಟದ ಇಂತಹ ಆತಂಕಕಾರಿ ಕುಸಿತದ ಪರಿಣಾಮಗಳೇನು? ಅಲ್ಲಿನ ಸುಮಾರು ೧೧ ಕೋಟಿ ನಿವಾಸಿಗಳಿಗೆ ಕುಡಿಯುವ ನೀರಿನ ಕೊರತೆ ಉಂಟಾದೀತು. ಮಾತ್ರವಲ್ಲ, ಕೃಷಿಗೆ ನೀರು ಸಾಕಾಗದೆ ಆಹಾರದ ಕೊರತೆ ಎದುರಾದೀತು.

ಇಂತಹ ದುಷ್ಪರಿಣಾಮಗಳ ಬಗ್ಗೆ ಪರಿಣತರು ನಮ್ಮನ್ನು ಎಚ್ಚರಿಸುತ್ತಲೇ ಇದ್ದಾರೆ. ಆದರೆ ನಾವೆಲ್ಲರೂ ತಣ್ಣೀರಿನಂತೆ ತಣ್ಣಗಿದ್ದೇವೆ, ಅಲ್ಲವೇ? ಉದಾಹರಣೆಗೆ, ಐದು ವರುಷ ಮುಂಚೆ ಹುಚ್ಚುದನ ಜ್ವರ, ಎರಡು ವರುಷ ಮುಂಚೆ ಹಕ್ಕಿಜ್ವರ ಬಂದಾಗಲೇ ಪರಿಣತರು ಎಚ್ಚರಿಸಿದ್ದರು: ವೈರಸ್‌ಗಳು ಮಾನವಕುಲಕ್ಕೆ ಸಡ್ಡುಹೊಡೆಯುತ್ತಿವೆ ಎಂದು. ನಾವು ಅವರ ಎಚ್ಚರಿಕೆಯನ್ನು ಗಮನಿಸಲೇ ಇಲ್ಲ. (ಗಮನಿಸಿದ್ದರೆ, ನಮ್ಮ ಆರೋಗ್ಯ ರಕ್ಷಣೆ ಬಗ್ಗೆ, ನಮ್ಮ ರೋಗನಿರೋಧ ಶಕ್ತಿ ಹೆಚ್ಚಿಸುವ ಬಗ್ಗೆ ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು.) ಈಗ ಹಂದಿಜ್ವರ ದೇಶದಲ್ಲೆಲ್ಲ ಹಬ್ಬುತ್ತಿರುವಾಗ ಕಂಗಾಲಾಗಿದ್ದೇವೆ. ಮುಖಕವಚ ಕಟ್ಟಿಕೊಂಡು ಮೂಗು-ಬಾಯಿ ಮುಚ್ಚಿಕೊಳ್ಳುತ್ತಿದ್ದೇವೆ.

ಪಂಜಾಬ್ ಮತ್ತು ಹರಿಯಾಣ ಭಾರತದ ಆಹಾರದ ಕಣಜ. ಒಂದು ಕಿಲೋಗ್ರಾಂ ಅಕ್ಕಿ ಉತ್ಪಾದಿಸಲು ಕನಿಷ್ಠ ೧,೦೦೦ ಲೀಟರ್ ನೀರು ಅಗತ್ಯ. ಅಲ್ಲಿ ಈ ಪರಿಯಲ್ಲಿ ಅಂತರ್ಜಲ ಕುಸಿಯುತ್ತಿದ್ದರೆ, ಭಾರತದ ೧೧೩ ಕೋಟಿ ಜನರಿಗೆ ಉಣ್ಣಲು ಆಹಾರ ಸಿಕ್ಕೀತೇ?

ಇನ್ನು ೧೫ ವರುಷಗಳಲ್ಲಿ, ೨೦೨೫ರ ಹೊತ್ತಿಗೆ (ಅಂದರೆ ನಮ್ಮ ಮಕ್ಕಳ ಕಾಲದಲ್ಲಿ) ಕನಿಷ್ಠ ೧,೮೦೦ ಮಿಲಿಯ ಜನರು ಭೂಮಿಯಲ್ಲಿ ತೀವ್ರ ನೀರಿನ ಕೊರತೆಯ ಪ್ರದೇಶಗಳಲ್ಲಿ ವಾಸವಾಗಿರುತ್ತಾರೆ. ಅದಲ್ಲದೆ, ಜಗತ್ತಿನ ಒಟ್ಟು ಜನಸಂಖ್ಯೆಯ ೧/೩ನೇ ಭಾಗ ಜನರು ನೀರಿನ ಸಂಕಟ ಎದುರಿಸಬೇಕಾಗುತ್ತದೆ.

ಆದರೆ ನಾವೇನು ಮಾಡುತ್ತಿದ್ದೇವೆ? ಈಗಾಗಲೇ ಪ್ರತಿದಿನ ೨ ಮಿಲಿಯ ಟನ್ ಮಾನವಮಲವನ್ನು ನೀರಿನಾಸರೆಗಳಿಗೆ ಎಸೆಯುತ್ತಿದ್ದೇವೆ. ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ವಿಷತುಂಬಿದ ಕೈಗಾರಿಕಾ ಕಲ್ಮಷದ ಶೇಕಡಾ ೭೦ನ್ನು ನೀರಿನಾಸರೆಗಳಿಗೆ ಬಿಡುತ್ತಿದ್ದೇವೆ. ನಮ್ಮ ಮಕ್ಕಳಿಗಾಗಿ, ಈಗಿರುವ ನೀರನ್ನು ಶುದ್ಧವಾಗಿ ಇಟ್ಟುಕೊಳ್ಳುವ ಬಗ್ಗೆ, ನಮಗೇನಾದರೂ ಕಾಳಜಿ ಇದೆಯೇ?

ನೀರಿನ ಶುದ್ಧತೆ ಕಾಪಾಡುವ ಬಗ್ಗೆ ಅಸಡ್ಡೆ ಮಾಡಿದ್ದಕ್ಕೆ, ಅಂತರ್ಜಲವನ್ನು ಕೊಳ್ಳೆ ಹೊಡೆದದ್ದಕ್ಕೆ ನಾವು ಈಗಾಗಲೇ ದಂಡ ಪಾವತಿಸುತ್ತಾ ಇದ್ದೇವೆ: ಈ ಭೂಮಿಯ ಪ್ರತಿ ೬ ಜನರಲ್ಲಿ ಒಬ್ಬರಿಗೆ ಕುಡಿಯಲು ಸುರಕ್ಷಿತ ನೀರು ಸಿಗುತ್ತಿಲ್ಲ!

ಅಪಾಯ ಎಲ್ಲಿಗೆ ಬಂದಿದೆ? ಎಂಬ ಸತ್ಯ ತಿಳಿಯ ಬೇಕಾದರೆ ಈ ಚಲನಚಿತ್ರಗಳಲ್ಲಿ ಒಂದನ್ನಾದರೂ ನೋಡಿ: ‘‘ಏನ್ ಇನ್‌ಕನ್‌ವೀನಿಯಂಟ್ ಟ್ರುತ್’’, ‘‘ದ ಇಲವೆಂತ್ ಅವರ್’’, ‘‘ಪ್ಲಾನೆಟ್ ಅರ್ಥ್’’ (ಬಿಬಿಸಿ ನಿಸರ್ಗ ದಾಖಲಾತಿ) ಅಥವಾ ‘‘ಹೋಂ’’.

ಇವೆಲ್ಲ ಅನಾಹುತಗಳ ಜೊತೆಗೆ ಭೂಮಿಯ ಜನಸಂಖ್ಯೆ ಹೆಚ್ಚುತ್ತಿದೆ. ೨೦೫೦ರ ಹೊತ್ತಿಗೆ ನಮ್ಮೀ ಭೂಮಿಯಲ್ಲಿ ೨.೭ ಬಿಲಿಯನ್ ಹೆಚ್ಚುವರಿ ಜನರು ಇರುತ್ತಾರೆ. ಆದರೆ ಭೂಮಿಯಲ್ಲಿ ನೀರು ಅಷ್ಟೇ ಇರುತ್ತದೆ. ಈಗ ಇರುವ ನೀರು (ಅವರನ್ನೂ ಸೇರಿಸಿ) ಎಲ್ಲರ ಅಗತ್ಯ ಪೂರೈಸಲು ಸಾಕಾದೀತೇ?

## ವಿದ್ಯಾಸಂಸ್ಥೆಗಳಲ್ಲಿ ಮಳೆನೀರಿಂಗಿಸಿ ಜಲಜಾಗೃತಿ

ಕರ್ನಾಟಕದ ಕರಾವಳಿಯ ಜಿಲ್ಲೆ ದಕ್ಷಿಣ ಕನ್ನಡ. ಇಲ್ಲಿರುವ ಪದವಿಪೂರ್ವ ಕಾಲೇಜುಗಳು ೧೫೦. ಈ ಕಾಲೇಜುಗಳು ಮಳೆಕೊಯ್ಲಿನ ಹಾಗೂ ಮಳೆನೀರುಂಗಿಸುವ ರಚನೆಗಳನ್ನು ನಿರ್ಮಿಸಿದರೆ ಅದುವೇ ಜಲಜಾಗೃತಿ ಹಬ್ಬಿಸಬಲ್ಲ ಅಭಿಯಾನ.

ಯಾಕೆಂದರೆ ಅಲ್ಲಿ ಪಿ.ಯು.ಸಿ. ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ೩೦,೦೦೦. ತಮ್ಮ ಕಾಲೇಜಿನಲ್ಲಿ ಮಳೆಕೊಯ್ಲು ಹಾಗೂ ಮಳೆನೀರು ಇಂಗಿಸುವುದನ್ನು ಅವರು ಕಣ್ಣಾರೆ ಕಾಣುವಂತಾದರೆ, ಆ ಸಂದೇಶ ಕನಿಷ್ಠ ೩೦,೦೦೦ ಮನೆಗಳನ್ನು ತಲಪುತ್ತದೆ.

ಇದೆಲ್ಲ ಸಾಧ್ಯವೇ? ಖಂಡಿತ ಸಾಧ್ಯವಿದೆ. ಇದು ನನ್ನ ಅನುಭವ. ೨೦೦೪ರಲ್ಲಿ ಚಿಕ್ಕಮಗಳೂರಿನ ಕಾಬ್‌ಸೆಟ್ ಸಂಸ್ಥೆಯ ನಿರ್ದೇಶಕನಾಗಿ ನನ್ನ ನೇಮಕ. ಆ ವರುಷ ಸ್ವ-ಉದ್ಯೋಗ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡ ಕಟ್ಟಿಸಬೇಕೆಂದು ಕಾರ್ಪೊರೇಷನ್ ಬ್ಯಾಂಕಿನ ನಿರ್ಧಾರ. ಕಟ್ಟಡ ನಿರ್ಮಿಸುವಾಗಲೇ ಮಳೆಕೊಯ್ಲು ಹಾಗೂ ಮಳೆನೀರಿಂಗಿಸುವ ವ್ಯವಸ್ಥೆ ಮಾಡಬೇಕೆಂದು ನನ್ನ ಆಗ್ರಹ. ಆ ಮೂಲಕ ಪ್ರತಿ ವರುಷ ಅಲ್ಲಿ ತರಬೇತಿಗೆ ಬರುವ ಒಂದು ಸಾವಿರ ಅಭ್ಯರ್ಥಿಗಳ ಮನೆಗಳಿಗೆ ಜಲಜಾಗೃತಿಯ ಸಂದೇಶ ರವಾನಿಸುವ ಯೋಜನೆ.

ಅದರಂತೆ ಸುಮಾರು ೨,೩೦೦ ಚದರಡಿ ಚಾವಣಿಯಿಂದ ಮಳೆನೀರು ಇಳಿಸಲು ಪೈಪ್‌ಗಳ ಜೋಡಣೆ. ಹಿಂಭಾಗದ ಚಾವಣಿಯಿಂದ ಇಳಿಯುವ ಮಳೆನೀರು ಎರಡು ಫಿಲ್ಟರ್‌ಗಳ ಮೂಲಕ ಶುದ್ಧೀಕರಣ. ಸಂಪಿನಲ್ಲಿ ಆ ನೀರಿನ ಸಂಗ್ರಹ. ಸಂಪ್‌ನಿಂದ ನೀರೆತ್ತಲು ಪಂಪ್. ಆ ಸಂಪ್ (ನೆಲದಡಿಯ ಟ್ಯಾಂಕ್) ತುಂಬಿದಾಗ ಹೆಚ್ಚಾದ ನೀರು ಕೊಳವೆಬಾವಿಗೆ ಹರಿದುಹೋಗಲು ಪೈಪ್ ಜೋಡಣೆ (ಫೋಟೋ ನೋಡಿ).

ಹಿಂಭಾಗದ ಇಳಿಪೈಪಿಗೆ ತಗಲಿಸಿದ್ದು ಎರಡು ವಿಶಿಷ್ಟ ವಿನ್ಯಾಸದ ಫಿಲ್ಟರ್‌ಗಳನ್ನು. ಅವುಗಳ ತಳದಲ್ಲಿ ತೂತು. ಹಾಗಾದರೆ ಚಾವಣಿಯಿಂದ ರಭಸದಲ್ಲಿ ಇಳಿಯುವ ಮಳೆನೀರು ಈ ಫಿಲ್ಟರ್‌ಗಳ ತೂತಿನಲ್ಲಿ ನೆಲಕ್ಕೆ ಸುರುಯುತ್ತದೆ ಅಂದುಕೊಂಡಿರಾ? ಹಾಗೆ ಆಗೋದಿಲ್ಲ. ಫಿಲ್ಟರ್

ಪ್ರವೇಶಿಸುವ ಮಳೆನೀರು ಅದರೊಳಗೆ ಬುಗುರಿಯಂತೆ ತಿರುಗುತ್ತದೆ. ಆಗ ಅದರಲ್ಲಿರುವ ಕಸವೆಲ್ಲ ಬೇರ್ಪಟ್ಟು ತೂತಿನಲ್ಲಿ ಕೆಳಕ್ಕೆ ಬೀಳುತ್ತದೆ; ಶುದ್ಧವಾದ ಮಳೆನೀರು ಮಾತ್ರ ಪೈಪಿನಲ್ಲಿ ಇಳಿದು ಕೊಳವೆಬಾವಿಗೆ ಹರಿಯುತ್ತದೆ.

ಕಟ್ಟಡದ ಮುಂಭಾಗದ ಚಾವಣಿಯ ಮಳೆನೀರು ಇಳಿಪೈಪ್‌ಗಳಲ್ಲಿ ಇಳಿದು ನೇರವಾಗಿ ಕೊಳವೆಬಾವಿಗೆ ಹರಿದುಹೋಗಲು ಪೈಪ್‌ಗಳ ಜೋಡಣೆ. ಕೊಳವೆಬಾವಿಗೆ ಈ ಮಳೆನೀರಿನ ಮರುಪೂರಣಕ್ಕೆ ಅಚ್ಚುಕಟ್ಟಾದ ವ್ಯವಸ್ಥೆ. ಕೊಳವೆಬಾವಿಯ ಸುತ್ತಲೂ ಐದಡಿ ವ್ಯಾಸದಲ್ಲಿ, ೧೦ ಅಡಿ ಆಳಕ್ಕೆ ಮಣ್ಣು ಅಗೆದು ತೆಗೆಸಿದ್ದು. ಅನಂತರ ಅಲ್ಲಿ ಇಳಿಸಿದ್ದು (ತಲಾ ಐದಡಿ ವ್ಯಾಸದ ಮತ್ತು ಒಂದಡಿ ಎತ್ತರದ) ೧೦ ಕಾಂಕ್ರೀಟ್ ರಿಂಗ್‌ಗಳನ್ನು. ಇದರಿಂದಾಗಿ ೧೦ ಅಡಿ ಆಳದ ಬಾವಿಯ ಮಧ್ಯದಲ್ಲಿ ಕೊಳವೆಬಾವಿಯ ಕೇಸಿಂಗ್ ಪೈಪ್.

ತಳದಿಂದ ಎರಡನೇ ಕಾಂಕ್ರೀಟ್ ರಿಂಗಿಗೆ ಸಮಾಂತರವಾಗಿ ಕೇಸಿಂಗ್ ಪೈಪನ್ನು ಒಂದಡಿ ಉದ್ದಕ್ಕೆ ಕತ್ತರಿಸಿ ತೆಗೆದು, ಆ ಸ್ಥಾನದಲ್ಲಿ "ವಿ" ಫಿಲ್ಟರಿನ ಜೋಡಣೆ (ಕಪ್‌ಲಿಂಗ್ ಮೂಲಕ). ಈ ಫಿಲ್ಟರಿನಲ್ಲಿ ಮರಳಿನ ಕಣಗಳು ಒಳತೂರುವುದಿಲ್ಲ; ಹಾಗಾಗಿ, ಕೇಸಿಂಗ್ ಪೈಪ್ ಬ್ಲಾಕ್ ಆಗುವ ಸಾಧ್ಯತೆಯಿಲ್ಲ. ತಳದಿಂದ ಎಂಟನೇ ರಿಂಗಿನ ಮೇಲೆ ಕಾಂಕ್ರೀಟ್ ಮುಚ್ಚಳ (ಸ್ಲ್ಯಾಬ್) ಇರಿಸಿದ್ದು. ಅದರಲ್ಲಿ ಒಂದಿಂಚು ವ್ಯಾಸದ ತೂತುಗಳು. ಆ ಮುಚ್ಚಳದ ಮೇಲೆ ೯ನೇ ಮತ್ತು ೧೦ನೇ ರಿಂಗ್ ಇರಿಸಿದ್ದು. ಆ ರಿಂಗ್‌ಗಳ ಒಳಕ್ಕೆ (ತಲಾ ೬ ಇಂಚು ಎತ್ತರಕ್ಕೆ) ದೊಡ್ಡ ಜಲ್ಲಿ, ಸಣ್ಣ ಜಲ್ಲಿ ಮತ್ತು ಮರಳು (ಮೇಲ್ಗಡೆ) ತುಂಬಿದ್ದು. ಇದು (ಫೋಟೋದಲ್ಲಿ ಕಾಣುತ್ತಿರುವ) ಮಳೆನೀರಿನ ಫಿಲ್ಟರ್.

ಮಳೆ ಬಂದಾಗ ಏನಾಗುತ್ತದೆ? ಈ ಫಿಲ್ಟರಿನಲ್ಲಿ ಮಳೆನೀರು ಸೋಸಿ, ಕಾಂಕ್ರೀಟ್ ಮುಚ್ಚಳದ ತೂತುಗಳ ಮೂಲಕ ಕೆಳಕ್ಕೆ ಇಳಿಯುತ್ತದೆ. ಹಾಗೆ ಇಳಿದ ನೀರು, ಕೇಸಿಂಗ್ ಪೈಪಿನ ಸುತ್ತಲೂ ಕಾಂಕ್ರೀಟ್ ಬಾವಿಯಲ್ಲಿ ತುಂಬಿಕೊಳ್ಳುತ್ತದೆ. ಈ ನೀರಿನ ಸ್ತಂಭದ ಒತ್ತಡದಿಂದಾಗಿ, ಮಳೆನೀರು "ವಿ" ಫಿಲ್ಟರಿನ ಮೂಲಕ ಕೇಸಿಂಗ್ ಪೈಪಿನೊಳಗೆ ನುಗ್ಗಿ, ಕೊಳವೆಬಾವಿಯ ಆಳಕ್ಕೆ ಇಳಿದು, ಮರುಪೂರಣ. ಇವೆರಡೂ ವಿನೂತನ ವ್ಯವಸ್ಥೆಗಳಿಗೆ ಆದ ವೆಚ್ಚ ರೂಪಾಯಿ ೨೨,೦೦೦. ಇವನ್ನು ರೂಪಿಸಿದವರು ಹಾಗೂ ಜೋಡಿಸಿಕೊಟ್ಟವರು ಬೆಂಗಳೂರಿನ ಫಾರ್ಮ್ ಲ್ಯಾಂಡ್ ರೈನ್‌ವಾಟರ್ ಹಾರ್ವೆಸ್ಟಿಂಗ್ ಸಿಸ್ಟಂನ ಮೈಕಲ್ ಬಾಪ್ಟಿಸ್ಟ್ (೯೪೪೮೦೭೬೫೯೫) ಮತ್ತು ವಿಜಯರಾಜ್ (೯೪೪೮೧೩೦೫೨೪).

ಪಶ್ಚಿಮಘಟ್ಟಗಳ ಆ ಬದಿಯ ಚಿಕ್ಕಮಗಳೂರಿನಲ್ಲಿ ಮಳೆನೀರಕೊಯ್ಲಿನ ಈ ಪ್ರಯತ್ನ ಯಶಸ್ವಿಯಾಗಿದೆ. ಹಾಗಿರುವಾಗ, ಕರಾವಳಿಯ ದಕ್ಷಿಣ ಕನ್ನಡದಲ್ಲಿ ಮಳೆಕೊಯ್ಲು ಯಶಸ್ವಿ ಆಗಲೇ ಬೇಕು. ಈ ಭರವಸೆಯಿಂದಲೇ ಇತ್ತೀಚೆಗೆ ಮಂಗಳೂರಿನ ಹತ್ತಿರದ ಸುರತ್ಕಲಿನ ಗೋವಿಂದದಾಸ ಕಾಲೇಜಿನಲ್ಲಿ ಮಳೆಕೊಯ್ಲಿನ ವ್ಯವಸ್ಥೆಗೆ ಚಾಲನೆ (೧೯ ಜುಲಾಯಿ ೨೦೦೯ರಂದು). ಅಲ್ಲಿ ಮಳೆನೀರ ಸಂಗ್ರಹಕ್ಕಾಗಿ ೧೫,೦೦೦ ಲೀಟರ್‌ನ ಸಂಪ್ ನಿರ್ಮಾಣ. ಆ ನೀರನ್ನು ಓವರ್‌ಹೆಡ್ ಟ್ಯಾಂಕಿಗೆ ಎತ್ತಲಿಕ್ಕಾಗಿ ಪಂಪ್. ರೂಪಾಯಿ ೪೫,೦೦೦ ವೆಚ್ಚದ ಈ ಯೋಜನೆಗೆ ಸುರತ್ಕಲಿನ ರೋಟರಿ ಕ್ಲಬ್‌ನ ನೆರವು. ಇದರಿಂದಾಗಿ ಪ್ರತಿ ವರುಷ ೪.೫ ಲಕ್ಷ ಲೀಟರ್ ಮಳೆನೀರಿನ ಕೊಯ್ಲು. ಮಾತ್ರವಲ್ಲ, ಈ ಕಾಲೇಜಿನ ೨.೫ ಎಕ್ರೆ ಜಮೀನಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಂದ ಜುಲಾಯಿ ತಿಂಗಳಿನಲ್ಲಿ ಇಂಗುಗುಂಡಿಗಳ ರಚನೆ.

ಇವೆಲ್ಲ ಶುಭಸೂಚನೆಗಳು. ವಾರ್ಷಿಕ ೪,೪೦೦ ಮಿಮೀ ಮಳೆ ಸುರಿಯುವ ನಮ್ಮ ಕರಾವಳಿಯ ಹೆಚ್ಚೆಚ್ಚು ವಿದ್ಯಾಸಂಸ್ಥೆಗಳಲ್ಲಿ ಮಳೆಕೊಯ್ಲು ಆರಂಭವಾಗಲಿ. ಸಂಗ್ರಹಿಸಿದ ಮಳೆನೀರನ್ನು ಎಲ್ಲ ವಿದ್ಯಾರ್ಥಿಗಳು ಬಳಸುವಂತಾಗಲಿ. ಆ ಮೂಲಕ ಜಲಜಾಗೃತಿಯ ಸಂದೇಶ ಎಲ್ಲೆಡೆ ಹಬ್ಬಲಿ.

# ಶಾಲಾಮಕ್ಕಳಿಂದ ಜಲಜಾಗೃತಿ

“ಅದು ನನ್ನ ನೀರಿನ ಟ್ಯಾಂಕ್. ಅದರಿಂದ ಏನು ಬೇಕಾದರೂ ಮಾಡಿಕೊಳ್ತೇನೆ. ಅದನ್ನು ಕೇಳಲಿಕ್ಕೆ ನೀವ್ಯಾರು?”

“ನಾನು ಯಾರಂತ ಗೊತ್ತುಂಟಾ? ನನ್ನ ಟ್ಯಾಂಕ್ ಮೊದಲು ಭರ್ತಿ ಆಗಬೇಕು. ಇಲ್ಲಾಂದ್ರೆ ನಿಮ್ಮ ಟ್ಯಾಂಕಿಗೆ ಬೆಂಕಿ ಕೊಡ್ತೇನೆ.”

ಇದನ್ನು ಹೇಳಿದವರು ಯಾರು? ದೇಶದ ರಾಜಧಾನಿ ನವದೆಹಲಿಯ ಪ್ರಧಾನ ಪ್ರದೇಶವಾದ ವಸಂತಕುಂಜದ ನಿವಾಸಿಗಳು.

ಅವರು ಈ ಮಾತುಗಳನ್ನು ಹೇಳಿದ್ದು ಯಾರಿಗೆ? “ನಿಮ್ಮ ಟ್ಯಾಂಕಿನಿಂದ ನೀರು ಉಕ್ಕಿ ಹರಿದು ಪೋಲಾಗುತ್ತಿದೆ. ನಿಮ್ಮ ನೀರಿನ ಪಂಪ್ ಬಂದ್ ಮಾಡಿ” ಎಂದು ವಿನಂತಿಸಿದ ಶಾಲಾಮಕ್ಕಳಿಗೆ.

ಇದೆಲ್ಲದರ ಹಿನ್ನೆಲೆ ಏನು? ವಸಂತಕುಂಜ ಪ್ರದೇಶದ ನಿವಾಸಿಗಳಿಗೆ ಹಲವು ವರುಷಗಳಿಂದ ನೀರಿನ ಪರದಾಟ ತಪ್ಪಿಲ್ಲ. ಆದರೂ ಹಲವಾರು ಮನೆಗಳವರಿಗೆ ನೀರೆಂದರೆ ಅಸಡ್ಡೆ. ಉದಾಹರಣೆಗೆ ಪಂಪ್ ಚಾಲೂ ಮಾಡಿದರೆ ಓವರ್ಹೆಡ್ ಟ್ಯಾಂಕ್ ತುಂಬಿದೊಡನೆ ನಿಲ್ಲಿಸುತ್ತಿರಲಿಲ್ಲ. ಕುಡಿಯುವ ನೀರು ಗಂಟೆಗಟ್ಟಲೆ ಉಕ್ಕಿ ಹರಿದು ಪೋಲಾಗುತ್ತಿತ್ತು. ಎಪ್ರಿಲ್ ೨೦೦೯ರಲ್ಲಿ ಅಲ್ಲಿನ ಕೆಲವು ಶಾಲಾಮಕ್ಕಳು ಈ ಸಮಸ್ಯೆ ಕೈಗೆತ್ತಿಕೊಂಡರು. ೯೦೦ ಮನೆಗಳಿರುವ ತಮ್ಮ ಕಾಲೊನಿಯಲ್ಲಿ ಜಲಜಾಗೃತಿ ಅಭಿಯಾನ ನಡೆಸಲು ನಿರ್ಧರಿಸಿದರು.

ಮರುದಿನದಿಂದ ಪ್ರತಿ ದಿನ ಬೆಳಗ್ಗೆ ಕಾಲೊನಿಯಲ್ಲಿ ಈ ಶಾಲಾಮಕ್ಕಳ ಸಣ್ಣ ತಂಡಗಳ ದಂಡಯಾತ್ರೆ ಆರಂಭ. ಅದಕ್ಕಾಗಿ ದಿನದಿನವೂ ಆ ಕಾಲೊನಿಯ ಒಂದು ರಸ್ತೆಯ ಆಯ್ಕೆ. ಅಲ್ಲಿ ನಡೆದು ಹೋಗುವಾಗ, ಯಾವುದಾದರೂ ಮನೆಯ ಓವರ್ಹೆಡ್ ಟ್ಯಾಂಕಿನಿಂದ ನೀರು ಉಕ್ಕಿ ಹರಿಯುತ್ತಿದ್ದರೆ, ಆ ಮನೆಯ ಬಾಗಿಲು ತಟ್ಟುತ್ತಿದ್ದರು. ಮನೆಯವರೊಂದಿಗೆ “ನೀರಿನ ಕೊರತೆ ನಮ್ಮ ಕಾಲೊನಿಯ ಸಮಸ್ಯೆ. ನಿಮ್ಮ ಟ್ಯಾಂಕಿನಿಂದ ನೀರು ಪೋಲಾಗುತ್ತಿದೆ. ನಿಮ್ಮ ಪಂಪ್ ನಿಲ್ಲಿಸಿ” ಎಂದು ವಿನಂತಿಸುತ್ತಿದ್ದರು.

ತಮ್ಮ ಸಾಹಸದ ಬಗ್ಗೆ ಮದರ್ಸ್ ಇಂಟರ್ನ್ಯಾಷನಲ್ ಶಾಲೆಯ ೭ನೇ ತರಗತಿಯ ವಿದ್ಯಾರ್ಥಿ ಸಿದ್ಧಾರ್ಥ ವಾರ್ಷ್ನೇಯ ಹೇಳುತ್ತಾನೆ, “ಅವರಲ್ಲಿ ಕೆಲವರಿಗೆ ತಮ್ಮ ತಪ್ಪು ತಿಳಿಯುತ್ತಿತ್ತು. ಅವರು ತಕ್ಷಣವೇ ಪಂಪ್ ನಿಲ್ಲಿಸುತ್ತಿದ್ದರು. ಆದರೆ ಹಲವರು ನಮ್ಮನ್ನು ಗದರಿಸಿ, ರಪ್ಪನೆ ಬಾಗಿಲು ಮುಚ್ಚುತ್ತಿದ್ದರು.”

ಅವನ ತಮ್ಮ ಕೌಸ್ತುಭನ ಅನುಭವ ಹೀಗಿದೆ: “ಬೇಸಗೆ ರಜೆಯಲ್ಲಿ ಪ್ರತಿ ದಿನ ಬೆಳಗ್ಗೆ ನಮ್ಮ ಜಲಜಾಗೃತಿ ಅಭಿಯಾನ. ಈಗ (ಜುಲೈ ೨೦೦೯ರಲ್ಲಿ) ನಮ್ಮ ಶಾಲೆಗಳು ಪುನರಾರಂಭವಾಗಿವೆ. ಹಾಗಾಗಿ ನಾವೀಗ ಪ್ರತೀ ಭಾನುವಾರ ಹೋಗುತ್ತಿದ್ದೇವೆ. ನಾವು ವಿನಂತಿಸಿದ ನಂತರ ಹತ್ತು ಮನೆಯವರಾದರೂ ಸೋರುತ್ತಿದ್ದ ಟ್ಯಾಂಕ್ ರಿಪೇರಿ ಮಾಡಿಸಿದ್ದಾರೆ.”

ತಮ್ಮ ಅನುಭವಗಳನ್ನು ಆಧರಿಸಿ, ಈ ಶಾಲಾಮಕ್ಕಳು ಜಲಜಾಗೃತಿ ಬಗ್ಗೆ ಒಂದು ಬೀದಿನಾಟಕವನ್ನೇ ರಚಿಸಿದ್ದಾರೆ. ಬಕೆಟ್‌ಗಳನ್ನು ಬಡಿಯುತ್ತಾ ಈ ಬೀದಿನಾಟಕದ ಪ್ರದರ್ಶನವನ್ನೂ ನಡೆಸುತ್ತಿದ್ದಾರೆ. ನಾಟಕದ ಮೊದಲ ಅಂಕದಲ್ಲಿ ಕಾಲೊನಿಯ ಜನರ ಪ್ರತಿಕ್ರಿಯೆಗಳ ಅಭಿನಯ. ಎರಡನೇ ಅಂಕದಲ್ಲಿ, ಒಂದು ವರುಷದ ಬಳಿಕ ಒಂದು ಬಕೆಟ್ ನೀರಿಗಾಗಿ ಕಾಲೊನಿಯ ಜನರು ಜಗಳವಾಡುವ ದೃಶ್ಯ. ಕೊನೆಯ ಅಂಕದಲ್ಲಿ, ಮುಂದೊಂದು ದಿನ ನೀರಿಲ್ಲದೆ ಚಡಪಡಿಸುವ ಜನರು ಚಟಪಟನೆ ಸಾಯುವ ದೃಶ್ಯ.

ಈ ಶಾಲಾಮಕ್ಕಳಿಗೆ ಆರಂಭದಿಂದಲೂ ಮಾರ್ಗದರ್ಶನ ನೀಡಿದವರು “ನಿವಾಸಿಗಳ ಕ್ಷೇಮ ಸಂಘ”ದ ಉಪಾಧ್ಯಕ್ಷರಾದ ಅನುರಾಧ ಮೆಹ್‌ರೋತ್ರ. “ನಾವು ಜಲಜಾಗೃತಿ ಅಭಿಯಾನ ಆರಂಭಿಸಿದಾಗ ಇದ್ದವರು ಕೇವಲ ಐದು ಮಕ್ಕಳು. ಈಗ ಈ ತಂಡದಲ್ಲಿ ಇಪ್ಪತ್ತು

ಶಾಲಾಮಕ್ಕಳಿದ್ದಾರೆ. ನಾವು ಹಿರಿಯರು ಮನೆಮನೆಗೆ ಹೋಗಿ ವಿನಂತಿಸಿದಾಗ ಮನೆಯವರು ರೇಗುತ್ತಿದ್ದರು. ಆದರೆ ಶಾಲಾಮಕ್ಕಳು ವಿನಂತಿಸಿದಾಗ ಸ್ಪಂದಿಸುತ್ತಿದ್ದಾರೆ', ಎನ್ನುತ್ತಾರೆ ಅವರು. ಜುಲೈ ೨೦೦೯ರ ಎರಡನೇ ವಾರದಲ್ಲಿ ನವದೆಹಲಿಗೆ ಹೋಗಿದ್ದಾಗ ಇವನ್ನೆಲ್ಲ ತಿಳಿದುಕೊಂಡೆ.

ಅಂದ ಹಾಗೆ ಜಲಜಾಗೃತಿ ಅಭಿಯಾನದ ಶಾಲಾಮಕ್ಕಳ ತಂಡದ ಹೆಸರು "ಟ್ಯಾಂಕಿ ಟ್ರೂಪರ್ಸ್". ಆ ತಂಡದ ಸದಸ್ಯರೆಲ್ಲರೂ ಈಗ ಜಲಯೋಧರು. ನಿಮ್ಮ ಊರಿನಲ್ಲಿ ಜಲಜಾಗೃತಿಗಾಗಿ ಇಂತಹ ಶಾಲಾಮಕ್ಕಳ ಜಲಯೋಧರ ಸೈನ್ಯ ಕಟ್ಟುವಿರಾ?

## ನೀರುಳಿಸುವ ಪಾಠ ಮನೆಯಲ್ಲೇ ಶುರುವಾಗಲಿ

ಹೈದರಾಬಾದಿಗೆ ಹೋಗಿದ್ದಾಗ, ಮಹಾನಗರದ ಕೇಂದ್ರ ಭಾಗದಲ್ಲಿದ್ದ ಹೋಟೆಲಿನಲ್ಲಿ ತಂಗಿದ್ದೆ. ಅಲ್ಲಿಯ ಬಾತ್‌ರೂಂನ ಬೇಸಿನ್‌ನ ಮೇಲ್ಗಡೆ ಗೋಡೆಯಲ್ಲಿ ದೊಡ್ಡ ಕನ್ನಡಿ. ಅದರ ಪಕ್ಕದಲ್ಲಿ ಕಣ್ಣಿಗೆ ರಾಚುವಂತೆ ಒಂದು ಭಿತ್ತಿಪತ್ರ.

ಆ ಭಿತ್ತಿಪತ್ರದಲ್ಲಿದ್ದ ಮಾಹಿತಿ: "ನೀರು ಬೆಲೆ ಕಟ್ಟಲಾಗದ ಸಂಪತ್ತು. ಅದನ್ನು ಉಳಿಸೋಣ. ದಯವಿಟ್ಟು ಸಹಕರಿಸಿ. ಅದಕ್ಕಾಗಿ ನೀವೇನು ಮಾಡಬಹುದು?

೧) ಹಲ್ಲುಜ್ಜುವಾಗ: ಮಗ್‌ನಲ್ಲಿ ನೀರು ತುಂಬಿಸಿಕೊಂಡು ಹಲ್ಲುಜ್ಜಿ. ಅರ್ಧ ಲೀಟರ್ ನೀರು ಸಾಕು. ಇದರ ಬದಲಾಗಿ ನಳ (ಟ್ಯಾಪ್) ತೆರೆದಿಟ್ಟರೆ, ೫ ನಿಮಿಷಗಳಲ್ಲಿ ೪೫ ಲೀಟರ್ ನೀರು ಹಾಳು.

೨) ಮುಖ ಮತ್ತು ಕೈ ತೊಳೆಯುವಾಗ: ಬಕೆಟಿನಲ್ಲಿ ನೀರು ತುಂಬಿಸಿ, ಆ ನೀರನ್ನು ಮಗ್‌ನಿಂದ ಎತ್ತಿಕೊಂಡು ತೊಳೆಯಿರಿ. ಅರ್ಧ ಲೀಟರ್ ನೀರು ಸಾಕಾಗುತ್ತದೆ. ಇದರ ಬದಲಾಗಿ, ನಳ ತೆರೆದಿಟ್ಟರೆ, ಎರಡೇ ನಿಮಿಷಗಳಲ್ಲಿ ೧೮ ಲೀಟರ್ ನೀರು ಖಾಲಿ.

೩) ಗಡ್ಡ ತೆಗೆಯುವಾಗ: ಮಗ್‌ನಲ್ಲಿ ನೀರು ತುಂಬಿಟ್ಟು ಬಳಸಿದರೆ, ಕಾಲು ಅಥವಾ ಅರ್ಧ ಲೀಟರ್ ನೀರು ಸಾಕು. ಇದರ ಬದಲಾಗಿ, ನಳ ತೆರೆದಿಟ್ಟರೆ, ೫ ನಿಮಿಷಗಳಲ್ಲಿ ೪೫ ಲೀ.ನೀರು ಹಾಳು.

೪) ಷವರ್ನಿಂದ ಸ್ನಾನ ಮಾಡುವಾಗ: ಮೈ ಒದ್ದೆ ಮಾಡಿಕೊಂಡು, ನಳದ ನೀರು ನಿಲ್ಲಿಸಿ, ಸೋಪು ಹಚ್ಚಿಕೊಂಡು, ಅನಂತರ ನಳದ ನೀರಿನಿಂದ ಮೈ ತೊಳೆದುಕೊಂಡರೆ ೨೦ ಲೀಟರ್ ನೀರು ಸಾಕು. ಇದರ ಬದಲಾಗಿ, ಷವರ್ನಿಂದ ಅಷ್ಟು ಹೊತ್ತೂ ನೀರು ಸುರಿಯುತ್ತಿದ್ದರೆ, ೧೦ ನಿಮಿಷಗಳಲ್ಲಿ ೧೦೦ ಲೀಟರ್ ನೀರು ಖಾಲಿ.

೫) ಟಬ್‌ನಲ್ಲಿ ಸ್ನಾನ: ಇದರ ಬದಲಾಗಿ ಷವರ್ನಿಂದ ಸ್ನಾನ ಮಾಡುವಿರಾ? ಯಾಕೆಂದರೆ, ಒಮ್ಮೆ ಟಬ್ ಭರ್ತಿ ಮಾಡಲು ೧೧೦ ಲೀಟರ್ ನೀರು ಬೇಕು. ಎರಡು ಸಲ ಭರ್ತಿ ಮಾಡಬೇಕಾದರೆ ೨೨೦ ಲೀಟರ್ ನೀರು ಅಗತ್ಯ.

೬) ನೀರು ಲೀಕ್ ಆಗುತ್ತಿದ್ದರೆ……. ತಕ್ಷಣ ನಮಗೆ ತಿಳಿಸಿ. ಅದನ್ನು ಹಾಗೇ ಬಿಟ್ಟರೆ ಎಂತಹ ನಷ್ಟ ಗೊತ್ತೇ? ಹನಿಹನಿ ನೀರು ನಿಧಾನವಾಗಿ ಬೀಳುತ್ತಿದ್ದರೆ, ಒಂದು ದಿನಕ್ಕೆ ೪೦೦ ಲೀಟರ್ ನೀರು ಹಾಳು, ಅದೇ ಹನಿಹನಿ ನೀರು ವೇಗವಾಗಿ ಬೀಳುತ್ತಿದ್ದರೆ, ದಿನಕ್ಕೆ ೩,೦೦೦ ಲೀಟರ್ ನೀರು ಹಾಳು."

ಈ ನೀರುಳಿಸುವ ಪಾಠ ನಮ್ಮ ಕಣ್ಣು ತಪ್ಪಲು ಸಾಧ್ಯವೇ ಇಲ್ಲ. ಯಾಕೆಂದರೆ ಬಾತ್‌ರೂಂನ ಕನ್ನಡಿಯೆದುರು ನಿಂತಾಗೆಲ್ಲ ಅದು ನಮ್ಮ ಕಣ್ಣು ಕುಕ್ಕುತ್ತದೆ. ಹತ್ತರಲ್ಲಿ ಒಬ್ಬರು ಈ ಸಲಹೆಗಳನ್ನು ಅನುಸರಿಸಿದರೂ ಸಾಕು, ೩೦೦ ರೂಂಗಳಿರುವ ಆ ಹೋಟೆಲಿನಲ್ಲಿ ಭಾರೀ ನೀರಿನ ಉಳಿತಾಯ.

ಒಂದು ಹೋಟೆಲಿನಲ್ಲಿಯೇ ಗ್ರಾಹಕರಿಗೆ ಈ ರೀತಿ ನೀರಿನ ಪಾಠ ಕಲಿಸುತ್ತಿರುವಾಗ, ನಮ್ಮ ಮನೆಗಳಲ್ಲಿ ಮಕ್ಕಳಿಗೆ ಎಷ್ಟೆಲ್ಲ ನೀರಿನ ಪಾಠ ಕಲಿಸಲು ಸಾಧ್ಯವಿದೆ, ಅಲ್ಲವೇ?

ಹೇಗೆ ಮಾತಾಡಬೇಕು? ಹೇಗೆ ಊಟ ಮಾಡಬೇಕು? ಹೇಗೆ ಉಡುಪು ಹಾಕಿಕೊಳ್ಳಬೇಕು? ಎಂಬುದನ್ನೆಲ್ಲ ಅಪ್ಪಅಮ್ಮ ಮಕ್ಕಳಿಗೆ ಮುತುವರ್ಜಿಯಿಂದ ಕಲಿಸುತ್ತಾರೆ. ಅಷ್ಟೇ ಮುತುವರ್ಜಿಯಿಂದ ನೀರಿನ ಮಿತಬಳಕೆಯನ್ನೂ ಕಲಿಸಿದರೆ ಸಾಕು. ಬಾಲ್ಯದಲ್ಲಿ ಅಪ್ಪ ಅಮ್ಮನಿಂದ ಕಲಿತದ್ದು ಕೊನೆ ತನಕ ಉಳಿಯುತ್ತದೆ, ಅಲ್ಲವೇ?

ಮುಖ ತೊಳೆಯುವಾಗ, ಕೈ ತೊಳೆಯುವಾಗ ಮತ್ತು ಸ್ನಾನ ಮಾಡುವಾಗ ಕೆಲವರಿಗೆ ನಳ ತೆರೆದಿಡುವ ಅಭ್ಯಾಸ, ಅಪ್ಪ ಅಮ್ಮನಿಗೆ ಈ ಅಭ್ಯಾಸ ಇದ್ದರೆ, ಮಕ್ಕಳೂ ಅದನ್ನೇ ಕಲಿಯುತ್ತಾರೆ. ತಮ್ಮ ಜೀವನವಿಡೀ ನೀರು ಪೋಲು ಮಾಡುತ್ತಾರೆ, ಅಲ್ಲವೇ?

ಮೊದಲಾಗಿ, ನಮ್ಮ ನೀರಿನ ಬಳಕೆಯ ಅಭ್ಯಾಸ ಸರಿಪಡಿಸಿಕೊಳ್ಳೋಣ. ಆಗ ನಮ್ಮ ಮಕ್ಕಳಿಗೂ ನೀರಿನ ಮಿತಬಳಕೆ ಕಲಿಸಲು ಸುಲಭ. ಈ ರೀತಿಯಲ್ಲಿ ನೀರುಳಿಸುವ ಪಾಠ ನಮ್ಮನಮ್ಮ ಮನೆಯಲ್ಲೇ ಶುರುವಾಗಲಿ.

## ಜಲಜಾಗೃತಿಗಾಗಿ ಜಾತ್ರೆಗಳಲ್ಲಿ ಮಾಹಿತಿ

ಮಳೆ ಬಾರದೆ ಬರಗಾಲದಿಂದ ಕಂಗೆಟ್ಟಾಗ, ಮಳೆದೇವರನ್ನು ಒಲಿಸಿಕೊಳ್ಳಲಿಕ್ಕಾಗಿ ಕಪ್ಪೆ ಮದುವೆ ಅಥವಾ ಕತ್ತೆ ಮದುವೆ ಮಾಡಿದ ವರದಿಗಳನ್ನು ಪತ್ರಿಕೆಗಳಲ್ಲಿ ಓದಿದ್ದೀರಾ? ಮಳೆಗಾಗಿ ಮನುಷ್ಯರೇ ಎತ್ತುಗಳಂತೆ ಹೊಲ ಉಳುಮೆ ಮಾಡಿದ ವರದಿಗಳನ್ನು ಗಮನಿಸಿದ್ದೀರಾ?

ಇದರ ಬದಲಾಗಿ ಬೇರೇನಾದರೂ ಮಾಡಲು ಸಾಧ್ಯವಿಲ್ಲವೇ? ಖಂಡಿತ ಸಾಧ್ಯವಿದೆ. ಉದಾಹರಣೆಗೆ ಜನರಲ್ಲಿ ಜಲಜಾಗೃತಿ ಪಸರಿಸಬಹುದು. ಅದು ಹೇಗೆ? ಇಲ್ಲಿವೆ ಎರಡು ನಿದರ್ಶನಗಳು.

ಅಕ್ಟೋಬರ್ ೨೦೦೩ರ ಒಂದು ದಿನ, ಮಂಗಳೂರಿನಿಂದ ೨೧ ಕಿಮೀ ದೂರದ ಬಿ.ಸಿ.ರೋಡ್ ಹತ್ತಿರದ ಜೋಡುಮಾರ್ಗದಲ್ಲಿ ಗೃಹಪ್ರವೇಶ ಸಮಾರಂಭ. ಪೂರ್ವಾಹ್ನ ಆಮಂತ್ರಿತರು, ಬಂಧುಗಳು ನೆರೆದಿದ್ದರು. ಅಲ್ಲಲ್ಲಿ ಕುಳಿತು ಮಾತಾಡುತ್ತಿದ್ದರು. ಅಷ್ಟರಲ್ಲಿ ಅಲ್ಲಿ “ನೆಲ ಜಲ ಉಳಿಸುವ ನೂರಾರು ದಾರಿಗಳ” ವರ್ಣಪಾರದರ್ಶಿಕೆಗಳ ಪ್ರದರ್ಶನ ಆರಂಭವಾಯಿತು. ನಡೆಸಿಕೊಟ್ಟವರು “ನೆಲಜಲ ಉಳಿಸಿ” ಆಂದೋಲನದ ನೇತಾರ 'ಶ್ರೀ'ಪಡ್ರೆ.

ಗೃಹಪ್ರವೇಶ ಸಮಾರಂಭದಲ್ಲಿ “ನೆಲಜಲ ಉಳಿಸಿ” ಮಾಹಿತಿ ಕಾರ್ಯಕ್ರಮ ಈ ತನಕ ಕಂಡುಕೇಳಿರದ ಸಂಗತಿ ಅಲ್ಲವೇ? ಆದರೆ ಇದು ಇಂದಿನ ಅಗತ್ಯ ಎಂಬುದನ್ನು ಕಾರ್ಯಕ್ರಮದ ಬಳಿಕ ಅಲ್ಲಿ ಜರಗಿದ ಪ್ರಶ್ನೋತ್ತರವೇ ಸಾಬೀತು ಪಡಿಸಿತು. ಅಲ್ಲಿ ಸೇರಿದ್ದ ೬೦೦ ಜನರಲ್ಲಿ

ಪ್ರಶ್ನೆಗಳನ್ನು ಕೇಳಿ ಕೇಳಿ ವಿಷಯ ತಿಳಿದುಕೊಂಡವರು ಅನೇಕರು. ಅವರೆಲ್ಲರೂ ತಮ್ಮ ತಮ್ಮ ಜಮೀನಿನಲ್ಲಿ, ಮನೆಗಳಲ್ಲಿ ಜಲ ಮರುಪೂರಣ ಮಾಡಲು ಪಣ ತೊಟ್ಟರು.

ವಿನೂತನ ಜಲಜಾಗೃತಿ ಕಾರ್ಯಕ್ರಮ ಏರ್ಪಡಿಸಿದವರು ಮನೆಯೊಡೆಯರಾದ ದಂಪತಿ ಡಾ.ಸುಂದರೇಶ್ ಮತ್ತು ಡಾ. ಜಾನಕಿ. ಇಂತಹ ಐಡಿಯಾ ಹೇಗೆ ಹೊಳೆಯಿತೆಂಬ ಪ್ರಶ್ನೆಗೆ ಸುಂದರೇಶ್ ಅವರ ಉತ್ತರ: "ಇಂತಹ ಸಮಾರಂಭಗಳಲ್ಲಿ ನೂರಾರು ಜನರು ಒಂದೆಡೆ ಸೇರುತ್ತಾರೆ. ಆದರೆ ಊಟದ ತನಕ ಹಾಳುಹರಟೆಯಲ್ಲೇ ಅವರ ಹೊತ್ತು ಕಳೆಯುತ್ತದೆ. ಅದರ ಬದಲಾಗಿ ಉಪಯುಕ್ತ ವಿಷಯವೊಂದನ್ನು ಅತಿಥಿಗಳಿಗೆ ತಿಳಿಸುವ ವ್ಯವಸ್ಥೆ ಮಾಡೋಣ ಅನ್ನಿಸಿತು. ತಟಕ್ಕನೆ ನನಗೆ ನೆನಪಾದದ್ದು ನಾನು ನೋಡಿದ್ದ ಶ್ರೀಪಡ್ರೆಯವರ ನೀರಿನ ಷೋ."

ಹಳ್ಳಿಗಳ, ನಗರಗಳ ಮನೆಮನೆಗಳಲ್ಲಿ ಇಂತಹ ಹಲವಾರು ಸಮಾರಂಭಗಳು ಜರಗುತ್ತಿರುತ್ತವೆ. ಅಲ್ಲೆಲ್ಲ ಈ ಜರೂರು ವಿಷಯದ ಬಗ್ಗೆ ಜನರಿಗೆ ತಿಳಿಸಲು ಒಂದು ತಾಸಿನ ಕಾರ್ಯಕ್ರಮ ನಡೆಸಲು ಸಾಧ್ಯವಿದೆ. ಹೀಗೆ ಒಂದೇ ವರುಷದಲ್ಲಿ ಒಂದೂರಿನ ಅಥವಾ ಒಂದು ಹಳ್ಳಿಯ ಬಹುಪಾಲು ಜನರಲ್ಲಿ ಜಲಜಾಗೃತಿ ಪಸರಿಸಲು ಸಾಧ್ಯ.

ಅದೇ ರೀತಿಯಲ್ಲಿ ಊರಿನ ಜಾತ್ರೆಗಳು ಹಾಗೂ ಉತ್ಸವಗಳು ಜನರಲ್ಲಿ ಜಲಜಾಗೃತಿ ಪಸರಿಸಲು ಉತ್ತಮ ಅವಕಾಶಗಳು. ಇದಕ್ಕೊಂದು ಉದಾಹರಣೆ: ೨೦೦೩ರಲ್ಲಿ ದಕ್ಷಿಣಕನ್ನಡದ ಬೀಡಿನ ಮಜಲಿನ ಆದಿ ಪರಾಶಕ್ತಿ ದೇವಸ್ಥಾನದ ಪ್ರತಿಷ್ಠಾ ಬ್ರಹ್ಮಕಲಶೋತ್ಸವ. ಕನ್ನಡನಾಡಿನಲ್ಲಿ ಜಲಜಾಗೃತಿಗೆ ಹೆಸರಾದ ಇಡ್ಕಿದು ಗ್ರಾಮದಲ್ಲಿ ನೆಲಜಲ ಉಳಿಸಿ ಆಂದೋಲನಕ್ಕೆ ಚಾಲನೆ ನೀಡಿದ್ದು ಅಮೃತ ಸಿಂಚನ ರೈತರ ಸೇವಾ ಒಕ್ಕೂಟ. ಆ ಉತ್ಸವದ ಪೆಂಡಾಲಿನಲ್ಲಿ ಗ್ರಾಮದ ಜಲ ಮರುಪೂರಣದ ವ್ಯವಸ್ಥೆಗಳ ಬಗ್ಗೆ ಒಕ್ಕೂಟವು ಪ್ರದರ್ಶನ ನಡೆಸಿತು. ಅದಕ್ಕಾಗಿ ಗೊಂಬೆಮನೆಗಳು, ಪ್ಲಾಸ್ಟಿಕ್ ಪೈಪುಗಳು (ಕೊಳವೆಬಾವಿಗಳು) ಹಾಗೂ ರಿಬ್ಬನ್ (ತೋಡು, ರಸ್ತೆ)ಗಳಿಂದ ಮಾದರಿ ರಚಿಸಿದ್ದರು. ಚಾವಣಿ ನೀರಿನ ಸಂಗ್ರಹ - ಮರುಬಳಕೆ ಮತ್ತು ಜಲ ಮರುಪೂರಣದ ಅಗತ್ಯ - ಇದು ಆ ಪ್ರದರ್ಶನದ ಮುಖ್ಯ ಸಂದೇಶ. ಇಡ್ಕಿದು ಗ್ರಾಮದಲ್ಲಿ ಇನ್ನಷ್ಟು ಕುಟುಂಬಗಳು ಆಂದೋಲನದಲ್ಲಿ ಭಾಗವಹಿಸಲು ಈ ಪ್ರದರ್ಶನವು ಪ್ರೇರಣೆ ನೀಡಿತು.

ಜಲಜಾಗೃತಿ ಈಗ ತುರ್ತಾಗಿ ಆಗಬೇಕಾದ ಕೆಲಸ. ಒಂದೊಂದು ಊರಿನಲ್ಲಿ ಒಬ್ಬರು ಮುತುವರ್ಜಿ ವಹಿಸಿದರೂ ಸಾಕು - ಒಂದೆರಡು ವರುಷಗಳಲ್ಲಿ ಊರಿನ ಬಹುಪಾಲು ಜನರಲ್ಲಿ ಜಲಜಾಗೃತಿ ಪಸರಿಸಲು ಸಾಧ್ಯ. ಅದಕ್ಕಾಗಿ ಈಗ ಮಾಹಿತಿಗಂತೂ ಕೊರತೆಯಿಲ್ಲ. ನೀರಿನ ಮಿತಬಳಕೆ, ಮಳೆನೀರ ಕೊಯ್ಲು ಹಾಗೂ ನೀರಿನ ಸಂರಕ್ಷಣೆ ಬಗ್ಗೆ ಹಲವು ಪುಸ್ತಕಗಳು ಲಭ್ಯ. ಹಲವರ ಅನುಭವಗಳೂ ಲಭ್ಯ. "ಇಂಡಿಯಾ ವಾಟರ್ ಪೋರ್ಟಲ್"ನಲ್ಲಿಯಂತೂ ಇದೆಲ್ಲ ಮಾಹಿತಿ ತುಂಬಿದೆ. ಇವನ್ನೆಲ್ಲ ಬಳಸಿ ಜಲಜಾಗೃತಿ ಪಸರಿಸೋಣ, ಬನ್ನಿ.

## ಇಂಗುಗುಂಡಿಗಳ ಇಂದ್ರಜಾಲ, ಅಂತರ್ಜಲದ ಅಂತರಜಾಲ

ಅಂದು ಪ್ರಸನ್ನರ ಮಾಗಡಿ ಮನೆಯಿಂದ ತೋಟಕ್ಕೆ ನಡೆದು ಹೊರಟಾಗ ಕತ್ತಲಾಗಲು ಇನ್ನೂ ಒಂದು ತಾಸಿತ್ತು. ಆಗಷ್ಟೇ ಕುಡಿದಿದ್ದ ಕಾಫಿಯ ಘಮದ ಗುಂಗಿನಲ್ಲಿ ಅವರ ಕಾಫಿ ತೋಟದತ್ತ ಹೆಜ್ಜೆ ಹಾಕಿದೆವು. ಮನೆಯೆದುರಿನ ಗೇಟು ದಾಟಿ, ಬೇಲೂರು ರಸ್ತೆಗೆ ಬಂದಾಗ ಪಕ್ಕದಲ್ಲಿರುವ ಹಲಸುಲಿಗೆ ಬಸ್‌ಸ್ಟಾಪ್ ತೋರಿಸುತ್ತಾ ಪ್ರಸನ್ನ ಹೇಳಿದರು, "ಇಲ್ಲಿಂದ ಸಕಲೇಶಪುರ ಬಹಳ ಹತ್ತಿರ, ಐದೇ ಕಿಲೋಮೀಟರ್". ಬೇಲೂರು ರಸ್ತೆ ಹಾದು, ಅದರಾಚೆಗಿನ ಪ್ರಸನ್ನರ ಐದೆಕ್ರೆ ರೊಬಸ್ಟ ಕಾಫಿ ತೋಟ ತಲಪಿದೆವು.

ಅಲ್ಲಿ ಇಳಿಜಾರಿಗೆ ಅಡ್ಡವಾಗಿ ಸಾಲುಸಾಲಾಗಿ ೧೦ ಅಡಿಗಳ ಅಂತರದಲ್ಲಿ ತೋಡಿದ್ದ ಇಂಗುಗುಂಡಿಗಳನ್ನು ತೋರಿಸಿದರು ಪ್ರಸನ್ನ. ಹೊಸದಾಗಿ ತೋಟ ಮಾಡಿದ ಆರಂಭದ ವರುಷಗಳಲ್ಲಿ ಮಳೆ ಬಂದಾಗ ಅವರ ತೋಟದಿಂದ ಮಳೆನೀರು ರಭಸದಿಂದ ತೊರೆಯಾಗಿ ಹೊರಕ್ಕೆ ಹರಿಯುತ್ತಿತ್ತು. ಈಗ ಮಳೆ ಬಂದರೆ ಒಂದು ಹನಿ ನೀರೂ ಹೊರಕ್ಕೆ ಹರಿದು ಹೋಗುತ್ತಿಲ್ಲ. “ಇದು ಇಂಗುಗುಂಡಿಗಳ ಇಂದ್ರಜಾಲ” ಎನ್ನುತ್ತಲೇ ಪ್ರಸನ್ನ ಅದರ ಗುಟ್ಟು ರಟ್ಟು ಮಾಡಿದರು. ಜೂನ್‌ನಲ್ಲಿ ಮಳೆ ಶುರು ಆಗುವಾಗ, ಇಂಗುಗುಂಡಿಗಳ ಕಸಕಡ್ಡಿ ತೆಗೆದು, ಅವನ್ನು ನೀರಿಂಗಿಸಲು ತಯಾರು ಮಾಡಬೇಕು. ನವಂಬರ್‌ನಲ್ಲಿ ಇಂಗುಗುಂಡಿಗಳಿಗೆ ಪುನಹ ಕಸಕಡ್ಡಿ ತುಂಬಿ ಅವುಗಳಿಂದ ನೀರು ಆವಿಯಾಗದಂತೆ ಮಾಡಬೇಕು. ಇದರ ಪೇಟೆಂಟ್ ತಮ್ಮ ಹಳೆಯ ತಲೆಮಾರುಗಳ ಹಿರಿಯರದ್ದು ಎನ್ನಲು ಮರೆಯಲಿಲ್ಲ ಪ್ರಸನ್ನ.

ರೊಬಸ್ಟ ಕಾಪಿ ತೋಟದ ಗುಡ್ಡವಿಳಿದಾಗ ಕಂಡದ್ದು ವಿಸ್ತಾರವಾದ ಹತ್ತೆಕ್ರೆ ಸಮತಟ್ಟು ಪ್ರದೇಶ. ಪ್ರಸನ್ನ ಅದನ್ನು ಖರೀದಿಸುವಾಗ ಅದು ಭತ್ತದ ಗದ್ದೆಯಾಗಿತ್ತು. ಈಗ ಅಲ್ಲಿ ಅಡಿಕೆ ಗಿಡಗಳು.

ನಡೆಯುತ್ತ ಮುಂದೆ ಸಾಗಿ ನಾವು ತೋಟದ ಅಂಚಿಗೆ ಬಂದೆವು. ಅಲ್ಲಿ ದೊಡ್ಡ ಕೆರೆ. ಅದರಲ್ಲಿ ಹತ್ತಡಿ ನೀರು. ಹಳೆಯ ದಿನಗಳನ್ನು ನೆನೆಯುತ್ತಾ ಕೇವಲ ಇಪ್ಪತ್ತು ದಿನಗಳಲ್ಲಿ ಆ ಕೆರೆ ತೋಡಿಸಿದ್ದನ್ನು ಪ್ರಸನ್ನ ನೆನಪು ಮಾಡಿಕೊಂಡರು. “ಇಲ್ಲಿ ಮನೆ ಕಟ್ಟುವ ಮುಂಚೆನೇ ಕೆರೆ ತೋಡಿಸಿದೆ. ನೋಡಿದ್ರಲ್ಲ, ನನ್ನ ತೋಟದ ನಡುವೆ ಬೇಲೂರು ರಸ್ತೆ ಹಾದು ಹೋಗ್ತದೆ. ಅದರ ಎರಡೂ ಬದಿ ನನ್ನ ಈ ಗುಡ್ಡದ ಜಮೀನು. ಇದ್ರಲ್ಲಿ ಕಾಫಿ ಗಿಡ ಬೆಳೆಸೋದಕ್ಕೆ ನೀರು ಬೇಕೇ ಬೇಕು. ಎಲ್ಲಿಂದ ತರೋದು ನೀರು? ಮಳೆನೀರನ್ನೇ ಸಂಗ್ರಹಿಸಬೇಕಾಗಿತ್ತು. ಅದಕ್ಕಾಗಿ ಕೆರೆ ತೋಡಿಸಿದ್ದು. ಪ್ರೋಕ್‌ಲೈನ್ ಮೆಷೀನ್ ತರಿಸಿ, ಇಪ್ಪತ್ತೇ ದಿನದಲ್ಲಿ ಈ ಕೆರೆ ಮಾಡಿಸಿದೆ. ನನಗೆ ಖರ್ಚಾದದ್ದು ೨ ಲಕ್ಷ ೮೦ ಸಾವಿರ ರೂಪಾಯಿ. ಒಂದು ಮಾತಂತೂ ನಿಜ, ಕೆರೆ ತೋಡಿಸಿದ್ದರಿಂದ ಈ ತೋಟ ಆಯ್ತು” ಎಂದು ವಿವರಿಸಿದರು ಪ್ರಸನ್ನ.

ಆ ಕೆರೆಯ ಉದ್ದ ೧೫೦ ಅಡಿ, ಅಗಲ ೧೫೦ ಅಡಿ, ಆಳ ೨೦ ಅಡಿ. ಅದರಿಂದ ನೀರೆತ್ತಲು ೧೦ ಹೆಚ್‌ಪಿ ಡೀಸಿಲ್ ಪಂಪಿದೆ. ಮೇ ತಿಂಗಳ ತನಕ ಅದರಿಂದ ಹೇಗೋ ನಿಭಾಯಿಸುತ್ತಾರೆ. ಮಳೆಗಾಲದಲ್ಲಿ ತನ್ನ ಜಮೀನಿನಿಂದ ಹರಿದು ಬರುವ ನೀರನ್ನೆಲ್ಲ ಆ ಕೆರೆಗೇ ತಿರುಗಿಸಿ ಬಿಡುತ್ತಾರೆ ಪ್ರಸನ್ನ. ಕೆರೆಯಿಂದ ನೀರು ಹಾಯಿಸಲು ತೋಟದ ಉದ್ದಗಲದಲ್ಲಿ ನೆಲದಡಿ ಪೈಪ್ ಹಾಯಿಸಿದ್ದಾರೆ. ಆ ಪೈಪ್ ಜಾಲದಲ್ಲಿ ಅಲ್ಲಲ್ಲಿ ಔಟ್‌ಲೆಟ್ ಇರಿಸಿದ್ದಾರೆ. ಅವಕ್ಕೆ ಸ್ಪ್ರಿಂಕ್ಲರ್ ಜೋಡಿಸಿ ತೋಟಕ್ಕೆ ನೀರು ಹಾಯಿಸುತ್ತಾರೆ.

ನೆಲದಡಿಯ ಪೈಪಿನ ಜಾಲಕ್ಕೆ ಒಂದು ಕೊಳವೆಬಾವಿಯಿಂದ ಮತ್ತು ಒಂದು ತೆರೆದ ಬಾವಿಯಿಂದ ನೀರು ಪಂಪ್ ಮಾಡುವ ವ್ಯವಸ್ಥೆ ಇದೆ. ಕೊಳವೆಬಾವಿಯಿಂದ ನೀರೆತ್ತಲು ಸಬ್‌ಮರ್ಸಿಬಲ್ ಪಂಪ್. ಆರಂಭದ ೩ ವರುಷಗಳಲ್ಲಿ ದಿನವೂ ಕೊಳವೆಬಾವಿಯಿಂದ ನೀರೆತ್ತಿ ಕೆರೆಗೆ ಬಿಡುತ್ತಿದ್ದರು ಪ್ರಸನ್ನ. ಆದರೆ ಕಳೆದ ೩ ವರುಷಗಳಿಂದ ಹಾಗೆ ಮಾಡಿಲ್ಲ. ಯಾಕೆಂದು ಕಾರಣ ಕೇಳುವ ಮುನ್ನ ಪ್ರಸನ್ನ ಹೇಳಿದ್ದು, “ಯಾಕೆಂದರೆ ನೆಲದಾಳದ ನೀರು ದೋಚಬಾರದು. ಅದು ನಮ್ಮ ಆಪತ್‌ಧನ”

ಮಣಿಪಾಲದ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಪೂರೈಸಿದ ಬಳಿಕ ಬೆಂಗಳೂರಿನಲ್ಲಿ ಇಪ್ಪತ್ತು ವರುಷ ಪ್ರಿಂಟಿಂಗ್ ಪ್ರೆಸ್ ನಡೆಸಿದವರು ಪ್ರಸನ್ನ ಎಮ್. ಬಿಟ್ಟೇಶ್ವರ. ಕೊನೆಗೆ ಅದೆಲ್ಲ ಸಾಕೆಂದು ಸಕಲೇಶಪುರದ ಹತ್ತಿರ ೨೦ ಎಕ್ರೆ ಜಮೀನು ಖರೀದಿಸಿ, ಹಳ್ಳಿಗೆ ಬಂದು ನೆಲೆಸಿದವರು. ಹಾಗಾಗಿ ಅವರಿಗೆ ಗೊತ್ತು ನೀರಿನ ಬೆಲೆ, ಅಂತರ್ಜಲದ ಬೆಲೆ. ನಮಗೆಲ್ಲ ಅದು ಎಂದು ಗೊತ್ತಾದೀತು?

# ಅತ್ಯಧಿಕ ಮಳೆ ಸುರಿದರೂ ನೀರಿಗೆ ತತ್ವಾರ

ಅದೊಂದು ಕಾಲವಿತ್ತು. ಜಗತ್ತಿನಲ್ಲಿ ಬೇರೆಲ್ಲಿಯೂ ಸುರಿಯದಷ್ಟು ಮಳೆ ಮೇಘಾಲಯದ ಚಿರಾಪುಂಜಿಯಲ್ಲಿ ಸುರಿಯುತ್ತಿತ್ತು. ಅದಕ್ಕೇ ಚಿರಾಪುಂಜಿಯ ಹೆಸರು ಗಿನ್ನೆಸ್ ರೆಕಾರ್ಡ್ ಪುಸ್ತಕದಲ್ಲಿ ದಾಖಲಾಗಿದೆ: ಒಂದು ಕ್ಯಾಲೆಂಡರ್ ವರುಷದಲ್ಲಿ ಜಗತ್ತಿನಲ್ಲಿ ಅತ್ಯಂತ ಜಾಸ್ತಿ ಮಳೆ ಬಿದ್ದ ಸ್ಥಳ - ಚಿರಾಪುಂಜಿ. ಆಗಸ್ಟ್ ೧೮೮೦ರಿಂದ ಜುಲೈ ೧೮೮೧ರ ವರೆಗೆ ಬಿದ್ದ ಮಳೆ ೨೨,೯೮೭ ಮಿಮೀ. ಗಿನ್ನೆಸ್ ಪುಸ್ತಕದಲ್ಲಿ ಇನ್ನೊಂದು ದಾಖಲೆಯೂ ಚಿರಾಪುಂಜಿಯ ಹೆಸರಿನಲ್ಲಿದೆ: ಒಂದೇ ದಿನದಲ್ಲಿ ಅತ್ಯಧಿಕ ಮಳೆ ಬಿದ್ದ ಸ್ಥಳ ಅದು. ೧೯೭೪ರ ಅದೊಂದು ದಿನ ಪ್ರಳಯವಾದಂತೆ ಮಳೆ ಹೊಯ್ದಿತ್ತು - ೨,೪೫೫ ಮಿಮೀ.

“ಹೌದು, ಅದೊಂದು ಕಾಲವಿತ್ತು. ಮಳೆ ಶುರುವಾಯಿತೆಂದರೆ ಆಕಾಶವೇ ಕಳಚಿ ಬಿದ್ದಂತೆ ಮಳೆ ಹೊಯ್ಯುತ್ತಿತ್ತು. ಮೂರು ದಿನ ಸುರಿದರೂ ಮಳೆ ನಿಲ್ಲದಿದ್ದರೆ, ಅದು ಒಂಭತ್ತು ದಿನಗಳ ವರೆಗೆ ಎಡೆಬಿಡದೆ ಸುರಿಯುವ ಮಳೆ ಎಂದು ನಮಗೆ ಗೊತ್ತಾಗುತ್ತಿತ್ತು. ಆಗ ಮುಂದಿನ ಬೆಳೆಗಾಗಿ ಹೊಲಗಳಲ್ಲಿ ನೆಡುವ ಕೆಲಸ ಶುರು ಮಾಡುತ್ತಿದ್ದೆವು” ಎಂದು ನೆನಪು ಮಾಡಿಕೊಳ್ಳುತ್ತಾರೆ, ೭೫ ವರುಷಗಳ ಮುದುಕ.

ಚಿರಾಪುಂಜಿಯಿಂದ ಕೆಲವು ಕಿಮೀ ದೂರದ ಹಳ್ಳಿ ಟಿರ್ನಾದಲ್ಲಿ ತನ್ನ ಬಾಲ್ಯದ ದಿನಗಳಲ್ಲಿ ಹಾಗೆ ಮಳೆ ಹೊಯ್ಯುತ್ತಿದ್ದ ನೆನಪುಗಳು ಅವನಲ್ಲಿ ಮಾಸಿಲ್ಲ. ಆಗ ಮಳೆಗಾಲದಲ್ಲಿ ಕಿತ್ತಳೆ, ಗೆಣಸು, ವೀಳ್ಯದೆಲೆ ಬಳ್ಳಿ, ಕಾಫಿ ಗಿಡಗಳು, ಕೇನೆ ಗೆಡ್ಡೆಗಳು ಇವನ್ನೆಲ್ಲ ನೆಡುತ್ತಿದ್ದರಂತೆ. “ಆಗ ನಮಗೆ ಈಗಿನಂತೆ ಆಹಾರದ ಚಿಂತೆ ಇರಲಿಲ್ಲ. ಈಗ ಎಲ್ಲವೂ ತಲೆಕೆಳಗಾಗಿದೆ,” ಎನ್ನುತ್ತಾನೆ ಆ ಹಿರಿಯ ಆಕಾಶ ದಿಟ್ಟಿಸುತ್ತಾ.

ಹೌದು, ಈಗ ಎಲ್ಲವೂ ತಲೆಕೆಳಗಾಗಿದೆ. ಗೌಹಾತಿಯ ಪ್ರಾದೇಶಿಕ ಹವಾಮಾನ ಕೇಂದ್ರದ ದಾಖಲೆಗಳ ಪ್ರಕಾರ, ಕಳೆದ ದಶಕದಲ್ಲಿ ಚಿರಾಪುಂಜಿಯ ವಾರ್ಷಿಕ ಸರಾಸರಿ ಮಳೆ ಪ್ರಮಾಣ ೧೧,೦೭೦ ಮಿಮೀ. ೨೦೦೯ರಲ್ಲಿ ಬಿದ್ದ ಮಳೆ ಕೇವಲ ೮,೭೩೦ ಮಿಮೀ. ಅಂದರೆ ಸರಾಸರಿ ಮಳೆಗಿಂತಲೂ ಶೇಕಡಾ ೩೫ ಕಡಿಮೆ.

ಚಿರಾಪುಂಜಿಯಲ್ಲಿ ಜೂನಿನಿಂದ ಸಪ್ಟಂಬರ್ ವರೆಗೆ ಮಳೆಗಾಲ. ಬಂಗಾಳ ಕೊಲ್ಲಿಯಿಂದ ಬಾಂಗ್ಲಾದೇಶ ಹಾದು ಬರುವ ಮುಂಗಾರು ಮಾರುತಗಳ ಬಿರುಸು ಜೋರು. ಯಾಕೆಂದರೆ, ಬಾಂಗ್ಲಾದೇಶದಲ್ಲಿ ಪರ್ವತಗಳಿಲ್ಲ. ಹಾಗಾಗಿ ಮಳೆಮೋಡಗಳ ತೇವಾಂಶದ ಬಹುಪಾಲು ಮೇಘಾಲಯದ ಪರ್ವತಗಳ ಮೇಲೆಯೇ ಬೀಳುತ್ತದೆ. ಆದರೂ ೭೦,೦೦೦ ಜನಸಂಖ್ಯೆಯಿರುವ ಚಿರಾಪುಂಜಿಯಲ್ಲಿ ವರುಷದಿಂದ ವರುಷಕ್ಕೆ ಮಳೆ ಕಡಿಮೆಯಾಗುತ್ತಿದೆ. ಇತ್ತೀಚೆಗಿನ ವರುಷಗಳಲ್ಲಿ ಬೇಸಗೆಯಲ್ಲಿ ಅಲ್ಲಿ ನೀರಿಗೆ ತತ್ವಾರ.

ಯಾಕೆ ಹೀಗಾಯಿತು? ಚಿರಾಪುಂಜಿಯ ಬೆಟ್ಟಗಳ ಕಾಡುಗಳನ್ನು ಕಡಿದು ನಾಶ ಮಾಡಿದ್ದರಿಂದಾಗಿ. ಅಲ್ಲಿ ಬೀಳುವ ಮಳೆಯ ರಭಸ ತಗ್ಗಿಸಲು ಮತ್ತು ಬಿದ್ದ ಮಳೆ ನೀರಿಂಗಿಸಲು ನೆರವಾಗಲು ಅಲ್ಲಿ ಮರಗಳೇ ಇಲ್ಲ. ಅಲ್ಲಿ ಬೀಳುವ ಮಳೆ ಕಡಿಮೆಯೇನಲ್ಲ. ಆದರೆ ಅದೆಲ್ಲವೂ ಬೆಟ್ಟಗುಡ್ಡಗಳಿಂದ ರಭಸವಾಗಿ ಇಳಿದು ಪಕ್ಕದ ಬಾಂಗ್ಲಾದೇಶಕ್ಕೆ ಹರಿದು ಹೋಗುತ್ತದೆ. ಮಳೆಗಾಲದಲ್ಲಿ ಪರ್ವತಗಳಿಂದ ಇಳಿದು ಬರುವ ಹಲವಾರು ನೀರಿನ ತೊರೆಗಳು ಚಳಿಗಾಲದಲ್ಲಿಯೇ ಬತ್ತಿ ಹೋಗುತ್ತವೆ.

ಅಲ್ಲಿ ಈಗ ನೀರಿಗೆ ಎಂತಹ ತತ್ವಾರ? ಕೆಲವು ಸ್ಥಳಗಳಲ್ಲಿ ಸರಕಾರ (೨೫ ವರುಷಗಳ ಮುಂಚೆ) ಹಾಕಿದ ಪೈಪುಗಳಿಂದ ಕುಡಿಯುವ ನೀರು ತರಲಿಕ್ಕಾಗಿ ಜನ ಕೆಲವು ಕಿಲೋಮೀಟರ್ ನಡೆದು ಹೋಗುತ್ತಾರೆ. ಆ ನೀರೂ ಶುದ್ಧವಾಗಿಲ್ಲ.

ನೀರಿನ ಕೊರತೆಯಿಂದಾಗಿ ಅಲ್ಲಿ ಕೃಷಿಯೂ ಕ್ಷೀಣಿಸುತ್ತಿದೆ. ಜನರು ಕೃಷಿ ತೊರೆದು ಕಲ್ಲಿದ್ದಲು, ಸುಣ್ಣದ ಕಲ್ಲಿನ ಗಣಿಗಳಲ್ಲಿ ಹಾಗೂ ಕಲ್ಲಿನ ಕ್ವಾರಿಗಳಲ್ಲಿ ದಿನಗೂಲಿಗೆ ದುಡಿಯುತ್ತಿದ್ದಾರೆ. ಜನಸಾಮಾನ್ಯರ ಬದುಕೇ ಬಿಗಡಾಯಿಸುತ್ತಿದೆ. ಇವೆಲ್ಲದರ ನಡುವೆ ಅಲ್ಲಿನ ಜನರೀಗ ತಮ್ಮ

ಊರಿಗೆ ಬ್ರಿಟಿಷರಿತ್ತ ಚಿರಾಪುಂಜಿ ಎಂಬ ಹೆಸರನ್ನೇ ತೊರೆದಿದ್ದಾರೆ. ತಮ್ಮೂರನ್ನು ಸೊಹ್‌ರಾ ಎಂಬ ಪುರಾತನ ಹೆಸರಿನಿಂದಲೇ ಕರೆಯುತ್ತಿದ್ದಾರೆ - ಹಳೆಯ ನೆನಪುಗಳನ್ನು ಜೀವಂತವಾಗಿಡಲೋ ಎಂಬಂತೆ.

ಹೇಗಿದ್ದ ಸೊಹ್‌ರಾ ಹೇಗಾಯಿತು! ಸಂಪನ್ನ ಮಳೆ ಮತ್ತು ಶುದ್ಧ ಮಳೆನೀರು - ಇವು ಈಗಲೂ ಸೊಹ್‌ರಾಕ್ಕೆ ಭೂಮಿಯ ಕೊಡುಗೆ. ಆದರೆ ಅಲ್ಲಿನ ಜನ ಕೈಗೆ ಬಂದ ಭಾಗ್ಯ ಕೈಬಿಟ್ಟು ಬಳಲುತ್ತಿದ್ದಾರೆ.

ನಮ್ಮ ನಮ್ಮ ಊರುಗಳಲ್ಲಿಯೂ ಹೀಗಾಗುತ್ತಿದೆಯೇ? ಒಮ್ಮೆ ಯೋಚಿಸಿ. ಮಳೆ ನೀರು ಆಕಾಶದಿಂದ ಬೀಳುವ ಭಾಗ್ಯ. ನಮ್ಮ ಜಾಗದಲ್ಲಿ ಬೀಳುವ ಮಳೆಯ ಹನಿಹನಿಯನ್ನೂ ಕೊಯ್ಲು ಮಾಡುವ, ಮಳೆ ನೀರಿಂಗಿಸುವ ವ್ಯವಸ್ಥೆ ಮಾಡಿದ್ದೇವೆಯೇ? ನಿಮಗೆ ನೀವೇ ಕೇಳಿಕೊಳ್ಳಿ. ಅತ್ಯಧಿಕ ಮಳೆ ಬೀಳುತ್ತಿದ್ದ ಸೊಹ್‌ರಾದಲ್ಲಿ ಈಗ ನೀರಿಗೆ ತತ್ವಾರ. ಇನ್ನಾದರೂ ನಾವು ಪಾಠ ಕಲಿಯಬೇಡವೇ?

## ಜಲಜಾಗೃತಿಗೆ ಹಳ್ಳಿಗೊಬ್ಬ ಸಾಕು

"ನಿನ್ನದು ಕೆರೆ ಹತ್ತಿರದ ಜಮೀನು. ಬೋರ್‌ವೆಲ್ ಹಾಕ್ಸು. ಬಾಳೆ ಮತ್ತು ಟೊಮೆಟೊ ಬೆಳೆಸಿ, ಚೆನ್ನಾಗಿ ದುಡ್ಡು ಮಾಡು" ಎಂದು ತನಗೆ ಹಳ್ಳಿಯಲ್ಲಿ ಹಲವರು ಉಪದೇಶ ಮಾಡಿದ್ದನ್ನು ನೆನೆಯುತ್ತಾರೆ ಬಿ. ಎಲ್. ಶೋಬನಬಾಬು. ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಪಾಸಾದದ್ದು ೧೯೮೮ರಲ್ಲಿ. ಸಂಬಳದ ಕೆಲಸಕ್ಕೆ ಹೋಗಬೇಕೆಂದು ಅವರಿಗೆ ಅನಿಸಲಿಲ್ಲ. 'ತಂದೆ ಲಕ್ಷ್ಮಣ ಶೆಟ್ಟಿಯವರ ಪಾಲಿಗೆ ಬಂದ ೧೨ ಎಕ್ರೆ ಜಮೀನಿದೆ. ಅಲ್ಲೇ ಕೆಲಸ ಮಾಡಿದರಾಯಿತು' ಎಂಬ ಯೋಚನೆಯಿಂದ ತನ್ನ ಹಳ್ಳಿ ಎಸ್. ಬಿದರೆಗೆ ಮರಳಿದರು.

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಸಖರಾಯಪಟ್ಟಣ ಹೋಬಳಿಯ ಹಳ್ಳಿ ಎಸ್. ಬಿದರೆ. ಅಲ್ಲಿಗೆ ತಲಪಲು ಚಿಕ್ಕಮಗಳೂರಿನಿಂದ ಹೊರಟು, ಮಾಗಡಿ ಮತ್ತು ಕಳಸಾಪುರ ದಾಟಿ ೩೬ ಕಿಮೀ ದೂರ ಸಾಗಬೇಕು. ಹಳ್ಳಿಗೆ ಮರಳಿದ ಶೋಬನಬಾಬುವಿಗೆ ಹಲವರು ಅದೇ ರೀತಿ ಉಪದೇಶ ಮಾಡುತ್ತಿದ್ದಾಗ ಅವರು ಕೈಗೊಂಡ ನಿರ್ಧಾರವನ್ನು ಅವರ ಮಾತಿನಲ್ಲೇ ಕೇಳಿ, "ಇನ್ನೊಂದು ಬೋರ್‌ವೆಲ್ ಕೊರೆಸಬಾರದು; ಮಳೆನೀರಿನಿಂದ ಮತ್ತು ಈಗಿರುವ ಬೋರ್‌ವೆಲ್‌ನ ನೀರಿನಿಂದಲೇ ಬೇಸಾಯ ಮಾಡಬೇಕೆಂದು ನಿರ್ಧರಿಸಿದೆ."

ಈ ಯುವಕ ತನ್ನ ನಿರ್ಧಾರಕ್ಕೆ ಅನುಗುಣವಾಗಿ ಬೇಸಾಯ ಮಾಡಿಕೊಂಡಿದ್ದಾಗ ಬರಸಿಡಿಲಿನಂತೆ ಬಂದೆರಗಿತು ಬರಗಾಲ. ಒಂದಲ್ಲ, ಎರಡಲ್ಲ, ಸತತ ೩ ವರುಷಗಳ ಬರಗಾಲ. ೨೦೦೧ರಿಂದ ೨೦೦೪ರ ವರೆಗೆ ಎಸ್. ಬಿದರೆ ಹಳ್ಳಿಗೂ ಶೋಬನಬಾಬುವಿಗೂ ಅಗ್ನಿಪರೀಕ್ಷೆಯ ಕಾಲ. ಒಂದೆಡೆ ಬರಗಾಲದ ಹೊಡೆತ, ಇನ್ನೊಂದೆಡೆ ತೆಂಗಿನಮರಗಳಿಗೆ ನುಸಿರೋಗದ ಪೀಡೆ. ಇವರ ಒಂದೂವರೆ ಎಕ್ರೆ ತೋಟದ ೩೦ ವರುಷ ಹಳೆಯ ತೆಂಗಿನಮರಗಳೆಲ್ಲ ನುಸಿರೋಗದಿಂದ ಸೊರಗಿದವು. "ನಮ್ಮ ತೋಟದ ತೆಂಗಿನಮರಗಳಿಂದ ಐದು ಟನ್ ಕೊಬ್ಬರಿ ಸಿಗುತ್ತಿತ್ತು. ೨೦೦೩ರಲಿ ಸಿಕ್ಕಿದ್ದು ಒಂದು ಟನ್ ಮಾತ್ರ" ಎಂದು ನನ್ನೊಡನೆ ಮಾತಾಡುತ್ತಾ ತನಗಾದ ನಷ್ಟದ ಚಿತ್ರಣ ನೀಡಿದರು ಶೋಬನಬಾಬು.

ಸತತ ೩ ವರುಷಗಳು ಮಳೆ ಕಡಿಮೆಯಾಗುತ್ತಾ ಸಾಗಿದಾಗ ತನ್ನ ತೋಟದಲ್ಲಿ ಬೀಳುವ ಮಳೆನೀರನ್ನೆಲ್ಲ ಸಂಗ್ರಹಿಸಲು ನಿರ್ಧರಿಸಿದರು ಅವರು. ಅದಕ್ಕಾಗಿ ಜಲಾನಯನ ಅಭಿವೃದ್ಧಿ ಇಲಾಖೆಯವರ ಬೆನ್ನು ಹತ್ತಿದರು. ತೋಟದಲ್ಲಿ ಒಡ್ಡು ಕಟ್ಟುವ ಕೆಲಸ ಆರಂಭಿಸಿಯೇ ಬಿಟ್ಟರು. ಅಂತಿಮವಾಗಿ ಇಲಾಖೆಯವರು ತಮ್ಮ ಕಾರ್ಯಕ್ರಮದ ಪ್ರಕಾರ ಕೂಲಿಗಾಗಿ ಐದು ಕ್ವಿಂಟಾಲ್ ಅಕ್ಕಿ ಮಂಜೂರು ಮಾಡಿದರು. "ನಾನು

ಎಂ.ಎ. ಮಾಡಿದವನಾದ ಕಾರಣ ಅದನ್ನು ಮಂಜೂರು ಮಾಡಿಸಿಕೊಳ್ಳಲು ಸಾಧ್ಯವಾಯಿತು. ಹಳ್ಳಿಯ ಬೇರೆ ರೈತರಿಗಾದರೆ ಅದು ಸಿಗುತ್ತಿರಲಿಲ್ಲ" ಎಂದು ಒಣ ನಗೆ ನಕ್ಕರು ಶೋಬನಬಾಬು.

ಮುಂದಿನ ಮಳೆಗಾಲದಲ್ಲಿ ಅವರು ಕಟ್ಟಿದ ಒಡ್ಡುಗಳಲ್ಲಿ ಸಾಕಷ್ಟು ಮಳೆನೀರು ಸಂಗ್ರಹವಾಯಿತು. ಆಗ ತನ್ನ ಹಳ್ಳಿಗರನ್ನು ಕರೆಕರೆದು ತೋರಿಸಿದರು ಶೋಬನಬಾಬು. ನೀವೂ ಹೀಗೆ ಮಾಡಿ ಎಂದು ಒತ್ತಾಯಿಸಿದರು. ಹಾಗೆ ಮಳೆನೀರಿನ ಕೊಯ್ಲನ್ನು ಕಣ್ಣಾರೆ ಕಂಡ ಕೆಲವರು ಅದರ ಲಾಭವನ್ನು ಅರ್ಥ ಮಾಡಿಕೊಂಡರು.

ಆದರೆ ಹಳ್ಳಿಯ ಜನ ತಕ್ಷಣದ ಲಾಭವನ್ನಷ್ಟೇ ನೋಡ್ತಾರೆ ಎಂಬ ಸಂಕಟ ಶೋಬನಬಾಬುವಿಗೆ. "ಇಲ್ಲಿ ಹೆಚ್ಚಿನವರು ಟೊಮೆಟೊ ಬೆಳೀತಾರೆ. ಅದಕ್ಕಾಗಿ ರಾಸಾಯನಿಕ ಗೊಬ್ಬರ, ಲೀಟರಿಗೆ ೧,೨೦೦ ರೂಪಾಯಿ ಬೆಲೆಯ ರಾಸಾಯನಿಕ ವಿಷಗಳನ್ನು ಸುರಿದು ಎಕ್ರೆಗೆ ೧೫,೦೦೦ ರೂಪಾಯಿ ಖರ್ಚು ಮಾಡ್ತಾರೆ. ಬೇರೆಯವರ ಬೋರ್‌ವೆಲ್‌ನ ನೀರಿಗೆ ದುಡ್ಡು ಕೊಟ್ಟು ತಮ್ಮ ಜಮೀನಿಗೆ ನೀರು ಹಾಯಿಸ್ತಾರೆ. ಕೊನೆಗೆ ಟೊಮೆಟೊಕ್ಕೆ ರೇಟಿಲ್ಲ ಅಂತ ತಲೆ ಚಚ್ಚಿಕೊಳ್ತಾರೆ. ಮಾಡಿದ ಸಾಲ ತೀರಿಸಲಾಗದೆ ಒದ್ದಾಡ್ತಾರೆ" ಎಂಬ ವಿವರಣೆ ಅವರದು.

ತನ್ನ ಹಳ್ಳಿಯವರಿಗೆ ಮಳೆನೀರ ಸಂಗ್ರಹ, ಮಳೆ ನೀರಿಂಗಿಸುವುದು, ರಾಸಾಯನಿಕರಹಿತ ಕೃಷಿ ಇವೆಲ್ಲದರ ಬಗ್ಗೆ ತಾನು ಅನುಭವದಿಂದ ಕಲಿತದ್ದನ್ನೆಲ್ಲ ತಿಳಿಸಬೇಕು, ನೆಮ್ಮದಿಯ ಬದುಕಿಗೆ ದಾರಿ ತೋರಿಸಬೇಕು ಎಂಬ ಮಹದಾಸೆ ಶೋಬನಬಾಬುವಿಗೆ. ಜಲಜಾಗೃತಿ ಮಾಡಲು ಇಂಥವರು ಹಳ್ಳಿಗೊಬ್ಬರು ಇದ್ದರೆ ಸಾಕು, ಅಲ್ಲವೇ?

## ಎರಡು ವರುಷ ಮುಂಚೇನೇ ಮಾಡ್ಬೇಕಿತ್ತು !

"ಮುಂಚೆ ನಾವೆಲ್ಲ ಹೊಲದಲ್ಲಿ ಅಲ್ಲಲ್ಲಿ ಬದುಗಳನ್ನ ಮಾಡ್ತಿದ್ವಿ. ಒಂದೆಕ್ರೆಗೆ ನಾಲ್ಕು ಬದು ಆದ್ರೂ ಇರೋದು. ಈವಾಗ ನಾವೆಲ್ಲ ಸೋಮಾರಿಗಳಾಗಿದ್ದೀವಿ. ನಮ್ ಹೊಲ ಉಳುಮೆಗೆ ಎತ್ತುಗಳೇ ಇಲ್ಲ ಅನ್ನೋ ಹಾಗಾಗಿದೆ. ಆದರೆ ಉಳುಮೆ ಮಾಡ್ಬೇಕಲ್ಲ? ಅದಕ್ಕೆ ಟ್ರಾಕ್ಟರ್ ತರಿಸ್ತೀವಿ. ಟ್ರಾಕ್ಟರ್ನೋನು ಉಳುಮೆ ಮಾಡ್ಬೇಕಾರೆ ಈ ಬದುಗಳು ಅಡ್ಡ ಬರ್ತವೆ. ಅದಕ್ಕೆ ಬದುಗಳ್‌ನೆಲ್ಲ ಕಿತ್ ಹಾಕ್ತೀವಿ. ಹಿಂಗಾಗಿ ಈಗ ಒಂದೆಕ್ರೆಯೊಳ್ಗೆ ಒಂದ್ ಬದೂನೂ ಇರಲ್ಲ. ಅಡ್ಡ ಮಳೆ ಬಂದ್ರೆ ನೀರು ಹಂಗೇ ಕೊಚ್‌ಕೊಂಡು ಹೋಗ್‌ತೈತೆ. ಹಿಂಗಾದ್ರೆ ನಮ್ ಹೊಲದಾಗೆ ನೀರಿಂಗೋದು ಹೆಂಗೆ?" ಎಂದು ಲಕ್ಯದ ಹಿರಿಯರಾದ ಮರಿಗೌಡರು ಪ್ರಶ್ನಿಸಿದಾಗ ಅಲ್ಲಿ ಮೌನ ನೆಲೆಸಿತ್ತು.

ಆ ಪ್ರಶ್ನೆಗೆ ಉತ್ತರವೆಂಬಂತೆ ಅವರು ಹೇಳಿದ ಮಾತು,"ಮುಂಚೆ ಹಿಂಗಾರಿನಲ್ಲಿ ಉಳುಮೆ ಮಾಡಿ, ಮಾಗಿಯಲ್ಲಿ ಅಡ್ಡ ಮಳೆ ಬಂದ್ರೆ ನೀರೆಲ್ಲ ಮಣ್ಣು ಕುಡಿಯೋ ಹಂಗೆ ಮಾಡ್ತಿದ್ವಿ." ಅದನ್ನು ಕೇಳುತ್ತಿದ್ದಂತೆ ದಶಕಗಳ ಹಿಂದೆ ಬಯಲು ಸೀಮೆಯಲ್ಲಿ ಮಳೆ ನೀರಿಂಗಿಸುತ್ತಿದ್ದ ಪರಿ ನಮ್ಮ ಕಣ್ಣಿಗೆ ಕಟ್ಟಿತು. ಅವರ ಮುಂದಿನ ಮಾತು ನಮ್ಮನ್ನು ಬಡಿದೆಬ್ಬಿಸಿತು,"ನಮ್ ಹಳೆ ಪದ್ಧತಿಗಳನ್ನ ಉಳಿಸ್ಕೋಬೇಕಾಗಿದೆ. ಇಲ್ಲಾಂದ್ರೆ ನಮ್ ಮಕ್ಳಿಗೆ ಕುಡಿಯೋಕ್ಕು ನೀರಿಲ್ಲ, ನಮ್ ಹೊಲಕ್ಕೂ ನೀರಿಲ್ಲ ಅಂತಾಗ್ತದೆ"

ಚಿಕ್ಕಮಗಳೂರಿನಿಂದ ೧೦ ಕಿಮೀ ದೂರದ ಲಕ್ಯದಲ್ಲಿ ಅಂದು ಸುಮಾರು ಇನ್ನೂರು ಹಳ್ಳಿಗರು ಶಿಸ್ತಿನಿಂದ ಕುಳಿತ್ತಿದ್ದರು - ಅರುಣೋದಯ ರೈತ ಮತ್ತು ಬ್ಯಾಂಕ್ ಮಿತ್ರಕೂಟವು (ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್ ಪ್ರಾಯೋಜಿತ) ಏರ್ಪಡಿಸಿದ "ಮಳೆನೀರ ಕೊಯ್ಲು ಮತ್ತು ಕೊಳವೆಬಾವಿ ಜಲ ಮರುಪೂರಣ" ವಿಚಾರಸಂಕಿರಣದಲ್ಲಿ. ಅವರಲ್ಲಿ ಅರೆಪಾಲು ಮಹಿಳೆಯರು.

ಅದಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಹೋಗಿದ್ದ ನಾನು, ಕೊಳವೆಬಾವಿಗಳ ಅನಾಹುತವನ್ನೂ ಅಂತರ್ಜಲ ಮರುಪೂರಣದ ಅಗತ್ಯವನ್ನೂ ಮರಿಗೌಡರ ಮಾತಿನ ಮುಂಚೆ ತಿಳಿಸಿ ಹೇಳಿದ್ದೆ. ೧೯೮೦ರ ಮುಂಚೆ ಕೊಳವೆಬಾವಿಗಳ ಸುದ್ದಿಯೇ ಇರಲಿಲ್ಲ. ಅನಂತರ ಕೊಳವೆಬಾವಿಯೇ ನೀರಿನ ಸಮಸ್ಯೆಗೆ ಉತ್ತರ ಎಂಬ ಭ್ರಾಂತಿಗೆ ಬಿದ್ದೆವು. ತೆರೆದ ಬಾವಿ ಒಣಗಿದಾಗ, ಮಳೆ ಕೈಕೊಟ್ಟಾಗ ಎಲ್ಲೆಂದರಲ್ಲಿ ಕೊಳವೆಬಾವಿ ಕೊರೆದೆವು. ಒಂದು ಎಕರೆ ಜಾಗದಲ್ಲಿ ಒಂದಲ್ಲ, ಎರಡಲ್ಲ, ನಾಲ್ಕು ಕೊಳವೆಬಾವೆಗಳು! ಒಂದು ಕೊಳವೆಬಾವಿ ಬತ್ತಿದರೆ ಅದಕ್ಕಿಂತ ಆಳವಾದ ಇನ್ನೊಂದು ಕೊಳವೆಬಾವಿ! ಪ್ರಕೃತಿಯೊಂದಿಗೆ ಪೈಪೋಟಿಗೆ ಬಿದ್ದು, ಈ ಪರಿಯಲ್ಲಿ ಅಂತರ್ಜಲದ ಕೊಳ್ಳೆ ಹೊಡೆಯುವಾಗ ನಾವು ಗಮನಿಸದಿದ್ದ ಒಂದು ಸಂಗತಿ: ಕೊಳವೆಬಾವಿಗಳಿಂದ ನಾವು ಎತ್ತುತ್ತಿರುವುದು ಶತಮಾನಗಳಿಂದ ಶೇಖರವಾದ ನೆಲದಾಳದ ನೀರು, ಅದು ನಮ್ಮ ಮಕ್ಕಳು ಮೊಮ್ಮಕ್ಕಳಿಗೆ ನಾವು ಉಳಿಸಿ ಹೋಗಬೇಕಾದ ಆಪತ್ಕಾಲಕ್ಕಾಗುವ ಸಂಪತ್ತು ಎಂಬುದನ್ನು. ಹಾಗಾಗಿ, ಅದನ್ನು ಮತ್ತೆ ತುಂಬಿಕೊಡುವ ಜವಾಬ್ದಾರಿ ನಮ್ಮದೇ ಆಗಿದೆ ಎಂದು ಅಲ್ಲಿ ಕುಳಿತಿದ್ದ ಹಳ್ಳಿಗರಿಗೆ ವಿವರಿಸಿದ್ದೆ.

ನಮ್ಮ ಒಟ್ಟು ನೀರಿನ ಬಳಕೆಯ ಶೇಕಡಾ ೭೦ ಕಬಳಿಸುತ್ತಿರುವ ಕೃಷಿಯಲ್ಲಿ ನೀರಿನ ಉಳಿತಾಯ ಹೇಗೆ? ಕಡಿಮೆ ನೀರು ಬೇಡುವ ಬೆಳೆಗಳನ್ನು ಯಾಕೆ ಬೆಳೆಸಬಾರದು? ಬಹುವಾರ್ಷಿಕ ಬೆಳೆಗಳಿಗೆ ಕಡಿಮೆ ನೀರುಣಿಸಿ, ಫಸಲಿನ ಪ್ರಮಾಣ ಉಳಿಸಿಕೊಳ್ಳುವುದು ಹೇಗೆ? ಬಾವಿಯಲ್ಲಿ ಅಥವಾ ಹೊಂಡದಲ್ಲಿ ಇರುವ ನೀರಿನಿಂದ ಅಲ್ಪಾವಧಿ ಬೆಳೆಗಳನ್ನು ಬೆಳೆಸುವುದು ಹೇಗೆ?

ಇಂತಹ ಪ್ರಶ್ನೆಗಳ ಉತ್ತರಗಳ ಹುಡುಕಾಟವೇ ಜಲ ಸಾಕ್ಷರತೆ. ನಾವು ಜಲಸಾಕ್ಷರರಾಗಿ ನಮ್ಮ ನೀರಿನೆಚ್ಚರವನ್ನು ಸಮುದಾಯಕ್ಕೆ ಹಬ್ಬಿಸುವುದೇ ಜಲಜಾಗೃತಿ. ಇದರೊಂದಿಗೆ ಮನೆಮನೆಗಳಲ್ಲಿ ಹಾಗೂ ಸಮುದಾಯದ ನೆಲೆಯಲ್ಲಿ ಮಳೆ ನೀರಿಂಗಿಸುವ ಮತ್ತು ನೀರು ಸಂರಕ್ಷಿಸುವ ಕೆಲಸಗಳನ್ನು ಮಾಡುವುದೇ ಜಲ ಸಂರಕ್ಷಣೆ. ಇವನ್ನೆಲ್ಲ ನಾನು ವಿವರಿಸುತ್ತ ಹೋದಂತೆ ತೊಟ್ಟಿಯಿಂದ ನೀರು ತೊಟ್ಟಿಕ್ಕುವ ಸದ್ದು ಕೇಳುವಷ್ಟು ನಿಶ್ಶಬ್ದ ಅಲ್ಲಿ ನೆಲೆಸಿತ್ತು.

ಕಾರ್ಯಕ್ರಮದ ಕೊನೆಯಲ್ಲಿ ಮಿತ್ರಕೂಟದ ಅಧ್ಯಕ್ಷರಾದ ಎಲ್. ಜಿ. ಶಿವಸ್ವಾಮಿ ಹೇಳಿದ ಮಾತು ಅಲ್ಲಿ ಸೇರಿದ್ದ ಹಳ್ಳಿ ಜನರ ದನಿಯಾಗಿತ್ತು, "ನಾವು ಎರಡು ವರುಷ ಮುಂಚೇನೇ ಈ ಕಾರ್ಯಕ್ರಮ ನಡೆಸಿದ್ದರೆ, ಕಳೆದ ಎರಡು ವರುಷಗಳ ಬರಗಾಲದ ಸಂಕಟ ಕಡಿಮೆಯಾಗ್ತಿತ್ತು. ನಮಗೆ ಇವೆಲ್ಲ ಸಂಗತಿಗಳು ಗೊತ್ತಿರಲೇ ಇಲ್ಲ. ಈಗ ಅರ್ಥವಾಗಿದೆ. ಇನ್ನು ಮಳೆ ನೀರಿಂಗಿಸುವ ಕೆಲಸ ಶುರು ಮಾಡೀವಿ."

## ಹಳ್ಳಿಯ ಬದುಕಿನ ಸೆಲೆ – ಕವಡಿಕೆರೆ

ಉತ್ತರಕನ್ನಡದ ಯಲ್ಲಾಪುರದ ಹತ್ತಿರದ ಕವಡಿಕೆರೆ ಹಳ್ಳಿಯಲ್ಲಿ ಅಂದು ಮುಸ್ಸಂಜೆಯ ಹೊತ್ತು. ಆಗಷ್ಟೇ ಆ ಮನೆ ಹೊಕ್ಕಿದ್ದೆವು. ಆಗಂತುಕರಾದ ನಮ್ಮನ್ನು 'ಏನು ಈ ಕಡೆ ಬಂದದ್ದು' ಎಂದು ವಿಚಾರಿಸಿದವರು ಗಣಪತಿ ನಾರಾಯಣ ಭಟ್ಟರು. "ಇಡಗುಂದಿಯ ಸ್ನೇಹಸಾಗರ ಶಾಲೆಗೆ ತರಬೇತಿಗಾಗಿ ಬಂದೋರು ನಾವು. ನಿಮ್ ಹಳ್ಳಿಗೆ ಬಂದು ನಿಮ್ಮನ್ನೆಲ್ಲ ಕಾಣ್‌ಬೇಕಂತ ಬಂದಿದೀವಿ" ಎಂದು ಪರಿಚಯಿಸಿಕೊಂಡೆವು ನಾವು ನಾಲ್ವರು. "ನಮ್ ಹಳ್ಳೀಲಿ ಅಂತಾ ವಿಶೇಷವೇನಿಲ್ಲ ಬಿಡಿ' ಎನ್ನುತ್ತಾ ನಮ್ಮನ್ನು ಬೆಂಚಿನಲ್ಲಿ ಕೂರಿಸಿ, ಅವರು ನಿಂತುಕೊಂಡೇ ನಮ್ಮೊಂದಿಗೆ ಮಾತಿಗಿಳಿದರು.

ಅದು ಹಳೆಯ ಮನೆ. ಹೆಂಚಿನ ಚಾವಣಿ. ಮಣ್ಣು ತೇದು ಮಾಡಿದ ನೆಲ. ಮನೆಯೆದುರಿನ ಅಡಿಕೆ ತೋಟದಲ್ಲಿ ಎತ್ತರಕ್ಕೆ ಬೆಳೆದು ನಿಂತ ಅಡಿಕೆ ಗಿಡಗಳು. ಸಹಜವಾಗಿಯೇ ಅಡಿಕೆ ಕೃಷಿಯ ಸ್ಥಿತಿಗತಿ ಬಗ್ಗೆ ಕೇಳಿದೆವು. "ನಿಮಗೆ ಗೊತ್ತಿಲ್ಲ. ಅಡಿಕೆ ದರ ಕ್ವಿಂಟಾಲಿಗೆ ೧೨,೦೦೦ ರೂಪಾಯಿ ಇದ್ದದ್ದು ೬,೦೦೦ ರೂಪಾಯಿಗೆ ಇಳಿದಿದೆ. ಮುಂಚೆ ಅಡಿಕೆ ಜೊತೆ ಬಾಳೆ, ಏಲಕ್ಕಿ, ಕಾಳುಮೆಣಸು ಬೆಳೀತಿದ್ದೆವು. ಅದೆಲ್ಲದ್ರಿಂದ

ಬರೋ ಆದಾಯ ನಮ್ ಮನೆ ಖರ್ಚಿಗೆ ಸಾಕಾಗ್ತಿತ್ತು. ಈಗ ಹಾಗಿಲ್ಲ. ಹತ್ತು ವರ್ಷಂದೀಚೆಗೆ ಎಲ್ಲರ ತೋಟದಲ್ಲಿ ಪಣಿಯೂರು ಕಾಳುಮೆಣಸಿನ ಬಳ್ಳಿ ಕಟ್ಟೆ ರೋಗಕ್ಕೆ ಬಲಿಯಾಗಿದೆ. ಹೊಸ ಗಿಡ ಹಚ್ಚಿದ್ರೆ ಐದಾರು ಅಡಿ ಬೆಳೀತದೆ. ಮತ್ತೆ ಸಾಯ್ತದೆ. ಇದಕ್ಕೆ ಬಾಳೆ ಕೃಷಿ ಕಾರಣವೇ ಗೊತ್ತಿಲ್ಲ. ಬಳ್ಳಿ ಉಳಿಸಲು ಸುಣ್ಣ ಹಾಕಿ ನೋಡಿ ಆಯ್ತು. ಆದರೆ ಕಾಳುಮೆಣಸು ಬಳ್ಳಿ ಉಳಿಯೋದಿಲ್ಲ. ಏಲಕ್ಕಿ ಗಿಡಗಳೂ ಸತ್ ಹೋಗಿವೆ" ಎಂದು ಬದಲಾದ ಸ್ಥಿತಿಯ ಚಿತ್ರಣ ನೀಡಿದರು.

ಅಡಿಕೆ ಗಿಡಗಳಿಗೆ ಇವರ ಪೋಷಣೆ ವರುಷಕ್ಕೆ ಗಿಡಕ್ಕೆ ಒಂದು ಬುಟ್ಟಿ ಗೊಬ್ಬರ ಮತ್ತು ನೀರು, ಇಷ್ಟೇ. ಅದೇ ರೀತಿ, ಕೊಳೆ ರೋಗ ಹತೋಟಿಗೆ ಬೋರ್ಡೋ ಸಿಂಪರಣೆ ಮಾತ್ರ; ಜುಲೈ ಮತ್ತು ಒಕ್ಟೋಬರ್ ಆರಂಭದಲ್ಲಿ, ವರುಷಕ್ಕೆ ಎರಡು ಸಲ. ತನ್ನ ಸಣ್ಣ ತೋಟದಿಂದ ಇವರು ವರುಷಕ್ಕೆ ಎರಡರಿಂದ ಎರಡೂವರೆ ಕ್ವಿಂಟಾಲ್ ಒಣ ಅಡಿಕೆ ಪಡೆಯುತ್ತಾರೆ, ಅಷ್ಟೇ.

ಅವರ ಹಿರೇಮಗ ನಾಗೇಶ ಸಿಇಟಿ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಯಾಂಕ ಗಳಿಸಿದ್ದ. ಅವನ ಇಂಜಿನಿಯರಿಂಗ್ ಕೋರ್ಸಿನ ಖರ್ಚಿಗಾಗಿ, ಅಡಿಕೆ ಬೆಲೆ ಕುಸಿತದ ಕಾಲದಲ್ಲಿ, ಗಣಪತಿ ಭಟ್ಟರು ತಮ್ಮ ದನಕರುಗಳನ್ನು ಮಾರಿದರು. "ಹದಿನೈದು ದನಕರು ಇಟ್ಕೊಂಡಿದ್ದೆ. ಈಗ ಎರಡೇ ಇದ್ದಾವೆ. ಉಳಿದದ್ದೆಲ್ಲ ಮಾರಿಬಿಟ್ಟೆ" ಎಂದರು ಯಾವುದೇ ಏರಿಳಿತವಿಲ್ಲದ ದನಿಯಲ್ಲಿ.

ವರುಷವಿಡೀ ಕವಡಿಕೆರೆಯಿಂದ ಇವರ ಹಾಗೂ ಹಳ್ಳಿಯ ಇತರೆಲ್ಲರ ತೋಟಗಳಿಗೆ ನೀರು ಹರಿದು ಬರುತ್ತದೆ. ಕೆರೆ ಮೇಲು ಹಂತದಲ್ಲಿ ಇರುವುದರಿಂದ ನೀರಾವರಿಗೆ ಪಂಪ್‌ಸೆಟ್ ಬೇಕಾಗಿಲ್ಲ. ಇವರ ಭತ್ತದ ಬೆಳೆಗೂ ಅದೇ ಕೆರೆಯ ನೀರು. ಬೆಳೆಯೋದು ದೊಡ್ಡ ಭತ್ತ ಮತ್ತು ಆಲೂರು ಸಣ್ಣ ತಳಿ. ಜುಲೈಯಲ್ಲಿ ಭತ್ತದ ಸಸಿಗಳನ್ನು ನಾಟಿ ಮಾಡಿ ಒಕ್ಟೋಬರಿನಲ್ಲಿ ಕಟಾವು.

ಉತ್ತರದಿಕ್ಕಿನಲ್ಲಿ ಕವಡಿಕೆರೆಗೆ ೨೦೦ ಮೀ. ಉದ್ದದ ೪ ಮೀ. ಅಗಲದ ಏರಿ. ಇದರ ಕೊನೆಯಲ್ಲಿ ಶ್ರೀ ದುರ್ಗಾಪರಮೇಶ್ವರಿ ದೇವಾಲಯ. ಇದು ಸ್ವರ್ಣವಲ್ಲಿ ಮಠಕ್ಕೆ ಸೇರಿದ್ದು. ಮಠದ ೨೦ ಎಕ್ರೆ ಜಮೀನನ್ನು ಹಳ್ಳಿಯಲ್ಲಿದ್ದ ೬ ಕುಟುಂಬಗಳಿಗೆ ಹಲವು ದಶಕಗಳ ಮುನ್ನ ಹಂಚಲಾಗಿದೆ.

ಕವಡಿಕೆರೆ ೨೧ ಬ್ರಾಹ್ಮಣ ಮನೆಗಳಿರುವ ಸಣ್ಣ ಹಳ್ಳಿ. ಕೆರೆಯ ಏರಿಯ ಬುಡದಿಂದ ಸಾಗುವ ಅರ್ಧ ಕಿಮೀ ಹಾದಿಯ ಎಡಬದಿಯಲ್ಲೇ ಇವರೆಲ್ಲರ ಮನೆಗಳಿವೆ. ಎಲ್ಲ ಕುಟುಂಬಗಳಿಗೂ ಕೃಷಿಯೇ ಜೀವನಾಧಾರ. ಇಡೀ ಹಳ್ಳಿಯ ಬದುಕಿನ ಸೆಲೆ, ನೀರಿನಾಸರೆಯಾದ ಕವಡಿಕೆರೆ.

ಒಂದುಕಾಲದಲ್ಲಿ ಕವಡಿಕೆರೆ ೬೫ ಎಕ್ರೆ ವ್ಯಾಪ್ತಿಯ ವಿಶಾಲ ಕೆರೆಯಾಗಿತ್ತು. ಈಗ ಕೆರೆಯಲ್ಲಿ ಹೂಳು ತುಂಬಿದ್ದರಿಂದ ವ್ಯಾಪ್ತಿ ೪೦ ಎಕ್ರೆಗೆ ಇಳಿದಿದೆ. ಈ ಕೆರೆಯಿಂದ ೧೫೦ ಎಕ್ರೆ ಜಮೀನಿಗೆ ವರುಷವಿಡೀ ನೀರಾವರಿ ಒದಗುತ್ತಿದೆ. ಅಷ್ಟೇ ಅಲ್ಲ, ಇದರಿಂದಾಗಿ ಸುತ್ತಲಿನ ೫ ಕಿಲೋಮೀಟರ್ ಫಾಸಲೆಯಲ್ಲಿ ಯಾವುದೇ ಕೆರೆ ಬತ್ತುವುದಿಲ್ಲ ಎಂದು ಗಣಪತಿ ನಾರಾಯಣ ಭಟ್ಟರು ಕವಡಿಕೆರೆಯ ಮಹತ್ವ ವಿವರಿಸಿದರು. ನಾವು ಅಲ್ಲಿಂದ ಹೊರಟಾಗ ಅವರೊಂದು ಮಾತು ಹೇಳಿದರು,"ಯಾವುದೇ ಕುಟುಂಬ ನಮ್ ಹಳ್ಳಿ ಬಿಟ್ಟು ಹೋಗಿಲ್ಲ, ನೋಡಿ."

ಒಂದು ಹಳ್ಳಿಯವರು, ತಮ್ಮ ಬದುಕಿನ ಸೆಲೆಯಾದ ಕೆರೆಯೊಂದಿಗೆ ಇಂತಹ ಅವಿನಾಭಾವ ಸಂಬಂಧ ಬೆಳೆಸಿಕೊಂಡರೆ ಮಾತ್ರ ಅವರಿಗೆ ಆ ಕೆರೆ ಉಳಿಸುವ ಬುದ್ಧಿ ಬಂದೀತು, ಅಲ್ಲವೇ?

# ಹಾರೋಗೇರಿ ಬಾಂದಾರ - ಗ್ರಾಮೀಣ ಸಮುದಾಯದಿಂದ ಜಲಸಂರಕ್ಷಣೆಯ ಮಾದರಿ

ಹಾರೋಗೇರಿ ಬಾಂದಾರದ ಮೇಲೆ ನಿಂತಿದ್ದೆವು. ಅಂದು (೧೮ ಜೂನ್ ೨೦೦೯) ಹುಬ್ಬಳ್ಳಿಯಿಂದ ಹೊರಟು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗಿ ಅರ್ಧ ತಾಸಿನಲ್ಲಿ ವರೂರು ಮುಟ್ಟಿದ್ದೆವು. ಅಲ್ಲಿಂದ ಬಲಕ್ಕೆ ತಿರುಗಿ, ೬ ಕಿಮೀ ದೂರದ ಸೂರಶೆಟ್ಟಿಕೊಪ್ಪ ಹಾದು ಹಾರೋಗೇರಿ ತಲಪಿದ್ದೆವು. ಕಳೆದೆರಡು ವಾರಗಳಲ್ಲಿ ಬಿದ್ದ ಮಳೆಯ ನೀರು ಬಾಂದಾರದಲ್ಲಿ ಸಂಗ್ರಹವಾಗಿತ್ತು. ಸುತ್ತಲಿನ ಗುಡ್ಡಗಳಲ್ಲಿ ಹಸುರು ಚಿಗುರು ನಗುತ್ತಿತ್ತು.

ಕರ್ನಾಟಕದಲ್ಲಿ ಇಂತಹ ಹಲವು ಬಾಂದಾರಗಳಿವೆ. ಇದರದ್ದೇನು ವಿಶೇಷ? ಇದು ಹಳ್ಳಿಗರು ૩ ತಿಂಗಳ ಶ್ರಮದಾನದಿಂದ ಕಟ್ಟಿದ ಬಾಂದಾರ. ಸರ್ವೋದಯ ಮಹಾಸಂಘದ ಅಧ್ಯಕ್ಷರಾದ ಬಸವಣ್ಣೆಪ್ಪ ಅಂಗಡಿ ಶ್ರಮದಾನದ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾ ಹೇಳಿದರು,"ಇದನ್ನ ನಾವು ಕಟ್ಟಿದ್ದು ೧೯೯೯ರಲ್ಲಿ. ಇಪ್ಪತ್ತೆರಡು ಹಳ್ಳಿಗಳಿಂದ ಜನ ಬರ್ತಿದ್ರು ನೋಡ್ರೀ, ಬುತ್ತಿ ಕಟ್‌ಕೊಂಡ್ ಬರ್ತಿದ್ರು. ಐನೂರು ಆಜೂಬಾಜು ಜನ ಸೇರ್ತಿದ್ರು. ಇಲ್ಲಿ ಜಾತ್ರೆ ಇದ್ದಂಗಿರ್ತಿತ್ತು. ಎಲ್ರೂ ಒಟ್ಟಾಗಿ ಕೆಲ್ಸ ಮಾಡೋರು, ಒಟ್ಟಾಗಿ ಉಣ್ಣೋರು. ಬಾಂದಾರ ಕಟ್ಟಿ ಮುಗಿಸೋದಕ್ಕೆ ૩ ತಿಂಗಳು ಬೇಕಾಯ್ತು, ನೋಡ್ರೀ."

ಹಳ್ಳಿಗರು ಒಟ್ಟು ಸೇರಿದರೆ ಜಲಸಂರಕ್ಷಣೆ ಹೇಗೆ ಮಾಡಬಹುದೆಂಬುದಕ್ಕೆ ಹಾರೋಗೇರಿ ಬಾಂದಾರ ಒಂದು ಮಾದರಿ. ಅದರ ಉದ್ದ ೧೪೦ ಅಡಿ, ಎತ್ತರ ೧೨ ಅಡಿ. ಅದರಲ್ಲಿ ೨೦ ಲಕ್ಷ ಲೀಟರ್ ನೀರು ಸಂಗ್ರಹಿಸಲು ಸಾಧ್ಯ. ಮೊದಲು ಒಂದು ಇಂಚು ದಪ್ಪದ ಫೆರ್ರೋ ಸಿಮೆಂಟ್ ತಡೆಗೋಡೆ ನಿರ್ಮಿಸಿ, ಅನಂತರ ಅದರ ಎರಡೂ ಬದಿಗಳಲ್ಲಿ ಕಲ್ಲುಮಣ್ಣು ಹೇರಿ ಬಾಂದಾರ ರಚಿಸಲಾಗಿದೆ. ಅದಕ್ಕೆ ತಗಲಿದ ಒಟ್ಟು ವೆಚ್ಚ ರೂಪಾಯಿ ೬೦,೦೦೦.

ಆ ಬಾಂದಾರದ ನೀರಿನಿಂದ ಸುತ್ತಲಿನ ೧೫ ರೈತರಿಗೆ ಕೃಷಿಗೆ ಪ್ರಯೋಜನವಾಗಿದೆ. ಅಲ್ಲಿನ ಬೋರ್‌ವೆಲ್‌ಗಳ ನೀರಿನ ಉತ್ಪತ್ತಿ ಹೆಚ್ಚಿದೆ. ಸರಾಸರಿ ೯૩೯ ಮಿಮೀ ವಾರ್ಷಿಕ ಮಳೆಯ ಆ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಯಾಗಿದೆ.

ಈ ಸಾಧನೆಗೆ ಕಾರಣ ಬೈಫ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮತ್ತು ಸರ್ವೋದಯ ಮಹಾಸಂಘ. ಕರ್ನಾಟಕದಲ್ಲಿ ಬೈಫ್ ಸಂಸ್ಥೆ ೨೦ ಜಿಲ್ಲೆಗಳಲ್ಲಿ ಗ್ರಾಮ ವಿಕಾಸ ಕೆಲಸಗಳಲ್ಲಿ ತೊಡಗಿದೆ. ಬೈಫ್ ಸಂಸ್ಥೆಯ ಧಾರವಾಡ ವಿಭಾಗವು ಕಲಘಟಗಿ ಮತ್ತು ಹುಬ್ಬಳ್ಳಿ ತಾಲೂಕುಗಳ ಆಯ್ದ ೨೨ ಹಳ್ಳಿಗಳಲ್ಲಿ ಗ್ರಾಮ ವಿಕಾಸ ಕಾರ್ಯ ಕೈಗೆತ್ತಿಕೊಂಡದ್ದು ೧೯೯೭ರಲ್ಲಿ. ಸೂರಶೆಟ್ಟಿಕೊಪ್ಪವನ್ನು ಕೇಂದ್ರವಾಗಿ ಇರಿಸಿಕೊಂಡು, ಸುತ್ತಲಿನ ೨೨ ಹಳ್ಳಿಗಳಲ್ಲಿ ಕಾರ್ಯಗತಗೊಳಿಸಿದ ಯೋಜನೆಯ ಹೆಸರು "ಸುಸ್ಥಿರ ಅಭಿವೃದ್ಧಿಗಾಗಿ ತಂತ್ರಜ್ಞಾನ ವರ್ಗಾವಣೆ." ಇದರ ಎಲ್ಲ ಹಂತಗಳಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಗೆ ಒತ್ತು.

ಯೋಜನಾ ಪ್ರದೇಶದಲ್ಲಿ ೧೫೪ ಸ್ವಸಹಾಯ ಸಂಘಗಳನ್ನು ರಚಿಸಿ ಪೋಷಿಸಲಾಯಿತು. ಇವುಗಳ ಪ್ರತಿನಿಧಿಗಳು ಸೇರಿ ೨೧ ಗ್ರಾಮ ವಿಕಾಸ ಸಮಿತಿಗಳನ್ನು ರಚಿಸಿಕೊಂಡಿದ್ದಾರೆ. ಈ ಸಮಿತಿಗಳ ಪ್ರತಿನಿಧಿಗಳ ಸಂಘಟನೆಯೇ ಸರ್ವೋದಯ ಮಹಾಸಂಘ. ಇದಕ್ಕೆ ಆರಂಭದಿಂದಲೂ ಹಿರಿಯ ಬಸವಣ್ಣೆಪ್ಪ ಅಂಗಡಿ ಅವರ ಮುಂದಾಳುತನ.

ಬೈಫ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಬೆಂಬಲ ಹಾಗೂ ಮಾರ್ಗದರ್ಶನ ಮತ್ತು ಸರ್ವೋದಯ ಮಹಾಸಂಘದ ಒತ್ತಾಸೆ - ಇವುಗಳ ಫಲವಾಗಿ ಅಲ್ಲಿನ ೨೨ ಹಳ್ಳಿಗಳಲ್ಲಿ ಆಗಿರುವ ಅಭಿವೃದ್ಧಿಯ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಕಣ್ಣಾರೆ ಕಾಣಬೇಕು. ಹಳ್ಳಿಗರ ಸಂಘಟನೆಯಾದ ಸರ್ವೋದಯ ಮಹಾಸಂಘವು ಸರಕಾರಿ ಅಧಿಕಾರಿಗಳಿಗೆ, ಬ್ಯಾಂಕ್ ಅಧಿಕಾರಿಗಳಿಗೆ, ಸರಕಾರೇತರ ಸಂಸ್ಥೆಗಳ ಕಾರ್ಯಕರ್ತರಿಗೆ ತರಬೇತಿ ನೀಡಲಿಕ್ಕಾಗಿ ೨೦೦೪ರಿಂದ "ಗ್ರಾಮಚೇತನ" ಎಂಬ ತರಬೇತಿ ಸಂಸ್ಥೆಯನ್ನೇ ನಡೆಸುತ್ತಿದೆ!

ಅಲ್ಲಿಗೆ ಹೋಗಿ ನಾನು ಕಣ್ಣಾರೆ ಕಂಡ ಗ್ರಾಮಾಭಿವೃದ್ಧಿಯ ಹತ್ತುಹಲವು ಕೆಲಸಗಳಲ್ಲೊಂದು ಹಾರೋಗೇರಿಯ ಬಾಂದಾರ. ಇದು ಗ್ರಾಮೀಣ ಸಮುದಾಯ ಶಕ್ತಿಯ ಫಲ. ಹಳ್ಳಿಗಳಲ್ಲಿ ಜಲಜಾಗೃತಿ ಹಾಗೂ ಜಲಸಂರಕ್ಷಣೆಗಾಗಿ ಏನು ಮಾಡಬಹುದೆಂದು ತಿಳಿಯಬೇಕಾದರೆ ಹಾರೋಗೇರಿಗೆ ಹೋಗಿ ಬನ್ನಿ.

## ಹಳ್ಳಿಗೆ ನೀರು ತಂದ ಮಹಿಳೆಯರು

ಬೆಂಗಳೂರಿನವರು ಪುಣ್ಯವಂತರು! ಮಂಗಳೂರಿನವರೂ ಪುಣ್ಯವಂತರು! ಯಾಕೆಂದರೆ ಮನೆಯ ನಳ್ಳಿ ತಿರುಗಿಸಿದರೆ ನೀರು ಬರುತ್ತದೆ, ಅಲ್ಲವೇ? ಬೆಂಗಳೂರಿನ ಮನೆಮನೆಗಳಿಗೆ ನೀರು ತರಲಿಕ್ಕಾಗಿ ಕಾವೇರಿಯಿಂದ ಕುಡಿಯುವ ನೀರು ಸರಬರಾಜು ಮಹಾಯೋಜನೆಯ ವಿವಿಧ ಹಂತಗಳಿಗಾಗಿ ಸರಕಾರವು ರೂಪಾಯಿ ೧,೦೦೦ ಕೋಟಿಗಳಿಗಿಂತ ಜಾಸ್ತಿ ವೆಚ್ಚ ಮಾಡಿದೆ.

ಆದರೆ ನಮ್ಮ ದೇಶದ ಸಾವಿರಾರು ಹಳ್ಳಿಗಳ ಲಕ್ಷಗಟ್ಟಲೆ ಮನೆಗಳಿಗೆ ಇಂದಿಗೂ ಕುಡಿಯುವ ನೀರು ಒದಗಿಸುವ ವ್ಯವಸ್ಥೆಯಿಲ್ಲ. ಅಂತಹ ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸಲಿಕ್ಕಾಗಿ ಕೆಲವು ಕೋಟಿ ರೂಪಾಯಿಗಳನ್ನು ಸರಕಾರ ಬಜೆಟಿನಲ್ಲಿ ಒದಗಿಸಿದರೆ ಅದುವೇ ವಿಶೇಷ. ಅಂತಹ ಒಂದು ಹಳ್ಳಿಯ ಮಹಿಳೆ ಕಮಲಾ ಹೆಂಟಾಲಾ. ಗುಡ್ಡದ ತೊರೆಯಿಂದ ಮನೆಗೆ ನೀರು ತರಲಿಕ್ಕಾಗಿ ಪ್ರತಿ ದಿನ ೨ ಕಿಲೋಮೀಟರ್ ದೂರ ಕಲ್ಲುಮುಳ್ಳಿನ ಹಾದಿ ನಡೆಯುವಾಗ ಅವಳಿಗೆ ಒಂದೇ ಯೋಚನೆ, 'ಇದಕ್ಕೇನು ಪರಿಹಾರ?'

ಕಮಲಾಳ ಹಳ್ಳಿ ಮಹುಪದರ್ ಒರಿಸ್ಸಾದ ಮೈಕನ್‌ಗಿರಿ ಜಿಲ್ಲೆಯಲ್ಲಿದೆ. ಯೋಜನಾ ಆಯೋಗದ ಪ್ರಕಾರ ಭಾರತದ ಹತ್ತು ಅತ್ಯಂತ ಬಡ ಜಿಲ್ಲೆಗಳಲ್ಲಿ ಅದೊಂದು. ಅವಳ ಹಳ್ಳಿ ತಲಪಬೇಕಾದರೆ ತಾರ್ಕೋಟೆ ಗ್ರಾಮ ಪಂಚಾಯತಿನಿಂದ ೧೨ ಕಿಮೀ ನಡೆದು ಹೋಗಬೇಕು.

ಒರಿಸ್ಸಾದ ಮುಚ್ಚುಕೊಂಡ ನೀರಾವರಿ ಯೋಜನೆಗಾಗಿ ಹಲವಾರು ಕುಟುಂಬಗಳನ್ನು ಅವರ ಪೂರ್ವಿಕರ ಜಮೀನಿನಿಂದ ಒಕ್ಕಲೆಬ್ಬಿಸಲಾಯಿತು. ಅವರೆಲ್ಲರ ಜಮೀನು ಜಲಾಶಯದ ನೀರಿನಲ್ಲಿ ಮುಳುಗಡೆಯಾಯಿತು. ಮೈಕನ್‌ಗಿರಿ ಜಿಲ್ಲೆಯೊಂದರಲ್ಲೇ ೮೦೦ ಕುಟುಂಬಗಳು ಹೀಗೆ ನಿರ್ವಸಿತವಾದವು.

ಕಮಲಾ ಮತ್ತು ಇತರ ಮಹಿಳೆಯರು ಕಾಡಿನ ಹಾದಿಯಲ್ಲಿ ನೀರು ತರಲಿಕ್ಕಾಗಿ ನಡೆದೇ ಹೋಗಬೇಕು. ಕಾಡು ಪ್ರಾಣಿಗಳಿಂದ ಅವರನ್ನು ಕಾಪಾಡಲಿಕ್ಕಾಗಿ ಬಿಲ್ಲುಬಾಣ ಹಿಡಿದ ಗಂಡಸರು ಅವರೊಂದಿಗೇ ನಡೆಯುತ್ತಿದ್ದರು. ನೀರಿಗಾಗಿ ಅವರು ಕೆಲವು ತಿಂಗಳು ಹೀಗೇ ಪಡುಪಾಟಲು ಪಟ್ಟರು. ಅನಂತರ ಕಮಲಾ ಹಳ್ಳಿಯ ಮಹಿಳೆಯರ ಸಭೆ ಕರೆದಳು. "ಇದಕ್ಕೇನು ಪರಿಹಾರ?" ಎಂಬುದೇ ಚರ್ಚೆಯ ವಿಷಯ. ಅಂತಿಮವಾಗಿ ಅವರೆಲ್ಲ ನಿರ್ಧರಿಸಿದರು: ಬಿದಿರು ಗಳಗಳನ್ನು ಜೋಡಿಸಿ ತೊರೆಯಿಂದ ಹಳ್ಳಿಗೆ ನೀರು ಹಾಯಿಸಬೇಕೆಂದು.

ಮಹುಪದರ್ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಸುಮಾರು ೧೦೦ ಮಹಿಳೆಯರು ಕೆಲಸ ಮಾಡಿ ಬಿದಿರು ಗಳಗಳನ್ನು ಒಂದಕ್ಕೊಂದು ಜೋಡಿಸಿದರು. ದೂರದ ತೊರೆಯಿಂದ ಬಿದಿರು ಕೊಳವೆ ಸಾಲಿನಲ್ಲಿ ತಮ್ಮ ಹಳ್ಳಿಗೆ ನೀರು ಹರಿದು ಬಂದಾಗ ಅವರ ಮುಖಗಳಲ್ಲಿ ಗೆಲುವಿನ ನಗು.

ಮುಂದಿನ ಬೇಸಗೆಯಲ್ಲಿ ಅವರಿಗೊಂದು ಸಮಸ್ಯೆ ಎದುರಾಯಿತು. ತೊರೆಯಲ್ಲಿ ಸಾಕಷ್ಟು ನೀರಿದ್ದರೂ ಬಿದಿರು ಕೊಳವೆ ಸಾಲಿನಲ್ಲಿ ಹಳ್ಳಿಗೆ ಹರಿದು ಬರುವ ನೀರು ದಿನನಿತ್ಯದ ಬಳಕೆಗೆ ಸಾಕಾಗುತ್ತಿರಲಿಲ್ಲ. ಆ ಮಹಿಳೆಯರು ಈ ಸಮಸ್ಯೆಗೂ ಪರಿಹಾರ ಕಂಡುಕೊಂಡರು.

ಒಣ ಮರಗಳ ಕಾಂಡಗಳನ್ನು ಸಂಗ್ರಹಿಸಿ, ಉದ್ದಕ್ಕೆ ಎರಡು ಭಾಗಗಳಾಗಿ ಸೀಳಿದರು. ಅವುಗಳ ತಿರುಳನ್ನು ಕೆತ್ತಿ ತೆಗೆದು, ಅರ್ಧ ವರ್ತುಲಾಕಾರದ ಪೈಪ್‌ಗಳಾಗಿ ಜೋಡಿಸಿ ಕಾಲುವೆ ರಚಿಸಿ, ತೊರೆಯಿಂದ ಹಳ್ಳಿಗೆ ನೀರು ಹಾಯಿಸಿದರು. ಮಾತ್ರವಲ್ಲ, ಹಳ್ಳಿಯಲ್ಲಿ ಹೊಂಡಗಳನ್ನು ತೋಡಿ ನೀರು ಸಂಗ್ರಹಿಸಿದರು. ಜೊತೆಗೆ, ನೀರಿನ ಸಂಗ್ರಹ ತೊಟ್ಟಿಗಳಿಂದ ತಮ್ಮ ಮನೆಗಳಿಗೆ ನೀರು ಹಾಯಿಸಲು ಬಿದಿರಿನ ಪೈಪ್‌ಲೈನ್ ಜೋಡಿಸಿದರು.

ಮಹುಪದರ್ ಹಳ್ಳಿಯ ಪ್ರಧಾನ ಬಲರಾಂ ಹೆಂಟಾಲಾ ಹೇಳುತ್ತಾರೆ, "ನಮ್ಮ ಸಹಾಯವೇ ಇಲ್ಲದೆ ಈ ಮಹಿಳೆಯರು ಭಾರೀ ಸಾಧನೆ ಮಾಡಿದ್ದಾರೆ." ಮಹಿಳೆಯರ ಸಾಹಸದಿಂದಾಗಿ ಹಳ್ಳಿಗರಿಗೆ ಕುಡಿಯುವ ನೀರು ಸಿಗುತ್ತಿದೆ ಹಾಗೂ ಭತ್ತ, ದ್ವಿದಳ ಧಾನ್ಯಗಳು ಮತ್ತು ತರಕಾರಿಗಳನ್ನು ಬೆಳೆಯಲು ಸಾಧ್ಯವಾಗಿದೆ.

ಇದೀಗ ಆ ಹಳ್ಳಿಯ ಮಹಿಳೆಯರು ಸ್ವಸಹಾಯ ಸಂಘ ಕಟ್ಟಿದ್ದಾರೆ. ತಮ್ಮ ಹಳ್ಳಿಯ ನೀರು ಸರಬರಾಜು ಯೋಜನೆ ಸುಧಾರಿಸಲಿಕ್ಕಾಗಿ ಪ್ರತಿ ದಿನವೂ ಸ್ವಲ್ಪ ಅಕ್ಕಿ ಮತ್ತು ಹಣ ಉಳಿತಾಯ ಮಾಡುತ್ತಿದ್ದಾರೆ.

ಮಹುಪದರ್ ಹಳ್ಳಿಯ ಮಹಿಳೆಯರಿಗೆ ಕನಸುಗಳಿವೆ. ಬಂಗಲೆ ಕಟ್ಟುವ ಅಥವಾ ದುಬಾರಿ ಕಾರು ಕೊಳ್ಳುವ ಕನಸುಗಳಲ್ಲ. ತಮ್ಮ ಹಳ್ಳಿಗೊಂದು ಶಾಲೆ ಮತ್ತು ಆರೋಗ್ಯ ಕೇಂದ್ರ ಬೇಕೆಂಬ ಕನಸು. ಮನೆಮನೆಗೂ ಕುಡಿಯುವ ನೀರು ಒದಗಿಸಲು ಸರಿಯಾದ ವ್ಯವಸ್ಥೆ ಮಾಡಬೇಕೆಂಬುದು ಅವರ ಅತಿ ದೊಡ್ಡ ಕನಸು. ಅವರ ಎಲ್ಲ ಕನಸುಗಳೂ ನನಸಾಗಲಿ.

## ಬಾವಿಗೆ ಮಳೆನೀರಿಂಗಿಸಿದರೆ ಪ್ರಯೋಜನ ಇದೆಯೇ?

ಬಾವಿಗೆ ಮಳೆ ನೀರಿಂಗಿಸಿದರೆ ಪ್ರಯೋಜನ ಇದೆಯೇ? ಈ ಪ್ರಶ್ನೆ ಕೇಳುವವರು ಹಲವರು. ಇದಕ್ಕೆ ಉತ್ತರ ಸಿಗಬೇಕೆಂದಾದರೆ, ಬಾವಿಗೆ ಮಳೆ ನೀರಿಂಗಿಸುವವರ ಬಾವಿಯನ್ನು ಕಣ್ಣಾರೆ ಕಾಣಬೇಕು.

ಅದಕ್ಕಾಗಿಯೇ ಹೋಗಿದ್ದೆ, ೧೯ ಜೂನ್ ೨೦೦೯ರಂದು, ಮಂಗಳೂರಿನ ಖಾಸಗಿ ಪಶುವೈದ್ಯ ಡಾ. ಮನೋಹರ ಉಪಾಧ್ಯರ ಮನೆಗೆ. ಯಾಕೆಂದರೆ, ಅವರು ತನ್ನ ಮನೆಯ ಬಾವಿಗೆ ೨೦೦೧ರಿಂದ ನೇರವಾಗಿ ಮಳೆನೀರು ಇಂಗಿಸುತ್ತಿದ್ದಾರೆ. ಮಂಗಳೂರಿನ ಹೊರವಲಯದ "ಬೆಂದೂರ್ ವೆಲ್" ವೃತ್ತ ಐದು ರಸ್ತೆಗಳು ಕೂಡುವ ವಿಶಾಲ ವೃತ್ತ. ಅಲ್ಲಿಂದ ಬೆಂಗಳೂರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದೂವರೆ ಕಿಮೀ ಸಾಗಿದಾಗ, ಮರೋಳಿಯಲ್ಲಿ ಎಡಬದಿಯಲ್ಲಿ ಎರಡು ಫಲಕಗಳು ಕಾಣಿಸಿದವು: (೧) ಸೂರ್ಯನಾರಾಯಣ ದೇವಸ್ಥಾನಕ್ಕೆ ದಾರಿ (೨) ಪಶುಚಿಕಿತ್ಸಾಲಯಕ್ಕೆ ದಾರಿ. ಆ ದಾರಿಯಲ್ಲಿ ೦.೭ ಕಿಮೀ ಸಾಗಿದಾಗ, ದೊಡ್ಡ ಆಲದಮರ ದಾಟಿದೊಡನೆ ಎದುರಿಗಿತ್ತು, ಡಾ. ಉಪಾಧ್ಯರ ಪಶುಚಿಕಿತ್ಸಾಲಯ.

ಅದು ೩೫ ಸೆಂಟ್ಸ್ ವಿಸ್ತಾರದ ಕಂಪೌಂಡ್. ಪಶುಚಿಕಿತ್ಸಾಲಯದ ಹಿಂಬದಿಯಲ್ಲಿ ಅವರ ಮನೆ. ಮನೆಯ ಚಾವಣಿಯ ವಿಸ್ತೀರ್ಣ ೧,೭೦೦ ಚದರಡಿ. ಮನೆ ಕಟ್ಟಿಸುವಾಗ ಬಾವಿ ತೋಡಿಸಿದ್ದರು. ೩೮ ಅಡಿ ಆಳದಲ್ಲಿ ಸಿಕ್ಕಿತ್ತು ಬಂಡೆ. ಅದನ್ನು ಒಡೆಸಿದರೆ ಸುತ್ತಲಿನ ಮನೆಗಳಿಗೆ ಅಪಾಯ ಸಂಭವ. ಹಾಗಾಗಿ ಒಡೆಸಲಿಲ್ಲ. ಆ ಬಾವಿಯಲ್ಲಿ ಬೇಸಗೆ ಕೊನೆಯಲ್ಲಿ ಕೇವಲ ಒಂದಡಿ ನೀರು.

ಬಾವಿ ತೋಡಿಸಿದ, ನಂತರದ ವರುಷದಲ್ಲಿ ಮಳೆ ಹೊಯ್ಯೋದು ಕಂಡಾಗ, ಮನೆಯ ಚಾವಣಿ ನೀರನ್ನೆಲ್ಲ ಬಾವಿಗೆ ಇಳಿಸಿದರೆ ಹೇಗೆ? ಎಂಬ ಯೋಚನೆ. ಸುಮಾರು ರೂಪಾಯಿ ೩,೦೦೦ ವೆಚ್ಚದಲ್ಲಿ ಪೈಪ್‌ಗಳ ಜಾಲ ಜೋಡಣೆ. ಎರಡನೆಯ ಮಹಡಿಯ ಚಾವಣಿಯ ಎರಡೂ

ಬದಿಗಳಿಗೆ ದಂಬೆಯಂತೆ ಅರ್ಧ-ಕತ್ತರಿಸಿದ ಪಿವಿಸಿ ಪೈಪ್‌ಗಳ ಜೋಡಣೆ. ಅವೆರಡನ್ನೂ ಜೊತೆಗೂಡಿಸಿ, ಒಂದೇ ಪಿವಿಸಿ ಪೈಪಿನ ಮುಖಾಂತರ ನೆಲಮಟ್ಟಕ್ಕೆ ಇಳಿಸಿದರು. ಅಲ್ಲಿಂದ ನೆಲದಾಳದಲ್ಲಿ ಪೈಪ್ ಹಾಯಿಸಿ, ನೇರವಾಗಿ ಬಾವಿಯೊಳಕ್ಕೆ ಮಳೆನೀರು ಬೀಳುವಂತೆ ಪೈಪ್ ಇರಿಸಿದರು.

ಒಂದೇ ವರುಷದಲ್ಲಿ ಫಲಿತಾಂಶ ಕಂಡು ಬಂತು. ಬೇಸಗೆಯ ಕೊನೆಯಲ್ಲಿ ಬಾವಿಯಲ್ಲಿ ಐದಡಿ ನೀರು. ಅನಂತರದ ವರುಷಗಳಲ್ಲಿ ಬೇಸಗೆಯಲ್ಲಿ ಹತ್ತಡಿ ನೀರು. ವಿಶಾಲ ಕಂಪೌಂಡಿನಲ್ಲಿ ಹಲವು ಗಿಡಮರಗಳು, ಕಣ್ತುಂಬ ಹಸುರು. ಬಿರುಬೇಸಗೆಯಲ್ಲೂ ಅವುಗಳ ಹಸುರು ಮಾಸದಿರಲು ಕಾರಣ ಈ ಬಾವಿಯ ನೀರು.

ಬಾವಿಗೆ ಮಳೆ ನೀರಿಂಗಿಸುವವರು ಚಾವಣಿ ನೀರನ್ನೆಲ್ಲ ಬಾವಿಗೆ ಉಣಿಸಬೇಕೆಂದಿಲ್ಲ. ಬಾವಿಗೆ ಹತ್ತಿರದ ಇಳಿಪೈಪಿನ ನೀರನ್ನು ಮಾತ್ರ ಬಾವಿಗೆ ತಿರುಗಿಸಿದರೂ ಸಾಕು. ನೆನಪಿರಲಿ, ಪೈಪ್ ಉದ್ದ ಹೆಚ್ಚಿದಷ್ಟೂ ವೆಚ್ಚ ಹೆಚ್ಚು.

ಬಾವಿಗೆ ಮಳೆನೀರನ್ನು ನೇರವಾಗಿ ಇಳಿಸಬಹುದೇ? “ಬಾವಿ ಇರುವಲ್ಲಿ ಮಣ್ಣು ಹೇಗಿದೆ” ಎಂದು ಪರಿಶೀಲಿಸಿದರೆ ಈ ಸಂದೇಹ ನಿವಾರಣೆ. ಡಾ. ಉಪಾಧ್ಯ ಬಾವಿಗೆ ಕಾಂಕ್ರೀಟ್ ರಿಂಗ್ ಇಳಿಸಿದ್ದಾರೆ. ಹೀಗೆ ರಿಂಗ್ ಇಳಿಸಿದ ಅಥವಾ ಕಲ್ಲು ಕಟ್ಟಿದ ಬಾವಿಯ ಮಣ್ಣು ಕುಸಿಯುವ ಭಯವಿಲ್ಲ. ಮೆದುಮಣ್ಣಿನ ಜಾಗದಲ್ಲಿ ತೋಡಿದ ಬಾವಿಗೆ ನೇರವಾಗಿ ಮಳೆನೀರು ಹಾಯಿಸಿದರೆ ಬಾವಿಯೊಳಗೆ ಮಣ್ಣು ಕುಸಿದೀತು.

ಚಾವಣಿಯಿಂದ ಬಾವಿಗೆ ನೇರವಾಗಿ ಬಿಡುವ ಮಳೆನೀರನ್ನು ಸೋಸಬೇಡವೇ? ಇದನ್ನು ಅವರವರೇ ನಿರ್ಧರಿಸಬೇಕು. ಮೊದಲ ಎರಡು-ಮಳೆ ನೀರನ್ನು ಹೊರಕ್ಕೆ ಹಾಯಿಸಿ, ಅನಂತರದ ಮಳೆ ನೀರನ್ನು ಬಾವಿಗೆ ಬಿಡುವುದು ಉತ್ತಮ. ಇದಕ್ಕಾಗಿ ಇಳಿಪೈಪಿನ ಕೊನೆಯಲ್ಲಿ ಒಂದು ಮೆದು ಪೈಪ್ ಜೋಡಿಸಿದರೂ ಸಾಕು. ಮೊದಲ ಮಳೆ ಬಂದಾಗ ಮೆದು ಪೈಪನ್ನು ತಿರುಗಿಸಿದರೆ ಮಳೆನೀರು ಹೊರಕ್ಕೆ; ಅನಂತರ ಮೆದು ಪೈಪ್ ತಿರುಗಿಸಿ, ಮಳೆನೀರು ಬಾವಿಗೆ ಹೋಗುವಂತೆ ವ್ಯವಸ್ಥೆ. ಅದಲ್ಲದೆ, ಮಳೆನೀರು ಸೋಸಲು ಸುಲಭದಲ್ಲಿ ಶೋಧಕ ಮಾಡಿಕೊಳ್ಳಬಹುದು. ೩ ಅಡಿ ಉದ್ದ-ಅಗಲ-ಎತ್ತರದ ಟ್ಯಾಂಕ್ ಮಾಡಬಹುದು. ಇದರಲ್ಲಿ, (ಮೇಲೆ) ಮರಳು, ಸಣ್ಣ ಜಲ್ಲಿ, ದೊಡ್ಡ ಜಲ್ಲಿಗಳ ಮೂರು ಪದರ ತುಂಬಬೇಕು. (ಒಂದರ ಕೆಳಗೊಂದು ಪದರ, ತಲಾ ಅರ್ಧ ಅಡಿ ದಪ್ಪ) ಈ ಶೋಧಕದಲ್ಲಿ ಸೋಸಿದ ಮಳೆನೀರನ್ನು ನೇರವಾಗಿ ಬಾವಿಗೆ ಬಿಡಬಹುದು. ಟ್ಯಾಂಕಿನ ಬದಲಾಗಿ ದೊಡ್ಡ ಪ್ಲಾಸ್ಟಿಕ್ ಅಥವಾ ಅಲ್ಯುಮಿನಿಯಂ ಬಕೆಟಿನಿಂದ ಇಂತಹ ಶೋಧಕ ಮಾಡಿ ಕೊಳ್ಳಬಹುದು.

ಬೀಳ್ಗೊಡುವಾಗ, ಬಾವಿಯಲ್ಲಿ ಮುಕ್ಕಾಲು ಭಾಗ ತುಂಬಿದ್ದ ನೀರನ್ನು ತೋರಿಸುತ್ತಾ, ಡಾ. ಉಪಾಧ್ಯ ಹೇಳಿದರು, “ಬಾವಿಗೆ ಮಳೆನೀರಿಂಗಿಸಿ ನಮಗೆ ಪ್ರಯೋಜನ ಆಗಿದೆ. ಇಲ್ಲೇ ಕಾಣುತ್ತದೆ ನೋಡಿ. ಸುತ್ತಲಿನ ಮನೆಗಳವರಿಗೂ ಪ್ರಯೋಜನ ಆಗಿದೆ. ಅವರ ಬಾವಿಗಳಲ್ಲೂ ಬೇಸಗೆಯಲ್ಲಿ ನೀರಿನ ಮಟ್ಟ ಏರಿದೆ.”

## ಬಳಕೆದಾರರ ಕೋರ್ಟಿನ ತೀರ್ಪು: ರೈತರೇ ನೀರಾವರಿ ಇಲಾಖೆಯ ಬಳಕೆದಾರರು

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನ ಕೆ. ಕಣಬೂರು ಗ್ರಾಮದಲ್ಲಿದೆ ಕೊರಲುಕೊಪ್ಪ. ಅಲ್ಲಿಯ ಜಮೀನಿಗೆ ತುಂಗಾ ಏತ ನೀರಾವರಿ ಯೋಜನೆಯಲ್ಲಿ ಕರ್ನಾಟಕದ ನೀರಾವರಿ ಇಲಾಖೆ ನೀರು ಒದಗಿಸಬೇಕಾಗಿತ್ತು. ಆದರೆ ಇಲಾಖೆ ನೀರು ಸರಬರಾಜು ಮಾಡಲೇ ಇಲ್ಲ. ಹಾಗಂತ ರೈತರಿಗೆ ನೀರಾವರಿ ಶುಲ್ಕ ವಿನಾಯ್ತಿ ಮಾಡಿದರೇ? ಅದನ್ನೂ ಮಾಡಲಿಲ್ಲ.

ತುಂಗಾ ಏತ ನೀರಾವರಿ ಯೋಜನೆ ಕಾರ್ಯಗತವಾದದ್ದು ೧೯೭೨ರಲ್ಲಿ. ಕೆ. ಕಣಬೂರು ಗ್ರಾಮದ ೧೦೦೮ ಎಕ್ರೆ ಜಮೀನಿಗೆ ನೀರು ಒದಗಿಸಲಿಕ್ಕಾಗಿ. ಅಲ್ಲಿಂದ ೫ ಕಿ.ಮೀ. ದೂರದ ಕೊರಲುಕೊಪ್ಪದ ಜಮೀನಿಗೂ ಆಗ ನೀರು ಹರಿಸುವ ಯೋಜನೆ ಮಾಡಲಾಗಿತ್ತು. ಆದರೆ ಗದ್ದೆಗಳಿಗೆ ನೀರು ಹರಿಸಲು ಕಾಲುವೆ ನಿರ್ಮಿಸಲಿಲ್ಲ. ಇದರಿಂದಾಗಿ ಇಲ್ಲಿನ ತೋಟಗಳು ಒಣಗಿ ಹೋದವು ಎಂಬುದು ಗ್ರಾಮದ ಹಿರಿಯರ ದೂರು.

ರೈತರ ಜಮೀನಿಗೆ ನೀರು ಒದಗಿಸದಿದ್ದರೂ ನೀರಾವರಿ ಇಲಾಖೆ ಪ್ರತಿ ವರುಷ ನೀರಾವರಿ ಶುಲ್ಕ ವಿಧಿಸುತ್ತಾ ಬಂತು. “ಇದು ಅನ್ಯಾಯ” ಎಂದು ರೈತರು ಮೇಲಧಿಕಾರಿಗಳಿಗೆ ಮನವಿ ಸಲ್ಲಿಸುತ್ತಾ ಬಂದರು. ಇದಕ್ಕೆ ನೀರಾವರಿ ಇಲಾಖೆಯ ಅಧಿಕಾರಿಗಳು ಪ್ರತಿಕ್ರಿಯೆ ನೀಡಲೇ ಇಲ್ಲ. ಕ್ರಮೇಣ ಹಲವು ವರುಷಗಳ “ಶುಲ್ಕ ಬಾಕಿ” ಸಾವಿರಾರು ರೂಪಾಯಿಗಳಿಗೆ ಬೆಳೆಯಿತು. ಕೊನೆಗೆ ತಹಶೀಲ್ದಾರರಿಂದ ರೈತರಿಗೆ ಬಂದ ನೋಟೀಸ್‌ನಲ್ಲಿ “ಶುಲ್ಕ ಬಾಕಿ ಕಟ್ಟದಿದ್ದರೆ ಜಮೀನು ಹರಾಜು ಹಾಕಲಾಗುವುದು” ಎಂಬ ಬೆದರಿಕೆ!

“ನೀರಾವರಿ ಇಲಾಖೆ ಪ್ರಕಾರ ಕೊರಲುಕೊಪ್ಪಕ್ಕೆ ನೀರು ಸರಬರಾಜಾಗುತ್ತಿದ್ದು ಅದನ್ನು ಬಳಸಿ ರೈತರು ಬೆಳೆ ಬೆಳೆದಿದ್ದಾರೆ. ಅವರಿಗೆ ವರುಷಕ್ಕೆ ಒಂದು ಎಕ್ರೆಗೆ ೭೫ ರೂಪಾಯಿಗಳಂತೆ ನೀರಾವರಿ ಶುಲ್ಕ ಮತ್ತು ೪ ರೂಪಾಯಿ ನಿರ್ವಹಣಾ ವೆಚ್ಚ ವಿಧಿಸಲಾಗುತ್ತಿತ್ತು. ಆದರೆ ಶುಲ್ಕ ಪಾವತಿಸದ ರೈತರ ನಿರ್ಲಕ್ಷ್ಯದಿಂದಾಗಿ ಬಾಕಿ ಮಾಡಿದ ತೆರಿಗೆ ದೊಡ್ಡ ಮೊತ್ತವಾಗಿ ಬೆಳೆದಿದೆ” ಎಂಬುದು ತಹಶೀಲ್ದಾರರ ಅಂಬೋಣ.

ಇಂತಹ ಸಂದರ್ಭಗಳಲ್ಲಿ ರೈತರು ಏನು ಮಾಡಬಹುದು? ನ್ಯಾಯಕ್ಕಾಗಿ “ಬಳಕೆದಾರರ ಕೋರ್ಟಿ”ನ ಮೆಟ್ಟಲು ಹತ್ತಬಹುದು. ಹೀಗೆ ಹಕ್ಕು ಸಾಧನೆ ಮಾಡಿದವರು ಚಾಮರಾಜನಗರದ ಆಲೂರು ಗ್ರಾಮದ ಇಬ್ಬರು ರೈತರು. ಅವರಿಬ್ಬರೂ ನೀರಾವರಿ ಇಲಾಖೆ ವಿರುದ್ಧ ಬಳಕೆದಾರರ ಕೋರ್ಟಿನಲ್ಲಿ ದಾವೆ ಹೂಡಿ ಗೆದ್ದಿದ್ದಾರೆ.

ಪ್ರಕರಣದ ಹಿನ್ನೆಲೆ: ಸುವರ್ಣಾವತಿ ನದಿ ದಡದಲ್ಲಿರುವ ಆಲೂರಿನಲ್ಲಿ ಚೋಳರ ಕಾಲದಿಂದಲೂ ಕೃಷಿ ಸಾಗಿ ಬಂದಿದೆ. ೧೯೬೬ರಲ್ಲಿ ನದಿಗೆ ಅಣೆಕಟ್ಟು ಕಟ್ಟಲು ಸರಕಾರದ ನಿರ್ಧಾರ. ಇದರಿಂದ ಹಚ್ಚುವರಿ ೭,೦೦೦ ಎಕ್ರೆಗಳಿಗೆ ನೀರಾವರಿ ಒದಗಿಸುವ ಯೋಜನೆ. ಆಗಲೇ ಆಲೂರಿನ ರೈತರು ಇದನ್ನು ವಿರೋಧಿಸಿದ್ದರು. ಅಂತಿಮವಾಗಿ ಸರಕಾರ ರೈತರಿಗೆ ಲಿಖಿತ ಆಶ್ವಾಸನೆ ನೀಡಿತು: ಜಲಾಶಯದಿಂದ ನಿರಂತರವಾಗಿ ಕೃಷಿಗೆ ನೀರು ಸರಬರಾಜು ಮಾಡಲಾಗುವುದೆಂದು.

ಆದರೆ ಆದದ್ದೇನು? ೨೦೦೨ -೨೦೦೫ರಲ್ಲಿ ಆಲೂರನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿದ ಅಧಿಕಾರಿಗಳು, ಜಲಾಶಯದಿಂದ ನೀರು ಬಿಡಲು ನಿರಾಕರಿಸಿದರು. ಇದರಿಂದಾಗಿ ೪೦ ಗ್ರಾಮಗಳ ೪,೦೦೦ ಹೆಕ್ಟೇರ್ ರೈತರ ಜಮೀನಿನಲ್ಲಿ ಕೃಷಿಗೆ ಎದುರಾಯಿತು ಸಂಕಟ.

ಅಲ್ಲಿನ ತೆಂಗು ಬೆಳೆಗಾರ ಮಹೇಶ ಪ್ರಭು “ನೀರು ಪಡೆಯುವ ತಮ್ಮ ಹಕ್ಕು ಸಾಧನೆ” ಮಾಡಲು ನಿರ್ಧರಿಸಿದರು. ಅದಕ್ಕಾಗಿ ಚಾಮರಾಜನಗರದ ಜಿಲ್ಲಾ ಬಳಕೆದಾರರ ಕೋರ್ಟಿನಲ್ಲಿ ೮ ಎಪ್ರಿಲ್ ೨೦೦೫ರಂದು ದಾವೆ ಹೂಡಿದರು. ತಮಗಾದ ನಷ್ಟಕ್ಕಾಗಿ ರೂ.೪,೯೦,೦೦೦ ಪರಿಹಾರ ಕೇಳಿದರು. ಅದೇ ಕೋರ್ಟಿನಲ್ಲಿ ಅಲ್ಲಿನ ಮಮತಾ ಅವರೂ ದಾವೆ ಹೂಡಿ ರೂ.೨,೯೧,೦೦೦ ಪರಿಹಾರ ವಿನಂತಿಸಿದರು. ತಾವು ಬಳಕೆದಾರರು; ಸೇವಾ ನ್ಯೂನತೆಗಾಗಿ ಸರಕಾರ ಪರಿಹಾರ ನೀಡಬೇಕೆಂಬುದು ಅವರ ವಾದ.

ಅಂತಿಮವಾಗಿ, ೧೯ ಜನವರಿ ೨೦೦೬ರಂದು ಬಳಕೆದಾರರ ಕೋರ್ಟ್ ಇಬ್ಬರೂ ರೈತರ ಪರವಾಗಿ ಚಾರಿತ್ರಿಕ ತೀರ್ಪು ನೀಡಿತು. ಬಳಕೆದಾರರ ರಕ್ಷಣಾ ಕಾಯಿದೆಯ ಪ್ರಕಾರ, ರೈತರು ನೀರಾವರಿ ಇಲಾಖೆಯ ಬಳಕೆದಾರರೆಂದೂ ಜಲಾಶಯದ ನಿರ್ವಹಣಾ

ಅಧಿಕಾರಿಗಳು ಪೂರೈಕೆದಾರರೆಂದೂ ಕೋರ್ಟ್ ಘೋಷಿಸಿತು. ರೈತರಿಗೆ ಕೃಷಿ ನಷ್ಟಕ್ಕಾಗಿ ರೂ.೫,೦೦೦ ಪರಿಹಾರ, ಮಾನಸಿಕ ಹಿಂಸೆಗಾಗಿ ಪರಿಹಾರ ಮತ್ತು ದಾವೆಯ ವೆಚ್ಚ ಪಾವತಿಸಬೇಕೆಂದು ತೀರ್ಪಿನಲ್ಲಿ ಕೋರ್ಟ್ ಆದೇಶಿಸಿತು.

ತಾವು ಬಳಕೆದಾರರು ಎಂಬುದನ್ನು ರೈತರಿಬ್ಬರೂ ಸರಕಾರಿ ನಿಯಮಗಳ ಆಧಾರದಿಂದಲೇ ಸಾಬೀತು ಮಾಡಿದರು. ಯಾಕೆಂದರೆ ಕರ್ನಾಟಕ ನೀರಾವರಿ ನಿಯಮಗಳು ೧೯೬೫ರ ನಿಯಮ ೪ ಹೀಗೆಂದು ವಿಧಿಸಿದೆ: "ಹೆಕ್ಟೇರಿಗೆ ರೂಪಾಯಿ ೨ರಿಂದ ರೂಪಾಯಿ ೪೫ ತನಕ ನೀರಿನ ಶುಲ್ಕ (ವಾಟರ್ ರೇಟ್) ವಸೂಲಿ ಮಾಡತಕ್ಕದ್ದು."

ನೀರಾವರಿ ಪ್ರದೇಶದ ಎಲ್ಲ ರೈತರೂ ಸರಕಾರಕ್ಕೆ ೩ ವಿಧಗಳ ಶುಲ್ಕ ಪಾವತಿಸುತ್ತಾರೆ: ಅಭಿವೃದ್ಧಿ ಶುಲ್ಕ, ನಿರ್ವಹಣಾ ಸೆಸ್ ಮತ್ತು ನೀರಿನ ಶುಲ್ಕ. ಬೇರೆಬೇರೆ ಪ್ರದೇಶಗಳ್ಲಿ ಬೇರೆಬೇರೆ ಮೊತ್ತದ ನೀರಿನ ಶುಲ್ಕ ವಸೂಲಿ. ಈ ದಾವೆ ಹೂಡಿದ ರೈತರು, ನೀರಿನ ಶುಲ್ಕವು "ತೆರಿಗೆ" ಅಲ್ಲವೆಂದೂ, ಅದು ನೀರೊದಗಿಸುವ "ಸೇವೆ"ಗೆ ವಿಧಿಸುವ "ಶುಲ್ಕ"ವೆಂದೂ ವಾದಿಸಿದರು. ಈ ವಾದವನ್ನು ಎತ್ತಿ ಹಿಡಿದ ಬಳಕೆದಾರರ ಕೋರ್ಟ್ ರೈತರಿಬ್ಬರೂ ಕಾಯಿದೆಯ ಪ್ರಕಾರ "ಬಳಕೆದಾರರು" ಎಂದು ಸಾರಿತು.

ಇಂತಹ ಪ್ರಕರಣಗಳಲ್ಲಿ ಸಿಲುಕಿಕೊಳ್ಳುವ ರೈತರಿಗೆ ಎರಡು ದಾರಿಗಳಿವೆ: ಸರಕಾರವನ್ನು ದೂಷಿಸುತ್ತಾ ಅನ್ಯಾಯವನ್ನು ಸಹಿಸಿಕೊಳ್ಳುವುದು ಅಥವಾ ಪುರಾವೆಗಳ ಆಧಾರದಿಂದ ಕೋರ್ಟಿನಲ್ಲಿ ಹಕ್ಕು ಸಾಧನೆ ಮಾಡಿ ಪರಿಹಾರ ಪಡೆಯುವುದು. ಆಯ್ಕೆ ರೈತರ ಕೈಯಲ್ಲೇ ಇದೆ.

## ಕನಿಷ್ಠ ನೀರಿನಿಂದ ಕೃಷಿ

"ನಮ್ ಕಡೆ ಹಿಂದಿನ್ ವರ್ಷ ಮಳೇನೇ ಆಗಿಲ್ಲ. ನಿಮ್ ಕಡೆ ಸ್ವಲ್ಪನಾದ್ರೂ ಮಳೆ ಆಗ್ಯೆತಿ. ನಿಮ್ ತೋಟದಾಗೆ ಮಣ್ ಅಗೆದ್ರೆ ಎಷ್ಟಡಿ ಆಳ ನೀರಿನ್ ಪಸೆ ಇರ್ತದೆ?" ಎಂಬ ಪ್ರಶ್ನೆ ವಿಠಲಾಪುರದ ವೀರಪ್ಪ ಅವರದು.

ನನ್ನೊಂದಿಗಿದ್ದ ಚಿಕ್ಕಮಗಳೂರು ತಾಲೂಕಿನ ಕುನ್ನಾಳು ಗ್ರಾಮದ ಹದಿನೈದು ರೈತರು ತಮ್ಮೊಳಗೆ ಮಾತಾಡಿಕೊಂಡು ಉತ್ತರಿಸಿದರು, "ಮಣ್ಣಲ್ಲಿ ಐದಾರು ಇಂಚು ಆಳದ ವರೆಗೆ ನೀರಿನ್ ಪಸೆ ಇರ್‍ತೋದು."

"ನಮ್ ತೋಟದಲ್ಲಿ ಹೆಂಗ್ಯೆತೆ ನೋಡಿ" ಎಂದು ವೀರಪ್ಪ ಹಾರೆ ಎತ್ತಿಕೊಂಡು ಮಣ್ಣು ಅಗೆಯತೊಡಗಿದರು. ಎರಡು ಅಡಿ ಆಳಕ್ಕೆ ಅಗೆದು ತೋರಿಸಿದರು. ಅಷ್ಟು ಆಳದ ವರೆಗೂ ಮಣ್ಣಿನಲ್ಲಿ ತೇವಾಂಶವಿತ್ತು. ಅದರಿಂದಾಗಿಯೇ ಅವರ ೧೫ ಎಕ್ರೆ ತೋಟದಲ್ಲಿ ಮರಗಿಡಗಳೆಲ್ಲ ಹಸುರಾಗಿದ್ದವು. ತೆಂಗು ಮತ್ತು ಅಡಿಕೆ ಮುಖ್ಯ ಬೆಳೆಗಳು. ಜಾಯಿಕಾಯಿ, ವೀಳ್ಯದೆಲೆ, ಅರಸಿನ, ಕರಿಮೆಣಸು, ವೆನಿಲ್ಲಾ, ಪಪ್ಪಾಯಿ ಉಪಬೆಳೆಗಳು.

ಅಕ್ಕಪಕ್ಕದ ತೋಟಗಳಲ್ಲಿ ಮರಗಿಡಗಳೆಲ್ಲ ಒಣಗಿ ಸೊರಗಿದ್ದವು. ಯಾಕೆಂದರೆ ಚಿಕ್ಕಮಗಳೂರಿನ ತರೀಕೆರೆ ತಾಲೂಕಿನಲ್ಲಿ ಹಿಂದಿನ ಎರಡು ವರುಷಗಳಲ್ಲಿ ಮಳೆ ಬಂದದ್ದೇ ಇಲ್ಲ ಅನ್ನಬೇಕು. ವೀರಪ್ಪರ ತೋಟಕ್ಕೆ ನಾವು ಭೇಟಿ ಕೊಟ್ಟ ವರುಷ ಅಕ್ಟೋಬರ್ ತನಕ ಅಲ್ಪಸ್ವಲ್ಪ ಮಳೆ. ಅನಂತರ ಒಂದು ಹನಿ ಮಳೆ ಬಿದ್ದಿರಲಿಲ್ಲ. ಅಂತಹ ಸನ್ನಿವೇಶದಲ್ಲಿ ಇವರ ತೋಟದ ಮರಗಿಡಗಳು ಬಾಡಿದ್ದರೂ ಹಸುರು ಉಳಿದಿತ್ತು.

“ನಿಮ್ ತೋಟದಾಗೆ ನೀರಿನ್ ಪಸೆ ಉಳಿಸಿಕೊಳ್ಳಾಕೆ ಏನ್ ಮಾಡಿದ್ರಿ?” ಎಂಬ ನಮ್ಮ ಪ್ರಶ್ನೆಗೆ ವೀರಪ್ಪರ ಉತ್ತರ, “ನಮ್ ತೋಟದಾಗೆ ಏನೂ ಬೇಸಾಯ ಮಾಡಿಲ್ಲ. ಅಂದ್ರೆ ಶೂನ್ಯ ಬೇಸಾಯ. ಹಾಗಂತ ಒಂದೇಟಿಗೆ ನಾನ್ ಇಡೀ ತೋಟ ಶೂನ್ಯ ಬೇಸಾಯಕ್ಕೆ ತರ್ಲಿಲ್ಲ. ಹತ್ತುಹತ್ತು ಗುಂಟೇನೇ ಬಿಡಿಸ್ತಾ ಬಂದೆ. ಇಡೀ ತೋಟಾನ ಶೂನ್ಯ ಬೇಸಾಯಕ್ಕೆ ತರೋದಕ್ಕೆ ನಂಗೆ ಇಪ್ಪತ್ತು ವರ್ಷ ಬೇಕಾತು.”

ಆ ತಾಲೂಕಿನ ಎಲ್ಲ ರೈತರಂತೆ ವೀರಪ್ಪರಿಗೂ ನೀರಿನ ಸಮಸ್ಯೆ. ಹಳೆಯ ಬಾವಿಯ ನೀರು ಕಡಿಮೆಯಾಗುತ್ತ ಬಂದಂತೆ ಎರಡನೇ ಬಾವಿ ತೋಡಿಸಿದರು. ಇದರ ನೀರೂ ವಿಸ್ತರಿಸುತ್ತಿದ್ದ ತೋಟಕ್ಕೆ ಸಾಲದಾಯಿತು. ಆಗ ಕೊಳವೆಬಾವಿ ಕೊರೆಸಲು ಶುರು ಮಾಡಿದರು. “ಹದಿನೆಂಟು ಬೋರ್ ಹೊಡೆಸಿದೆ. ಒಂದ್ರಲ್ಲೂ ನೀರ್ ಸಿಕ್ಲಿಲ್ಲ. ಕೆಲವು ಬೋರ್ ೩೫೦ ಅಡಿ ಹೊಡ್ಸಿದ್ದೆ. ಕೊನೆಗೆ ಆ ಕಲ್ಲುಬಂಡೆ ಹತ್ರ ಬೋರ್ ತೆಗ್ಸಿದೆ. ಅಲ್ಲಿ ೬೦ ಅಡಿಗೇ ನೀರು ಸಿಕ್ತು” ಎಂದು ವೀರಪ್ಪ ನೆನಪು ಮಾಡಿಕೊಂಡರು.

ಇನ್ನು ಹೊಸ ಕೊಳವೆಬಾವಿ ಬೇಡ; ಇರುವ ನೀರಿನಲ್ಲೇ ಕೃಷಿ ಮಾಡಬೇಕೆಂದು ಶೂನ್ಯ ಬೇಸಾಯ ಪದ್ಧತಿ ಅನುಸರಿಸಲು ನಿರ್ಧರಿಸಿದರು. ತೋಟದಲ್ಲಿ ಉಳುಮೆ ಮಾಡೋದನ್ನು ನಿಲ್ಲಿಸಿದರು. ಸಣ್ಣ ಮಟ್ಟದಲ್ಲಿ ಎರೆಹುಳಗೊಬ್ಬರ ಮಾಡತೊಡಗಿದರು. ಕ್ರಮೇಣ ರೂ. ೧ ಲಕ್ಷ ವೆಚ್ಚದಲ್ಲಿ ಎರೆಹುಳ ಸಾಕಾಣಿಕೆ ಘಟಕದ ನಿರ್ಮಾಣ. ತೋಟಕ್ಕೆ ಬಳಸಿ ಮಿಕ್ಕಿದ ಎರೆಹುಳ ಗೊಬ್ಬರ ಮಾರಾಟ.

“ಎರೆಹುಳ ಗೊಬ್ಬರ ಹಾಕಿದ್ರಿಂದಾಗಿ ಮೂರು ವರುಷ ಮಳೆ ಇಲ್ಲದಿದ್ರೂ ಗಿಡಗಳ ಬುಡದಲ್ಲಿ ನೀರಿನ ಪಸೆ ಉಳಿದೈತೆ. ಯಾಕಂದ್ರೆ ಎರೆಹುಳಗಳೇ ಉಳುಮೆ ಮಾಡ್ತವೆ” ಎಂದರು ವೀರಪ್ಪ. ತೆಂಗಿನ ಮರದ ಬುಡದಿಂದ ಮೂರು ಅಡಿ ದೂರದಲ್ಲಿ ಮರದ ಸುತ್ತಲೂ ಅರ್ಧ ಇಂಚು ಆಳಕ್ಕೆ ಮಣ್ಣನ್ನು ಹಾರೆಯಿಂದ ತೆಗೆಯುತ್ತಾರೆ. ಅಲ್ಲಿ ಎರೆಹುಳಗೊಬ್ಬರ ಹರಡಿ ಅದರ ಮೇಲೆ ಮಣ್ಣು ಹಾಕಿ ಮುಚ್ಚುತ್ತಾರೆ.

ಶೂನ್ಯ ಬೇಸಾಯದಿಂದ ಅವರ ಇಳುವರಿ ಕಡಿಮೆಯಾಗಿಲ್ಲ. ಸರಾಸರಿ ಒಂದು ಅಡಿಕೆಮರದಿಂದ ೧ ಕಿಲೋ ಒಣ ಅಡಿಕೆ ಇಳುವರಿ. “ಏನೂ ಬೇಸಾಯ ಮಾಡದೆ ಮೂರೆಕ್ರೆಯಿಂದ ನಂಗೆ ೧೪ ಕ್ವಿಂಟಾಲ್ ಒಣ ಅಡಿಕೆ ಸಿಗ್ತಿದೆ. ಅದೇ ನಮ್ ಕಡೆ ಉಳುಮೆ ಮಾಡಿ ಪೇಟೆಗೊಬ್ರ ಹಾಕೋರಿಗೂ ಸರಾಸರಿ ಇಷ್ಟು ಇಳುವರಿ ಸಿಗಲ್ಲ” ಎಂದು ವೀರಪ್ಪ ವಿವರಿಸಿದರು.

ತಮ್ಮ ಕೊಳವೆಬಾವಿಗೆ ಜಲಮರುಪೂರಣ ಮಾಡುತ್ತಿರುವ ವೀರಪ್ಪ ಕೃಷಿಕರನ್ನು ಎಚ್ಚರಿಸುತ್ತಾರೆ, “ಎಲ್ಲ ರೈತರೂ ಮಳೆನೀರು ಇಂಗಿಸಬೇಕು. ಇಲ್ಲಾಂದ್ರೆ ಬಹಳ ಕಷ್ಟಕ್ಕೆ ಸಿಕ್‌ಹಾಕ್ಕೊಳ್ತಾರೆ.”

## ಗುಡ್ಡದಲ್ಲಿ ಮಳೆನೀರಿಂಗಿಸಿದರೆ ತೋಟಕ್ಕೆ ಲಾಭ

ಮೇ ೧, ೨೦೦೯ರಂದು ಅಪರಾಹ್ನ ಬೈಕಿನಲ್ಲಿ ಮಂಚಿಗೆ ಹೋಗಿದ್ದೆ, ಆಪ್ತರಾದ ಶ್ರೀನಿವಾಸ ಆಚಾರ್ ಅವರ ಮನೆಗೆ. ಮಂಗಳೂರಿನಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿ.ಸಿ.ರೋಡ್ ದಾಟಿ, ಪುತ್ತೂರು ರಸ್ತೆಯಲ್ಲಿ ಮೇಲ್ಕಾರಿನಲ್ಲಿ ಬಲಕ್ಕೆ ತಿರುಗಿ ಸಾಗಿದ್ದೆ. ಬಿಸಿಲಿನಲ್ಲಿ ಒಂದು ತಾಸಿನ ಪಯಣ ಬೇಸಗೆಯ ಬಿಸಿ ಮುಟ್ಟಿಸಿತ್ತು.

ಅಂದು ಸಂಜೆಯಾಗುತ್ತಿದ್ದಂತೆ ಶ್ರೀನಿವಾಸ ಆಚಾರ್ ಕರೆದರು, “ಗುಡ್ಡದಲ್ಲಿ ದೊಡ್ಡ ಹೊಂಡ ಮಾಡಿಸಿದ್ದೇನೆ. ನೋಡಿ ಬರುವಾ”. ಅವರ ಮನೆಯ ಹಿಂಭಾಗದಲ್ಲಿರುವ ಗುಡ್ಡ ಏರಿದೆವು. ಅಲ್ಲಿ ಆಯಕಟ್ಟಿನ ಜಾಗದಲ್ಲಿ ವಿಸ್ತಾರವಾದ ಹೊಂಡ. ಸುಮಾರು ೮೦ ಅಡಿ ಉದ್ದ, ೬೦ ಅಡಿ ಅಗಲ, ೩ ಅಡಿ ಆಳ. ಅದರ ಅಕ್ಕಪಕ್ಕದಿಂದ ಮಳೆನೀರು ಹರಿದು ಬರಲು ತೋಡುಗಳ ಜಾಲ. ಅಲ್ಲಿ ವರುಷಕ್ಕೆ ೪,೦೦೦ ಮಿಮೀ ಮಳೆ. ಮಳೆನೀರು ತುಂಬಿದರೆ ಆ ಹೊಂಡ ೪.೫ ಲಕ್ಷ ಲೀಟರಿನ ನೀರ ಖಜಾನೆ.

ಮೊನ್ನೆ ಶ್ರೀನಿವಾಸ ಆಚಾರ್ ಬಂದು ಹೇಳಿದ ಸಿಹಿಸುದ್ದಿ, “ಜುಲಾಯಿ ತಿಂಗಳ ಮಳೆಗೆ ಹೊಂಡ ತುಂಬಿ ನೀರು ಹೊರಕ್ಕೆ ಹರಿದಿದೆ ಮಾರಾಯರೇ”. ಮುಂದಿನ ವರುಷ ಅದರ ಬದಿಯ ಕಚ್ಚಾ ಹಾದಿಗೆ ಮಣ್ಣು ಹಾಕಿ ಇನ್ನೂ ಎರಡಡಿ ಏರಿಸಬೇಕು. ಇನ್ನಷ್ಟು ನೀರು ಹೊಂಡದಲ್ಲಿ ತುಂಬಲಿ, ಎಂಬುದು ಅವರ ಯೋಜನೆ.

ಶ್ರೀನಿವಾಸ ಆಚಾರ್ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಕಾರ್ಯದರ್ಶಿ. 'ನೀರಿಂಗಿಸುವ ವಿಷಯ ಬರೀ ಹೇಳಿದ್ರೆ ಸಾಲದು. ಮಾಡಿ ತೋರಿಸಬೇಕು' ಎಂಬುದು ಅವರ ನಿಲುವು. ಆ ಗುಡ್ಡದ ಬುಡದಲ್ಲಿರುವ ಅವರ ಅಡಿಕೆ ತೋಟಕ್ಕೆ ನೀರಿನಾಸರೆ ಹಳೆಯ ಕೆರೆ. ಅದರಲ್ಲಿ ಬೇಸಗೆಯಲ್ಲಿ ಕೂಡ ಸಾಕಷ್ಟು ನೀರಿರುತ್ತದೆ. ಆದರೂ ಧುಮುಕಿ ಹೋಗುವ ಮಳೆನೀರನ್ನು ಹಿಡಿದಿಡುವ, ಇಂಗಿಸುವ ಕಾಯಕಕ್ಕೆ ಕೈಹಾಕಿದ್ದಾರೆ.

ಮೇ ೧೨, ೨೦೦೯ರಂದು ಸುಳ್ಯದಲ್ಲಿ ಪ್ರಸಾದ್ ರಕ್ಷಿದಿ ಅವರ ಭೇಟಿ. ಆಗ, ತನ್ನ ಜಮೀನಿನ ನೀರಿನ ಕೊರತೆ ಎದುರಿಸಲಿಕ್ಕಾಗಿ ಮಳೆನೀರಿಂಗಿಸಿದ ಅನುಭವ ಹಂಚಿಕೊಂಡಿದ್ದರು. ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಹಳ್ಳಿ ರಕ್ಷಿದಿಯಲ್ಲಿ ಅವರ ಜಮೀನು. ಅದು ವಾರ್ಷಿಕ ೨,೫೦೦ರಿಂದ ೩,೦೦೦ ಮಿಮೀ ಮಳೆಯಾಗುವ ಮಲೆನಾಡು ಪ್ರದೇಶ.

ಆದರೂ ಅಲ್ಲಿ ನೀರಿನ ಸಮಸ್ಯೆ. ಹಾಗಾಗಿ ಇಪ್ಪತ್ತು ವರುಷಗಳ ಮುಂಚೆ ಅಲ್ಲೊಂದು ಕೆರೆ ತೋಡಿಸಿದ್ದರು. ಅದರಲ್ಲಿ ಡಿಸೆಂಬರ್ ವರೆಗೆ ಮಾತ್ರ ನೀರು. ಅನಂತರ ಬತ್ತುತ್ತಿತ್ತು. ಆ ಕೆರೆ ಪ್ರಸಾದರ ಮನೆಯ ಹತ್ತಿರವಿರಲಿಲ್ಲ, ತೋಟದ ಅಂಚಿನಲ್ಲಿತ್ತು. ಕೆರೆಯಲ್ಲಿ ಡಿಸೆಂಬರ್ ನಂತರವೂ ೩ - ೪ ತಿಂಗಳು ನೀರು ಇರಬೇಕಾದರೆ ಏನು ಮಾಡಬೇಕೆಂಬ ಚಿಂತೆ ಪ್ರಸಾದರಿಗೆ.

ಆಗ “ನೆಲ-ಜಲ ಉಳಿಸುವ” ಲೇಖನಗಳನ್ನು ಓದುತ್ತಿದ್ದಂತೆ ಅವರಿಗೊಂದು ಯೋಚನೆ. ಆ ಕೆರೆಯ ಮೇಲ್ಭಾಗದ ತೋಟದಲ್ಲಿ ಮಳೆನೀರ ಕೊಯ್ಲು ಮಾಡಿದರೆ ಹೇಗೆ? ಅದು ಒಣ ಜಾಗ. ಆದರೂ ಅಲ್ಲಿ ಮಳೆನೀರಿಂಗಿಸಲು ೩ - ೪ ಎಕ್ರೆ ಜಾಗದಲ್ಲಿ ಕತ್ತರಿಗುಂಡಿ ತೆಗೆಸಿದರು ಪ್ರಸಾದ್ ರಕ್ಷಿದಿ.

ಸುತ್ತಮುತ್ತಲಿನ ಜನರ ಪ್ರಕಾರ ಅದು ಪ್ರಯೋಜನವಿಲ್ಲದ ಕೆಲಸ. ಅವರೆಲ್ಲ ಪ್ರಸಾದರ ಇಂಗುಗುಂಡಿಗಳ ಬಗ್ಗೆ ಆಡಿಕೊಂಡರು. ಅದನ್ನೆಲ್ಲ ಕೇಳಿಕೊಂಡು ಸುಮ್ಮನಾದರು ಪ್ರಸಾದ್. ಫಲಿತಾಂಶಕ್ಕಾಗಿ ಕಾದರು. ಡಿಸೆಂಬರ್ನಲ್ಲಿ ಕೆರೆಯ ನೀರಿನ ಮಟ್ಟದಲ್ಲಿ ಬದಲಾವಣೆ ಕಾಣಿಸಲಿಲ್ಲ. ಜನವರಿ ದಾಟಿ ಫೆಬ್ರವರಿ ಬಂದಾಗ ಪ್ರಯೋಗದ ಪ್ರಯೋಜನ ಕಂಡು ಬಂತು - ಕೆರೆಯಲ್ಲಿ ನೀರಿನ ಮಟ್ಟ ತಗ್ಗಲಿಲ್ಲ! ಅನಂತರ ನೀರಿನ ಮಟ್ಟ ತಗ್ಗಿದರೂ ಕೆರೆ ಬತ್ತಲಿಲ್ಲ! ಕೊನೆಗೆ ಮೊದಲ ಮಳೆ ಸುರುಯುವ ತನಕ ಕೆರೆಯಲ್ಲಿತ್ತು ಒಂದೂವರೆ ಅಡಿ ನೀರು. ತನ್ನ ಬಗ್ಗೆ ಆಡಿಕೊಂಡಿದ್ದ ಸುತ್ತಮುತ್ತಲಿನವರಿಗೆ ಇದನ್ನು ತಿಳಿಸಿದರು ಪ್ರಸಾದ್. ಈಗ ಸುಮ್ಮನಾಗುವ ಸರದಿ ಅವರದಾಯಿತು.

ನಮ್ಮ ಒಟ್ಟಾರೆ ನೀರಿನ ಬಳಕೆಯಲ್ಲಿ ಕೃಷಿಯ ಪಾಲು ಶೇಕಡಾ ೭೦. ಆದ್ದರಿಂದ ಇಂಥವರ ಅನುಭವಗಳು ಮುಖ್ಯವಾಗುತ್ತವೆ. ಓಡುವ ನೀರನ್ನು ನಿಲ್ಲಿಸಿ, ನಿಲ್ಲಿಸಿದ ನೀರನ್ನು ಇಂಗಿಸಿದಷ್ಟೂ ನೀರನೆಮ್ಮದಿ ಹೆಚ್ಚುತ್ತದೆ, ಅಲ್ಲವೇ?

# ನೀರಿಂಗಿಸೋಣ, ನಿಮ್ಮ ಮನದಲ್ಲೊಂದಿಷ್ಟು ಜಾಗ ಕೊಡಿ!

ಮಾರ್ಚ್ ೯, ೨೦೦೯ರಂದು ವಿವಿದ ಕಾಮಗಾರಿಗಳ ಪರಿಶೀಲನೆಗಾಗಿ ದಕ್ಷಿಣಕನ್ನಡದ ಉಸ್ತುವಾರಿ ಸಚಿವರಿಂದ ತಮ್ಮ ಕ್ಷೇತ್ರ ಸುರತ್ಕಲ್‌ನ ಭಾಗವಾದ ಕೃಷ್ಣಾಪುರಕ್ಕೆ ಭೇಟಿ. ಆಗ ಅವರೆದುರು ಅಲ್ಲಿನ ಆರನೇ ಬ್ಲಾಕಿನ ನಿವಾಸಿಗಳ ಪ್ರತಿಭಟನೆ. "ತಮ್ಮ ಬ್ಲಾಕಿನ ನಳ್ಳಿಗಳಲ್ಲಿ ನೀರು ಬರುತ್ತಿಲ್ಲ, ಮಾರ್ಚ್ ಏಳರ ಶನಿವಾರ ಕೇವಲ ಒಂದು ಗಂಟೆ ನೀರು ಬಂದಿತ್ತು" ಎಂಬುದು ಅಲ್ಲಿನ ನಿವಾಸಿಗಳ ಆಕ್ರೋಶ.

ಈ ಸಮಸ್ಯೆ ಪರಿಹರಿಸಲು ನೀರಿನ ಟ್ಯಾಂಕರುಗಳಲ್ಲಿ ನೀರು ಸರಬರಾಜು ಮಾಡಬೇಕಾಗಿಲ್ಲ. ಮಳೆ ನೀರಿಂಗಿಸಿದರೆ ಸಾಕು.

ಯಾಕೆಂದರೆ, ಕರಾವಳಿ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ ಜೂನ್‌ನಿಂದ ಸಪ್ಟಂಬರ ತನಕ ನಾಲ್ಕು ತಿಂಗಳ ಮಳೆಗಾಲ. ಆಗ ಇಲ್ಲಿ ಬೀಳುವ ಮಳೆ ಬರೋಬ್ಬರಿ ೪೪೦೦ ಮಿಲಿಮೀಟರ್(ವಾರ್ಷಿಕ ಸರಾಸರಿ). ಇದು, ಕರ್ನಾಟಕದ ವಾರ್ಷಿಕ ಸರಾಸರಿ ಮಳೆಯ ನಾಲ್ಕು ಪಟ್ಟು! ಇಷ್ಟು ಮಳೆ ಬೀಳುವ ದಕ್ಷಿಣ ಕನ್ನಡದಲ್ಲಿ ಕೂಡ ಮಾರ್ಚ್ ತಿಂಗಳ ಆರಂಭದಲ್ಲಿಯೇ ನೀರಿನ ಸಮಸ್ಯೆ ಎದುರಾದರೆ, ನಾವು ಲೆಕ್ಕಾಚಾರ ಮಾಡಿಲ್ಲ ಎನ್ನಬೇಕು.

ನಮ್ಮ ಮನೆ ಚಾವಣಿ ಮತ್ತು ಮನೆಯಂಗಳದಲ್ಲಿ ಎಷ್ಟು ಮಳೆನೀರು ಬೀಳುತ್ತದೆಂದು ಸುಲಭವಾಗಿ ಲೆಕ್ಕ ಹಾಕಬಹುದು. ಒಂದು ಚದರ ಮೀಟರ್ ಜಾಗದ ಮೇಲೆ ಒಂದು ಮಿಲಿಮೀಟರ್ ಮಳೆ ಸುರಿದರೆ, ಸಿಗುವ ನೀರು ಒಂದು ಲೀಟರ್. ಅಂದರೆ, ನಮ್ಮ ಊರಿನ ವಾರ್ಷಿಕ ಸರಾಸರಿ ಮಳೆ ಎಷ್ಟು ಮಿಮೀ ಇದೆಯೊ, ಅಷ್ಟು ಲೀಟರ್ ನೀರು ನಮ್ಮ ಪ್ರತಿ ಚ.ಮೀ. ಜಾಗದ ಮೇಲೆ ಸುರಿಯುತ್ತದೆ. ಈ ಸೂತ್ರ ಬಳಸಿದರೆ, ೧೫೦ ಚ.ಮೀ. ಚಾವಣಿಯ ಮೇಲೆ ಒಂದು ವರುಷದಲ್ಲಿ ಸುರಿಯುವ ಮಳೆ ೧೫೦ * ೪೦೦೦ ಅಂದರೆ ೬ ಲಕ್ಷ ಲೀಟರು. (ನಿಮ್ಮ ಮನೆ ಸೈಟಿನ ಮೇಲೆ ಒಂದು ವರುಷದಲ್ಲಿ ಸುರಿಯುವ ಮಳೆ ನೀರು ಎಷ್ಟು? ನೀವೇ ಲೆಕ್ಕ ಮಾಡಿ. ನಿಮಗೊಂದು ಸೂಚನೆ: ಒಂದು ಸೆಂಟ್ಸ್ ಅಂದರೆ ೪೦ ಚ.ಮೀ.)

ಒಬ್ಬರಿಗೆ ದಿನಕ್ಕೆ ಸುಮಾರು ೧೦೦ ಲೀಟರ್ ನೀರು ಬೇಕು. ಅದರಂತೆ, ೫ ಜನರ ಕುಟುಂಬಕ್ಕೆ ವರ್ಷಕ್ಕೆ ೧,೮೨,೫೦೦ ಲೀಟರ್ ನೀರು ಬೇಕು. ಅಂದರೆ ಕರಾವಳಿಯಲ್ಲಿ ಮನೆ ಚಾವಣಿ ಮೇಲೆ ಬೀಳುವ ಮಳೆ ಪ್ರಮಾಣವೇ ಕುಟುಂಬದ ವಾರ್ಷಿಕ ಅವಶ್ಯಕತೆಗಿಂತ ಮೂರು ಪಟ್ಟು ಜಾಸ್ತಿ. ಹಾಗಾಗಿ ದಕ್ಷಿಣ ಕನ್ನಡದವರ ನೀರ ಸಮಸ್ಯೆಗೆ ಪರಿಹಾರ ಅವರ ಕೈಯಲ್ಲೇ ಇದೆ. ಭೂಮಿ ಪುಕ್ಕಟೆಯಾಗಿ ನೀಡುವ ಮಳೆ ನೀರನ್ನು ಅವರು ಭೂಮಿಯಲ್ಲಿ ಇಂಗಿಸಿದರಾಯಿತು ಅಥವಾ ಕೊಯ್ಲು ಮಾಡಿ ಸಂಗ್ರಹಿಸಿದರಾಯಿತು.

ನಮ್ಮ ಜಾಗದಲ್ಲಿ ಬಿದ್ದ ಮಳೆನೀರನ್ನು ಅಲ್ಲೇ ಇಂಗಿಸುವುದು ಬಹಳ ಸುಲಭ. ಇಬ್ಬರ ಅನುಭವ ಹೀಗಿದೆ: ಮಂಗಳೂರಿನಿಂದ ೧೭ ಕಿ.ಮೀ. (ವಾಮಂಜೂರು ರಸ್ತೆ ) ದೂರದ ಗುರುಪುರದಲ್ಲಿದೆ ಗಣೇಶ ಪ್ರಭುಗಳ ದೊಡ್ಡ ಮನೆ. ಅದರ ವಿಶಾಲ ಚಾವಣಿಯ ಮಳೆ ನೀರನ್ನೆಲ್ಲ ಮೂರು ತೆಂಗಿನ ಮರಗಳ ಬುಡದಲ್ಲಿ ಕಟ್ಟಿರುವ ಕಟ್ಟೆಗಳಿಗೆ ಹಾಯಿಸಿ ಇಂಗಿಸುತ್ತಿದ್ದಾರೆ. ಇದರಿಂದಾಗಿ ಇವರ ಬಾವಿಯಲ್ಲಿ ಮಾತ್ರವಲ್ಲ, ಸುತ್ತಲಿನ ಮನೆಗಳ ಬಾವಿಗಳಲ್ಲೂ ನೀರಿನ ಮಟ್ಟ ಏರಿದೆ.

ಮಂಗಳೂರಿನ ಬೊಂದೇಲಿನ ನಿವೃತ್ತ ಶಿಕ್ಷಕ ಜೋಸೆಫ್ ಫ್ರಾನ್ಸಿಸ್ ಡಿಸೋಜಾ ಅವರ ಬಾವಿಯ ಆಳ ೩೫ ಅಡಿ. ಕೆಲವು ವರುಷಗಳ ಮುನ್ನ ಅದರಲ್ಲಿ ಬೇಸಗೆಯಲ್ಲಿ ನೀರು ಬತ್ತಿತ್ತು. ಆದರೆ ಈಗ ಕಡು ಬೇಸಗೆಯಲ್ಲಿ ಅವರ ಬಾವಿಯಲ್ಲಿ ಹತ್ತು ಅಡಿಗಿಂತ ಜಾಸ್ತಿ ನೀರು! ನೀರಿಂಗಿಸಲು ಅವರೇನೂ ಹಣ ಖರ್ಚು ಮಾಡಿಲ್ಲ. ಆದರೆ ಎರಡು ಗಂಟೆ ಶ್ರಮ ಪಟ್ಟಿದ್ದಾರೆ. ಅವರ ತೆಂಗಿನ ತೋಟ ಹಿಂದೊಮ್ಮೆ ಗದ್ದೆಯಾಗಿತ್ತು. ಅದರಲ್ಲಿ ಅಲ್ಲಲ್ಲಿ ಮಣ್ಣು ಪೇರಿಸಿ ತೆಂಗಿನ ಮರಗಳನ್ನು ಬೆಳೆಸಿದ್ದಾರೆ. ತೋಟದ ತಗ್ಗು ಪ್ರದೇಶದಿಂದ ಮಳೆ ನೀರನ್ನೆಲ್ಲ

ತೂಬುಗಳನ್ನಿಟ್ಟು ಹೊರಕ್ಕೆ ಹಾಯಿಸುತ್ತಿದ್ದರು. ಈಗ ಮಣ್ಣು ಮತ್ತು ಬಾಳೆದಿಂಡುಗಳನ್ನು ಅಡ್ಡವಾಗಿಟ್ಟು ತೂಬುಗಳನ್ನೆಲ್ಲ ಮುಚ್ಚಿ, ಮಳೆ ನೀರ ಹರಿವಿಗೆ ತಡೆ ಒಡ್ಡಿ ಮಳೆ ನೀರು ಇಂಗಿಸುತ್ತಾರೆ.

ಇವರ ಅನುಭವದಲ್ಲಿ ಮಳೆ ನೀರಿಂಗಿಸುವ ಕೆಲಸ ಬಹಳ ಸುಲಭ. ಇಂತಹ ಅನೇಕ ಮಾದರಿಗಳು ನಮ್ಮ ಸುತ್ತಮುತ್ತಲಿವೆ. ನಮ್ಮ ಜಮೀನು,ಸೈಟು, ಮಣ್ಣು, ಚಾವಣಿ ಇವುಗಳಿಗೆ ಹೊಂದುವಂತೆ ಕೊಂಚ ಬದಲಾಯಿಸಿಕೊಳ್ಳ ಬೇಕಾದೀತು, ಅಷ್ಟೇ. ಅದಕ್ಕೇ ಹೇಳಿದ್ದು, ನೀರಿಂಗಿಸುವ ಆಲೋಚನೆ ಮನದಾಳಕ್ಕೆ ಇಳಿಯಲಿಕ್ಕಾಗಿ ನಿಮ್ಮ ಮನದಲ್ಲೊಂದಿಷ್ಟು ಜಾಗ ಕೊಡಿ.

## ಅಯ್ಯನ ಕೆರೆಯ ನೀರಿನ ಪಾಠ

“ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ತೀವ್ರ ನೀರಿನ ಕೊರತೆ - ಬೆಳಗಾಂ, ಬಿಜಾಪುರ, ರಾಯಚೂರು, ಕೋಲಾರ ಜಿಲ್ಲೆಗಳಲ್ಲಿ. ನೀರಿನ ಅಭಾವ ಎದುರಿಸಲಿಕ್ಕಾಗಿ ಹೊಸ ಕೊಳವೆಬಾವಿಗಳನ್ನು ಕೊರೆಸಲು ಮತ್ತು ಟ್ಯಾಂಕರುಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ರಾಜ್ಯ ಸರಕಾರ ರೂಪಾಯಿ ೨೧೧ ಕೋಟಿ ಬಿಡುಗಡೆ ಮಾಡಿದೆ” - ಇದು ೨೭ ಮಾರ್ಚ್ ೨೦೦೯ರಂದು ಕರ್ನಾಟಕದ ಹಲವು ವಾರ್ತಾಪತ್ರಿಕೆಗಳಲ್ಲಿ ಮುಖಪುಟ ಸುದ್ದಿ.

“ರಾಜ್ಯದ ೪೫ ಹಳ್ಳಿಗಳಿಗೆ ಟ್ಯಾಂಕರುಗಳಲ್ಲಿ ಕುಡಿಯುವ ನೀರು ಒದಗಿಸಲು ಸರಕಾರ ಕ್ರಮ ಕೈಗೊಂಡಿದೆ” ಎಂಬ ಸುದ್ದಿ ಓದುತ್ತಿದ್ದಂತೆ ೫ ವರುಷಗಳ ಮುಂಚಿನ ಒಂದಿನ ನೆನಪಾಯಿತು.ಅಂದು ೨೭ ಫೆಬ್ರವರಿ ೨೦೦೪. ಬಿಸಿಲು ಚುರುಕಾಗಿತ್ತು. ಬೆಳಗ್ಗೆ ೯ರ ಹೊತ್ತಿಗೆ ಕಡೂರು ಹತ್ತಿರದ ಬಿಳೇಕಲ್ಲು ಹಳ್ಳಿಗೆ ಹೋಗಿದ್ದಾಗ, ಹಳ್ಳಿಯ ಕೆಲವರು ಎತ್ತಿನ ಗಾಡಿಗಳಲ್ಲಿ ಬಟ್ಟೆ ಹೇರಿಕೊಂಡು ಹೊರಟಿದ್ದರು, “ಇದೇನು ಗುಳೇ ಹೊರಟಿದ್ದಾರಾ?” ಎಂದು ಕೇಳಿದೆ, ಶಾಲಾ ಮಾಸ್ಟರ್ ಪಾಂಡುರಂಗಪ್ಪನವರನ್ನು. “ಇಲ್ಲ ಸಾರ್, ಬಟ್ಟೆ ಒಗೀಲಿಕ್ಕೆ ಅಯ್ಯನ ಕೆರೆಗೆ ಹೊರಟಿದ್ದಾರೆ” ಎಂದರು.

“ಅಲ್ಲಿಂದ ಕಾಲುವೇಲಿ ನಿಮ್ ಹಳ್ಳಿಗೆ ನೀರು ಬರಾಕಿಲ್ವಾ?” ಎಂಬ ನನ್ನ ಪ್ರಶ್ನೆಗೆ ಅವರ ಉತ್ತರ, “ಅಯ್ಯೋ, ಆ ಕಾಲ ಹೋಯ್ತು. ಕಾಲುವೇಲಿ ನೀರ್ ಬಿಡೋದು ಬಂದ್ ಮಾಡ್ಯಾರೆ. ಈಗ ಅಯ್ಯನ ಕೆರೆ ನೀರು ಏನಿದ್ರೂ ಜನರಿಗೆ ಬಟ್ಟೆ ಒಗೀಲಿಕ್ಕೆ ಮತ್ತು ಜಾನುವಾರುಗಳಿಗೆ ಕುಡೀಲಿಕ್ಕೆ ಮಾತ್ರ. ನಾನು ಹುಟ್ಟಿದ್ಮೇಲೆ ಹಿಂಗಾಗಿದ್ದು ಇದೇ ಮೊದಲು”.

ಚಿಕ್ಕಮಗಳೂರಿನಿಂದ (ಕಡೂರಿನ ದಿಕ್ಕಿನಲ್ಲಿ) ೨೩ ಕಿಮೀ ದೂರದಲ್ಲಿದೆ ಬಿಳೇಕಲ್ಲು ಹಳ್ಳಿ. ಅಲ್ಲಿ ೪೫೦ ಮನೆಗಳು. ಹಳ್ಳಿಯ ಹಿರಿಯ ತಿಮ್ಮೇ ಗೌಡರಿಗೆ ಅಯ್ಯನಕೆರೆ ಹತ್ತಿರದಲ್ಲಿ ೭ ಎಕರೆ ಅಡಿಕೆ ತೋಟ. ತುಸು ದೂರದಲ್ಲಿ ಬೇರೆ ೧೭ ಎಕರೆ ಅಡಿಕೆ ತೋಟ. ಅವರ ಮಗ ಹೊನ್ನೇಗೌಡರಿಗೆ ತೋಟದ ಸ್ಥಿತಿ ಹೇಳ್ತಾ ಹೇಳ್ತಾ ಗಂಟಲು ಕಟ್ಟಿ ಬಂತು. “ಅಯ್ಯನ ಕೆರೆಯಿಂದ ಕಾಲುವೇಲಿ ನೀರು ಬರ್ತಿತ್ತು. ಹಿಂಗಾಗ್ತದೆ ಅಂತ ಯಾರಿಗೆ ಗೊತ್ತಿತ್ತು? ಒಂದೋ ತೋಟ ಉಳೀಬೇಕು, ಇಲ್ದಿದ್ರೆ ನಾವು ಹೋಗ್ಬೇಕು ಅಂತ ಹನ್ನೆರಡು ಬೋರ್ವೆಲ್ ಹೊಡೆಸಿದ್ವಿ. ಏಳು ಬೋರ್ವೆಲ್‌ನಾಗೆ ನೀರು ಸಿಕ್ತು. ಆದ್ರೆ ಕರೆಂಟೇ ಇರೋದಿಲ್ಲ. ನಾಲ್ಕು ಜನರೇಟರ್ ಇಟ್ಕೊಂಡು ಪಂಪ್ ನಡೆಸಿ ನೀರು ಹೊಡೀತಾ ಇದೀವಿ. ದಿನಕ್ಕೆ ೪೦೦೦ ರೂಪಾಯಿ ಡೀಸಿಲ್‌ಗೇ ಬೇಕು. ನಮ್ ಪರಿಸ್ಥಿತಿ ಕೇಳಬ್ಯಾಡ್ರಿ.” ಬಿಳೇಕಲ್ಲು ಹಳ್ಳಿಯಲ್ಲಿ ಯಾರನ್ನು ಕೇಳಿದರೂ ಇಂತಹದೇ ಗೋಳಿನ ಕತೆಗಳು.

ಅಲ್ಲಿಂದ ನೇರವಾಗಿ ಅಯ್ಯನ ಕೆರೆಗೆ ಹೋದೆವು. ಅಲ್ಲಿ ಕಂಡದ್ದೇನು? ದಕ್ಷಿಣ ಭಾರತದ ಬೃಹತ್ ಕೆರೆಗಳಲ್ಲಿ ಒಂದಾದ ಅಯ್ಯನ ಕೆರೆ ಅಂದು ಪುಟ್ಟ ಈಜುಕೊಳದಂತಿತ್ತು. ಕಳೆದ ನೂರು ವರುಷಗಳಲ್ಲಿ ಭೀಕರ ಬರಗಾಲಗಳು ಬಂದಿದ್ದಾಗಲೂ ಈ ಕೆರೆಯಲ್ಲಿ ನೀರಾವರಿಗೂ ನೀರಿತ್ತು.

೩,೯೦೦ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ೪ ಕಾಲುವೆಗಳಿಂದ ನೀರುಣಿಸಲು ತೊಂದರೆ ಆದದ್ದು ಅಪರೂಪ. ಅಂತಹ ಅಯ್ಯನ ಕೆರೆಯಲ್ಲಿ ಅಂದು ಒಂದಾಳೆತ್ತರದ ನೀರು!

ಅಯ್ಯನ ಕೆರೆಯ ಏರಿ ಇಳಿದು ವಾಹನದಲ್ಲಿ ಸಖರಾಯಪಟ್ಟಣ ತಲಪಿದಾಗ ನಡು ಮಧ್ಯಾಹ್ನ ೧೨ ಗಂಟೆ. ವಾಹನದಲ್ಲಿದ್ದ ನಾವು ಯಾರೂ ಹಾದಿಯುದ್ದಕ್ಕೂ ಮಾತಾಡಲಿಲ್ಲ. ಹಾದಿಯ ಅಕ್ಕಪಕ್ಕದಲ್ಲಿ ನೀರಿನ ಪಸೆಯಿಲ್ಲದೆ ಬಣಗುಟ್ಟುವ ಅಡಿಕೆ ತೋಟಗಳನ್ನು ಕಂಡು ನಮ್ಮ ಬಾಯಿಯ ಪಸೆ ಒಣಗಿತ್ತು. ಸಖರಾಯಪಟ್ಟಣದಲ್ಲಿ ಹಲವು ಮನೆಗಳೆದುರು ನೀರು ಸಂಗ್ರಹಿಸಿಟ್ಟ ಪ್ಲಾಸ್ಟಿಕ್ ಟ್ಯಾಂಕ್ ಗಳು. ಅವುಗಳ ಮುಚ್ಚಳಕ್ಕೆ ಬೀಗ ಹಾಕಲಾಗಿತ್ತು. ಯಾಕೆಂದರೆ ಒಂದು ಕಾಲದಲ್ಲಿ ಭಾರೀ ನೀರಿದ್ದ ಆ ಊರಿನಲ್ಲಿ ಇಂದು ನೀರಿಟ್ಟುಕೊಂಡರೆ ಕಳ್ಳಕಾಕರ ಭಯ. “ಒಂದು ಟ್ಯಾಂಕರಿಗೆ ೧೭೫ ರೂಪಾಯಿ ಕೊಟ್ಟು ನೀರು ತರಿಸ್ತಿದ್ದಾರೆ” ಎಂದರು ಮುರಳಿ.

ಅಲ್ಲಿಂದ ನಾವು ಹೊರಟಾಗ, ವಕೀಲ ಎಸ್ ಎಲ್ ಬೋಜೇಗೌಡರೊಂದು ಮಾತು ಹೇಳಿದರು, “ಏನೇ ಹೇಳಿ. ನಮಗೆಲ್ಲ ನೀರಿಲ್ಲದೆ ಸಂಕಟವಾಗಿದೆ, ನಿಜ. ಆದರೆ ಈಗ ನಮಗೆ ನೀರಿನ ಬೆಲೆ ಗೊತ್ತಾಗಿದೆ. ಅಯ್ಯನ ಕೆರೆಯಿಂದ ಕಾಲುವೇಲಿ ತೋಟಗಳಿಗೆ ನೀರು ಬಿಡ್ತಿದ್ರು. ಅವರವರ ತೋಟಕ್ಕೆ ನೀರು ಕಟ್ಟಿಕೊಂಡ ಮೇಲೆ ಪಕ್ಕದವರಿಗೆ ಹೇಳಬೇಕಿತ್ತು,”ನಂದಾಯ್ತು, ಇನ್ನು ನೀನು ನೀರು ಕಟ್ಟಿಕೋ” ಅಂತ. ಆದ್ರೆ ಜನ ತಮ್ಮ ಪಾಡಿಗೆ ತಾವು ಹೊರಟು ಹೋಗ್ತಿದ್ರು. ಕಾಲುವೆ ನೀರು ರಾತ್ರಿಯಿಡೀ ಹಾಳಾಗಿ ಹೋಗ್ತಿತ್ತು. ಆಗ ಪೋಲು ಮಾಡಿದ ನೀರು ಈಗ ಬೇಕು ಅಂದ್ರೆ ಸಿಕ್ತದಾ?”

ಅಯ್ಯನ ಕೆರೆಯಂತಹ ಸಾವಿರಾರು ಕೆರೆಗಳು ನಮಗೆ ನೀರಿನ ಪಾಠ ಹೇಳುತ್ತಿವೆ. ಆದರೆ ನಾವು ಪಾಠ ಕಲಿಯುವುದು ಯಾವಾಗ?

## ನೀರ ನೆಮ್ಮದಿಗೆ ದಾರಿ ಇಲ್ಲಿದೆ ಕಾಣಿರೋ !

ನೀರ ನೆಮ್ಮದಿಗೆ ದಾರಿ ಎಲ್ಲಿದೆ? ಕಾಣಬೇಕೆಂದಾದರೆ ಬನ್ನಿ, ಉತ್ತರಕನ್ನಡದ ಶಿರಸಿ ಹತ್ತಿರದ ಹುಲೇಮಳಗಿಗೆ. 'ನೀರ ನೆಮ್ಮದಿಗೆ ಪತ್ರಿಕೋದ್ಯಮ' ಕಾರ್ಯಾಗಾರದ ಕೊನೆಯ ದಿನ ಶಿಬಿರಾರ್ಥಿಗಳೊಂದಿಗೆ ಅಲ್ಲಿಗೆ ಹೋಗಿದ್ದೆ; ಕಣ್ಣಾರೆ ಕಂಡಿದ್ದೆ.

ಹೋದೊಡನೆ ನಮ್ಮನ್ನೆಲ್ಲ ಆ ಹಳ್ಳಿಯವರು ಕರೆದೊಯ್ದದ್ದು ನಾಗೇಶ ಹೆಗಡೆಯವರ ಕುಟುಂಬದ ಮನೆಗೆ. ಅಲ್ಲಿ ನಮ್ಮನ್ನು ಕೂರಿಸಿ, ಹೊಟ್ಟೆತುಂಬ ಉಪಾಹಾರ ಬಡಿಸಿದ ರೀತಿಯಲ್ಲೇ ಆ ಹಳ್ಳಿಯವರ ಪರಸ್ಪರ ಸಹಕಾರದ ಬಾಳುವೆಯ ಚಿತ್ರಣ ನಮಗೆ ಸಿಕ್ಕಿತ್ತು.

ಅನಂತರ ನಮ್ಮನ್ನೆಲ್ಲ ಕುಳ್ಳಿರಿಸಿ, ಸಚ್ಚಿದಾನಂದ ತಮ್ಮ ಊರಿನ ಮಳೆನೀರಿನ ಕತೆ ಹೇಳಿದರು, “ವರುಷದಿಂದ ವರುಷಕ್ಕೆ ನಮ್ಮ ಊರಿನ ಬಾವಿಗಳಲ್ಲಿ ನೀರಿನ ಮಟ್ಟ ಇಳೀತಿತ್ತು. ನಮ್ಮ ಅಡಿಕೆ ತೋಟ ಉಳಿಸಿಕೊಳ್ಳೋದು ಹ್ಯಾಗಂತ ಚಿಂತೆ ಹತ್ತಿತ್ತು. ಎರಡು ವರುಷದ ಮುಂಚೆ ಒಂದಿನ ನಮ್ಮ ಹಾಲಿನ ಡೈರಿಯಲ್ಲಿ ಮಾತಾಡ್ತಿರಬೇಕಾದ್ರೆ ಶ್ರೀಪಡ್ರೆಯವರ 'ನೆಲ ಜಲ ಉಳಿಸಿ' ಪುಸ್ತಕದ ಮಾತು ಬಂತು. ಅದೇ ನಮಗೆ ಸ್ಫೂರ್ತಿ. ಅನಂತರದ ಭಾನುವಾರದಿಂದಲೇ ನಮ್ಮ ಸೊಪ್ಪಿನ ಬೆಟ್ಟದಲ್ಲಿ ಕೆಲಸ ಶುರು ಮಾಡಿದ್ವಿ.ಒಂದೆರಡು ತಿಂಗಳು ಹೆಚ್ಚು ಜನ ಬರಲಿಲ್ಲ. ಆ ಮೇಲೆ ಭಾನುವಾರ ಬಂತಂದ್ರೆ ನಮ್ಮ ಊರಿನ ಜನ ಹಾರೆ ತಗೊಂಡು ಸೊಪ್ಪಿನ ಬೆಟ್ಟಕ್ಕೆ ಹೋಗ್ಲಿಕ್ಕೆ ಶುರು ಮಾಡಿದ್ರು. ಈಗ ಪ್ರತಿ ಭಾನುವಾರಾನೂ ಅಲ್ಲಿ ಅನ ಸೇರ್ತೀವಿ. ಇಂಗುಗುಂಡಿ ಮಾಡ್ತೀವಿ. ಅರ್ಧ ತಾಸಿನಲ್ಲಿ ಎರಡು ಸೆಂಟಿಮೀಟರ್ ಮಳೆ ಬಿದ್ದರೂ ನಮ್ಮ ಸೊಪ್ಪಿನ ಬೆಟ್ಟದಿಂದ ನೀರು ಹರಿದು ಹೋಗಬಾರದು. ಅಲ್ಲೇ ಇಂಗಬೇಕು ಅನ್ನೋದು ನಮ್ಮ ಗುರಿ. ಒಂದೇ ವರುಷದಲ್ಲಿ ಅದನ್ನ ಸಾಧಿಸಿದ್ದೇವೆ.”

ಹಿರಿಯರಾದ ವಾಸುದೇವ ಹಗಡೆಯವರು ಮಳೆ ಕೊಯ್ಲಿನಿಂದಾಗಿ ತಮ್ಮ ಊರಿನ ಬಾವಿಗಳಲ್ಲಿ ನೀರಿನ ಮಟ್ಟ ಏರಿದೆಯೆಂದು ತಿಳಿಸಿದರು. ಹುಲೇಮಳಗಿ ಸುಮಾರು ೧,೧೦೦ ಜನರಿರುವ ಪುಟ್ಟ ಹಳ್ಳಿ. ಅಲ್ಲಿನ ೩೫ ಮನೆಗಳಲ್ಲಿ ೨೮ ಮನೆಯವರಿಗೆ ತಲಾ ಸುಮಾರು ಒಂದೆಕರೆ ಅಡಿಕೆ ತೋಟ. ಈಗ ತೋಟ ಹಾಗೂ ಫಸಲು ಉಳಿಸಿಕೊಳ್ಳುವ ಬಗ್ಗೆ ಎಲ್ಲರಿಗೂ ನೆಮ್ಮದಿ. ಯಾಕೆಂದರೆ ಅಲ್ಲಿನ ಬಾವಿಗಳಲ್ಲಿ ಕಡು ಬೇಸಗೆಯಲ್ಲೂ ಸಮೃದ್ಧ ನೀರು. ಇದೆಲ್ಲ ಸಾಧ್ಯವಾದದ್ದು ಸಮುದಾಯದ ಕೆಲಸದಿಂದಾಗಿ ಎಂದು ವಾಸುದೇವ ಹೆಗಡೆ ವಿವರಿಸಿದರು.

ಎರಡು ವರುಷಗಳ ಮುನ್ನ ಪಕ್ಕದ ಹಳ್ಳಿಯವರು ಸೋಜಿಗ ಪಟ್ಟ ಸನ್ನಿವೇಶವನ್ನು ಸಚ್ಚಿದಾನಂದ ಹಾವಭಾವ ಸಹಿತ ಬಣ್ಣಿಸಿದರು."ನಮ್ಮ ಊರಿನಲ್ಲಿ ಮಳೆ ಬಂದಾಗ, ಇಲ್ಲಿನ ನೀರು ತೋಡಿನಲ್ಲಿ ಹರಿದು ಅಲ್ಲಿಯ ಕೆರೆಗೆ ಹೋಗಿ ಸೇರ್ತಿತ್ತು. ಆ ವರುಷ ಮೊದಲ ಮಳೆ ಬಂದಾಗ ಹಾಗಾಗಲಿಲ್ಲ. ಮರುದಿನ ಮತ್ತೆ ಇಲ್ಲಿ ಮಳೆ ಬಂದಾಗಲೂ ಅವರ ಕೆರೆಗೆ ಇಲ್ಲಿಂದ ನೀರು ಬರಲಿಲ್ಲ. 'ಇದೇನಾಯಿತು? ಅಲ್ಲಿ ಬಿದ್ದ ಮಳೆ ನೀರೆಲ್ಲ ಎಲ್ಲಿ ಹೋಯಿತು?' ಎಂದು ಪರೀಕ್ಷೆ ಮಾಡಲು ಆ ಹಳ್ಳಿಯವರು ಇಲ್ಲಿಗೆ ಬಂದರು. ಅವರನ್ನು ನಮ್ಮ ಸೊಪ್ಪಿನ ಬೆಟ್ಟಕ್ಕೆ ಕರೆದುಕೊಂಡು ಹೋಗಿ ತೋರಿಸಿದೆವು. ಮಳೆ ನೀರೆಲ್ಲ ನಮ್ಮ ಇಂಗುಗುಂಡಿಗಳಲ್ಲೇ ಇತ್ತು. ನಿಧಾನವಾಗಿ ಮಣ್ಣಿನಾಳಕ್ಕೆ ಇಂಗುತ್ತಿತ್ತು. ನಮ್ಮ ಮ್ಯಾಜಿಕ್ ಅವ್ರಿಗೆ ಅರ್ಥವಾಯಿತು ನೋಡಿ. ಈಗ ಅವರೂ ಮಳೆ ನೀರಿಂಗಿಸುವ ಕೆಲಸ ಶುರು ಮಾಡಿದ್ದಾರೆ."

ಅನಂತರ ಹುಲೇಮಳಗಿಯ ಸೊಪ್ಪಿನ ಬೆಟ್ಟಗಳಿಗೆ ಹೋಗಿ ಕಣ್ಣಾರೆ ಕಂಡೆವು. ಅವರು ಹೇಳಿದ್ದೆಲ್ಲ ನಿಜವಾಗಿತ್ತು. ಅಂದು ಮುಂಜಾನೆ ಸುರಿದ ಮಳೆಯ ನೀರು ಹಲವು ಇಂಗುಗುಂಡಿಗಳಲ್ಲಿ ಸಂಗ್ರಹವಾಗಿದ್ದು ನಿಧಾನವಾಗಿ ಇಂಗುತ್ತಿತ್ತು.

ಹುಲೇಮಳಗಿ ಮತ್ತು ಅಲ್ಲಿನ ಓಣಿಕೇರಿ - ಇವು ಇಂದು ನಮ್ಮ ಮಳೆಕೊಯ್ಲಿನ ಪಾಠಶಾಲೆಗಳು. ಒಂದು ಹಳ್ಳಿಯ ಜನರಿಗೆ ಬೆಳೆಕೊಯ್ಲಿನ ಜೊತೆಗೆ ಮಳೆಕೊಯ್ಲಿನ ಪಾಠ ಅರ್ಥವಾದರೆ ಏನಾಗುತ್ತದೆ ಎಂಬುದನ್ನಿಲ್ಲಿ ಕಣ್ಣಾರೆ ಕಾಣಬಹುದು. ಅಲ್ಲಿನವರ ಅನುಭವಗಳಿಂದ ಕಲಿಯೋಣ ಬನ್ನಿ.

## ನೀರು ಹಾಳು ಮಾಡುವಾಗ ಅಮ್ಮಂದಿರನ್ನು ನೆನೆಯೋಣ!

ಸಿಮೆಂಟಿನ ಮನೆಯಂಗಳದಲ್ಲಿ ಧೂಳು. ಆ ಧೂಳೆಲ್ಲ ಮನೆಯೊಳಗೆ ಬಂದು ಮನೆ ಗಲೀಜಾಗುತ್ತದೆ. ಅದಕ್ಕಾಗಿ ಏಳೆಂಟು ಬಕೆಟ್ ನೀರು ಸುರಿದು, ಗುಡಿಸಿ, ಅಂಗಳವನ್ನೇ ಶುಚಿ ಮಾಡುವವರು ಹಲವರು.

ಲಕ್ಷಗಟ್ಟಲೆ ರೂಪಾಯಿ ಕಾರು. ಅದು ಝಗಮಗಿಸುತ್ತಲೇ ಇರಬೇಕು. ಅದಕ್ಕಾಗಿ ವಾರಕ್ಕೊಮ್ಮೆ ಕಾರಿಗೆ "ಸ್ನಾನ" ಮಾಡಿಸಬೇಕು, ಏಳೆಂಟು ಬಕೆಟ್ ನೀರಿನಲ್ಲಿ.

ಮನೆಯ ಮುಂದೆ, ಹಿಂದೆ ಅಥವಾ ಪಕ್ಕದಲ್ಲಿ ಚಂದದ ಕೈತೋಟ. ಬಣ್ಣಬಣ್ಣದ ಹೂಗಿಡಗಳು, ಎಲೆಗಿಡಗಳು. ಅವು ನಳನಳಿಸಬೇಕಾದರೆ ನೀರು ಎರೆಯಬೇಕಲ್ಲವೇ? ಅದಕ್ಕಾಗಿ ಶುದ್ಧೀಕರಿಸಿದ ಕುಡಿಯುವ ನೀರಿನ ಬಳಕೆ - ದಿನದಿನವೂ ಹತ್ತಿಪ್ಪತ್ತು ಬಕೆಟ್ ನೀರು.

ಸ್ನಾನ ಮಾಡುವಾಗ, ನೀರು ಎರೆದುಕೊಳ್ಳುವುದೇ ಖುಷಿ. ಸ್ನಾನಕ್ಕಾಗಿ ೨ - ೩ ಬಕೆಟ್ ನೀರು. ಹಲ್ಲುಜ್ಜುವಾಗ ಮತ್ತು ಗಡ್ಡ ತೆಗೆಯುವಾಗ ನಳ್ಳಿಯಿಂದ ನೀರು ಸುರಿಯುತ್ತಲೇ ಇರಬೇಕು. ಯಾಕೆಂದರೆ ಅದು ಕೆಲವರ ಅಭ್ಯಾಸ - ಹಲವಾರು ವರುಷಗಳಿಂದ ಬೆಳೆಸಿಕೊಂಡು ಬಂದ ಅಭ್ಯಾಸ.

ಇಂತಹ ಸಂಗತಿಗಳು ನಮ್ಮ ಮನೆಗಳಲ್ಲೇ ನಡೆಯುತ್ತಿರಬಹುದು. ಈ ರೀತಿಯಲ್ಲಿ ನೀರು ಹಾಳು ಮಾಡುವುದನ್ನು ತಪ್ಪಿಸಲು ಸಾಧ್ಯವಿಲ್ಲವೇ? ಖಂಡಿತವಾಗಿ ಸಾಧ್ಯವಿದೆ. ಅದಕ್ಕಾಗಿ ನಮ್ಮ ಅಭ್ಯಾಸಗಳನ್ನು ಬದಲಾಯಿಸಬೇಕು, ಅಷ್ಟೇ.

ಉದಾಹರಣೆಗೆ, ಬಟ್ಟೆ ಒಗೆದ ನೀರಿನಿಂದ ಅಂಗಳ ಶುಚಿಮಾಡಬಹುದು. ಒಂದು ತುಂಡು ಬಟ್ಟೆಯನ್ನು ಒದ್ದೆ ಮಾಡಿಕೊಂಡು, ಅದರಿಂದ ಕಾರಿನ ಧೂಳು ತೆಗೆಯಲು ಒಂದು ಬಕೆಟ್ ನೀರು ಸಾಕು. ಕೈತೋಟಕ್ಕೂ ಬಟ್ಟೆ ಒಗೆದ ನೀರನ್ನೇ ಹಾಕಬಹುದು. ಸ್ನಾನ ಮಾಡಲು ಒಂದು ಬಕೆಟ್ ನೀರು ಧಾರಾಳ ಸಾಕು. ಹಲ್ಲುಜ್ಜುವುದು ಮತ್ತು ಗಡ್ಡ ತೆಗೆಯುವುದು, ೨ - ೩ ಮಗ್ ನೀರಿನಲ್ಲಿ ಈ ಕೆಲಸಗಳು ಸಾಧ್ಯ.

ಹೀಗೆ ಅಭ್ಯಾಸಗಳನ್ನು ಬದಲಾಯಿಸಲು ನಾವು ಮನಸ್ಸು ಮಾಡಬೇಕು, ಅಷ್ಟೇ. “ಅದೇ ಕಷ್ಟದ ಕೆಲಸ. ಈ ಅಭ್ಯಾಸಗಳು ಬೇರು ಬಿಟ್ಟಿವೆ, ಹೇಗೆ ಬದಲಾಯಿಸುವುದು” ಅಂತೀರಾ?

ಅದಕ್ಕಾಗಿ ಆ ಸಂದರ್ಭಗಳಲ್ಲಿ ಅಮ್ಮಂದಿರನ್ನು ನೆನೆಯೋಣ. ನಮ್ಮ ದೇಶದ ಯಾವುದೋ ಕೊನೆಯಲ್ಲಿ ಒಂದು ಬಕೆಟ್ ನೀರಿಗಾಗಿ ಸಂಕಟ ಪಡುತ್ತಿರುವ ಅಮ್ಮಂದಿರ ಪರಿಸ್ಥಿತಿ ನೆನಪುಮಾಡಿಕೊಳ್ಳೋಣ. ಮನೆಮಂದಿಗೆ ಕುಡಿಯಲಿಕ್ಕಾಗಿ, ಆಹಾರ ಬೇಯಿಸಲಿಕ್ಕಾಗಿ ನೀರು ತರುವವರು ಆ ತಾಯಂದಿರು. ಗರ್ಭಿಣಿಯಿರಲಿ, ಬಾಣಂತಿಯಿರಲಿ ನೀರು ತರುವ ಕೆಲಸವಂತೂ ತಾಯಂದಿರಿಗೆ ತಪ್ಪದು. ಸುಡು ಬೇಸಗೆಯಲ್ಲಿ ನೀರಿಗಾಗಿ ಪರದಾಡುವ ಭಾರತದ ಹಳ್ಳಿಗಳಲ್ಲಿರುವ ಇಂತಹ ಲಕ್ಷಗಟ್ಟಲೆ ಅಮ್ಮಂದಿರ ಚಿತ್ರ ನಮ್ಮ ಮನಸ್ಸನ್ನು ತಟ್ಟಲಿ.

ನಗರಗಳಲ್ಲಿ ಮತ್ತು ಮಹಾನಗರಗಳಲ್ಲಿ ಟಾಯ್ಲೆಟ್ ಫ್ಲಶ್ ಮಾಡುವಾಗ, ಧೂಳಿರುವ ಜಾಗ ತೊಳೆಯಲಿಕ್ಕಾಗಿ ಶುದ್ಧೀಕರಿಸಿದ ನೀರನ್ನೇ ಬಸಬಸನೆ ಸುರಿಯುವಾಗ, ಕಣ್ಣ ಮುಂದೆ ನಾವು ತಂದುಕೊಳ್ಳಬೇಕಾದ ಚಿತ್ರ: ತಲೆಯಲ್ಲೊಂದು, ಕಂಕುಳಲ್ಲೊಂದು ನೀರು ತುಂಬಿದ ಕೊಡ ಹೊತ್ತು, ನೋವು ನುಂಗಿ ನಗುತ್ತ ಮನೆಯತ್ತ ನಡೆದು ಬರುವ ಹೆಣ್ಣುಮಗಳೊಬ್ಬಳ ಚಿತ್ರ. ಆ ಚಿತ್ರ , ನೀರು ಪೋಲು ಮಾಡುವ ನಮ್ಮ ಅಭ್ಯಾಸವನ್ನು ಬದಲಾಯಿಸಲಿ.

## ನೀರ ನೆಮ್ಮದಿಗೆ ನೂರಾರು ದಾರಿ

“ಈ ವರುಷ ನಮ್ಮ ದೇಶದ ೧೬೧ ಜಿಲ್ಲೆಗಳಲ್ಲಿ ಬರಗಾಲ ಸಂಭವ. ಬೀಜ ಬಿತ್ತನೆ ಆಗಬೇಕಿದ್ದ ಶೇಕಡಾ ೨೦ ಪ್ರದೇಶದಲ್ಲಿ ಬಿತ್ತನೆ ಆಗಿಲ್ಲ” ಎಂದು ಕೇಂದ್ರ ವಿತ್ತ ಸಚಿವರು ತಿಳಿಸಿದ್ದಾರೆ. ಕರ್ನಾಟಕ ಸರಕಾರವು ೨೦ ಜಿಲ್ಲೆಗಳ ೮೬ ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಿದೆ.(೧೨ ಆಗಸ್ಟ್ ೨೦೦೯ರ ಪತ್ರಿಕಾ ವರದಿ) ಹಾಗಂತ, ನೀರನ್ನು ತಯಾರಿಸಲು ಸಾಧ್ಯವಿದೆಯೇ? ಸಾಧ್ಯವಿಲ್ಲ. ಹಾಗಾದರೆ, ನಾವೇನು ಮಾಡಬಹುದು?

ನಮಗೆ ಈಗ ಬೇಕಾಗಿರುವುದು ಸುರಕ್ಷಿತ ಭವಿಷ್ಯಕ್ಕಾಗಿ ಒಂದು “ನೀರಿನ ಧೋರಣೆ”. ಅದರ ಆರು ಮುಖ್ಯ ಅಂಶಗಳ ಬಗ್ಗೆ ಚಿಂತಿಸೋಣ.

ಒಂದನೆಯದಾಗಿ, ನಮ್ಮ ದೇಶದಲ್ಲೊಂದು ನೀರಿನ ಮಾಹಿತಿ ಮಿಷನ್ ಅಗತ್ಯ. ದೇಶದ ಯಾವ ಭಾಗದಲ್ಲಿ ನೀರಿನ ಪರಿಸ್ಥಿತಿ ಹೇಗಿದೆ? ನಮಗೆ ಗೊತ್ತಿಲ್ಲ. ಈ ಮಿಷನ್ ಆ ಮಾಹಿತಿ ಒದಗಿಸಬೇಕು - ಉಪಗ್ರಹ ಮತ್ತು ಅಂತರ್ಜಲ ಸಂವೇದಿ ಉಪಕರಣಗಳ ಸಹಾಯದಿಂದ. ನೀರಿನ ಕೊರತೆ ಉಂಟಾಗಬಹುದಾದ ಸ್ಥಳಗಳ ಮನೆಮನೆಗೆ ಹಾಗೂ ಪ್ರತಿಯೊಬ್ಬ ರೈತನಿಗೆ ಈ ಮಿಷನ್ ಮಾಹಿತಿ ನೀಡಿ ಎಚ್ಚರಿಸಬೇಕು.

ಎರಡನೆಯದಾಗಿ, ನೀರಿನ ಬಳಕೆಗಾಗಿ ಯೋಜನೆ ಅಗತ್ಯ: ಪ್ರತಿಯೊಂದು ಹಳ್ಳಿಗೆ, ನಗರಕ್ಕೆ ಮತ್ತು ಕಾರ್ಖಾನೆಗೆ. ಗ್ರಾಮ ಪಂಚಾಯತಿ ಕಚೇರಿ ಮತ್ತು ಶಾಲೆಯ ಗೋಡೆಗಳಲ್ಲಿ ಇರಬೇಕು - ಅಲ್ಲಿಯ ಬಾವಿಗಳ ಭೂಪಟ ಮತ್ತು ಬಾವಿಗಳ ನೀರಿನ ಮಟ್ಟದ ಮಾಹಿತಿ. ಆಯಾ ಹಳ್ಳಿಯ ನೆಲದಡಿಯ ನೀರಿನಾಸರೆಗಳಿಗೆ ಏನಾಗುತ್ತಿದೆ? ಇದು ಅಲ್ಲಿನ ಎಲ್ಲರಿಗೂ ತಿಳಿದಿರಬೇಕು - ಬಳಕೆ ವಿಧಾನದಲ್ಲಿ ಬದಲಾವಣೆ ರೂಪಿಸಲಿಕ್ಕಾಗಿ.

ಅದಲ್ಲದೆ, ಹಳ್ಳಿಹಳ್ಳಿಯ ಪ್ರತಿಯೊಬ್ಬರಿಗೂ ಗೊತ್ತಿರಬೇಕು - ಅಲ್ಲಿ ಬಿದ್ದ ಮಳೆನೀರು ಏನಾಗುತ್ತಿದೆ? ಅಲ್ಲೆಲ್ಲ ನೆಲದಾಳದಿಂದ ನೀರು ಎತ್ತುತ್ತಲೇ ಇದ್ದೇವೆ. ಆದರೆ ನಮಗೆ ಗೊತ್ತಿಲ್ಲ: ನಮ್ಮ ಹಳ್ಳಿ ಅಥವಾ ಊರಿನಲ್ಲಿ ಎಷ್ಟು ತೆರೆದ ಬಾವಿ ಹಾಗೂ ಕೊಳವೆಬಾವಿಗಳಿವೆ? ಅವುಗಳ ನೀರಿನ ಮಟ್ಟ ಹಾಗೂ ನೀರಿನ ಗುಣಮಟ್ಟ ವರುಷದಿಂದ ವರುಷಕ್ಕೆ ಹೇಗೆ ಕುಸಿಯುತ್ತಿದೆ? ಈ ಮಾಹಿತಿ ಸಂಗ್ರಹಿಸಿ, ಸಮುದಾಯಕ್ಕೆ ತಿಳಿಸಿದರೆ ಹನಿಹನಿ ಮಳೆನೀರ ಕೊಯ್ಲಿಗೆ ಜನ ತಯಾರಾಗುತ್ತಾರೆ.

ಮೂರನೆಯದಾಗಿ, ಮುಂದಿನ ಎಲ್ಲ ಅಭಿವೃದ್ಧಿ ವೆಚ್ಚಗಳಿಗೆ ಗ್ರಾಮದ ನೀರಿನ ಸುರಕ್ಷತಾ ಯೋಜನೆಯೇ ಮೂಲಾಧಾರವಾಗಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಹಣ ವಿನಿಯೋಜನೆಯನ್ನು ಇದಕ್ಕಾಗಿ ಹೊಂದಿಸಬೇಕು - ಭವಿಷ್ಯದಲ್ಲಿ ಮನೆಮನೆಗೂ ಕುಡಿಯುವ ನೀರು ಸಿಗಲಿಕ್ಕಾಗಿ.

ನಾಲ್ಕನೆಯದಾಗಿ, ನಾವು ಗಮನ ನೀಡಬೇಕಾದ್ದು ಮುಂದಿನ ವರುಷಗಳಲ್ಲಿ ನೀರಿನ ಬೇಡಿಕೆ ಎಷ್ಟು ಹೆಚ್ಚಾಗಲಿದೆ? ಎಂಬುದಕ್ಕೆ. ಆದರೆ ಈಗ, ನೀರಿನ ಪೂರೈಕೆ ಎಷ್ಟಿದೆ ಎಂಬುದೇ ಮುಖ್ಯವಾಗಿದೆ. ಈ ಬಗ್ಗೆ ಸರಕಾರಗಳು ನೀಡುವ ಯಾವುದೇ ಅಂಕೆಸಂಖ್ಯೆಗಳನ್ನು ನಂಬಲಾಗದು. ಅವೆಲ್ಲ ಕಾಗದದ ಹಾಳೆಯ ಕಸರತ್ತುಗಳು. ಯಾಕೆಂದರೆ ಅವುಗಳ ಪ್ರಕಾರ ನಮ್ಮ ದೇಶದಲ್ಲಿ ಸಾಕಷ್ಟು ನೀರಿದೆ!

ಐದನೆಯದಾಗಿ, ನಮ್ಮ ನಗರಗಳ ನೀರಿನ ಮತ್ತು ಕಲ್ಮಷದ ನಿರ್ವಹಣಾ ವ್ಯವಸ್ಥೆಯ ಮರುಪರಿಶೀಲನೆ ಅಗತ್ಯ. ಈಗ ನಗರಗಳಿಗೆ ನೀರು ಎಲ್ಲಿಂದ ಬರುತ್ತಿದೆ? ವರುಷದಿಂದ ವರುಷಕ್ಕೆ ಇನ್ನಷ್ಟು ದೂರದ ನೀರಿನಾಸರೆಯಿಂದ. ಇದರಿಂದಾಗಿ ನೀರು ತರುವ ವೆಚ್ಚ ಅಗಾಧ; ನೀರನ್ನು ಸರಬರಾಜು ಮಾಡುವಾಗ ಸೋರಿಕೆಯೂ ಅಗಾಧ.

ನಗರಗಳ ಆಡಳಿತಗಳು ಅಲ್ಲಿನ ಗಣನೀಯ ಸಂಖ್ಯೆಯ ಜನರಿಗೆ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ನೀರಿನ ಕೊರತೆ ಮತ್ತು ಸರಬರಾಜಿನ ಹೆಚ್ಚಳ ಎಂಬ ವಿಷವರ್ತುಲದಲ್ಲಿ ಸಿಲುಕಿದ್ದೇವೆ. ಎಲ್ಲರಿಗೂ ಕನಿಷ್ಠ ಪ್ರಮಾಣದ ನೀರಿನ ಸರಬರಾಜು ಎಂಬ ನಿಯಮ ಜ್ಯಾರಿಯಾಗಲಿ. ಭಾರೀ ನೀರು ಕಬಳಿಸುವ ಬಳಕೆದಾರರಿಗೆ, ಅವರ ನೀರಿನ ಬಳಕೆ ಪ್ರಮಾಣ ಹಾಗೂ ಅವರು ಹೊರಹಾಕುವ ಕಲುಷಿತ ನೀರಿನ ಪ್ರಮಾಣ ಅವಲಂಬಿಸಿ ಶುಲ್ಕ ವಸೂಲಿ ಆಗಲಿ. ಆಗ ಎಲ್ಲರಿಗೂ ತಿಳಿಯುತ್ತದೆ ನೀರಿನ “ಬೆಲೆ”. ಕಾರು ಹಾಗೂ ಅಂಗಳ ತೊಳೆಯಲಿಕ್ಕಾಗಿ, ಹೂಗಿಡ-ಎಲೆಗಿಡಗಳಿಗೆ ಹಾಕಲಿಕ್ಕಾಗಿ ಕುಡಿಯುವ ನೀರು ಪೋಲಾಗುವುದು ತಪ್ಪುತ್ತದೆ.

ಆರನೆಯದಾಗಿ, ನೀರಿನ ಹನಿಹನಿಯ ಮರುಬಳಕೆ ಮಾಡೋಣ. ಸಮುದ್ರದ ನೀರನ್ನು ಕುಡಿಯುವ ನೀರಾಗಿ ಪರಿವರ್ತಿಸಿ, ನೂರಾರು ಕಿಮೀ ದೂರಕ್ಕೆ ಸಾಗಿಸಿ ಸರಬರಾಜು ಮಾಡುವ ಯೋಜನೆಗಳು ಬೇಕಾಗಿಲ್ಲ. ಬದಲಾಗಿ, ಮನೆಗಳ ಚರಂಡಿ ನೀರನ್ನು ಮತ್ತು ಕಾರ್ಖಾನೆಗಳ ಕಲುಷಿತ ನೀರನ್ನು ವಿಷರಹಿತವಾಗಿಸಿ ಅಲ್ಲಲ್ಲೇ ಮರುಬಳಕೆ ಮಾಡುವ ಯೋಜನೆಗಳು ಬೇಕಾಗಿವೆ.

ಇವೆಲ್ಲ “ಡೌನ್ ಟು ಅರ್ತ್” ಪತ್ರಿಕೆಯ ಇತ್ತೀಚೆಗಿನ ಸಂಚಿಕೆಯ ಸಂಪಾದಕೀಯದಲ್ಲಿ ಪ್ರಸ್ತಾಪಿಸಲಾದ ಅಂಶಗಳು. ನಮ್ಮೆಲ್ಲರಲ್ಲಿ ನೀರಿನ ಧೋರಣೆ ಬಗ್ಗೆ ಆಗಬೇಕಾದ ಬದಲಾವಣೆಗಳ ದಿಕ್ಸೂಚಿಗಳು.

ನೀರಿನ ಕೊರತೆಯ ಮಾತೆತ್ತಿದರೆ ಸಾಕು; ಭಾರೀ ಅಣೆಕಟ್ಟುಗಳನ್ನು ಕಟ್ಟುವ, ನೂರಾರು ಕಿಮೀ ಉದ್ದದ ಕಾಲುವೆಗಳನ್ನು ನಿರ್ಮಿಸುವ, ದೊಡ್ಡ ಗಾತ್ರದ ಪೈಪ್‌ಗಳನ್ನು ಜೋಡಿಸುವ ಪ್ರತಿಕ್ರಿಯಗಳ ಮೆರವಣಿಗೆ ಶುರು. ಇವೆಲ್ಲ ಕ್ರಿಯಾಶೀಲತೆ ಕಳಕೊಂಡ ಇಂಜಿನಿಯರಿಂಗ್ ಮನಸ್ಸುಗಳ ಪ್ರತಿಕ್ರಿಯೆಗಳು.

ನಾವೇನು ಮಾಡಬಹುದು? ಇಂತಹ ಸ್ವಯಂನಾಶದ ಯೋಚನಾಕ್ರಮದ ಸುಳಿಯಿಂದ ಹೊರಬರೋಣ. ನಮ್ಮ ಮಕ್ಕಳು-ಮೊಮ್ಮಕ್ಕಳ ಸಲುವಾಗಿ, ನಮ್ಮ ನೀರಿನ ಬಳಕೆಯ ವಿಧಾನದಲ್ಲಿ ಬದಲಾವಣೆಗಳನ್ನು ತರೋದು ನಮ್ಮ ಕೈಯಲ್ಲೇ ಇದೆ, ಅಲ್ಲವೇ?

ನೀರ ನೆಮ್ಮದಿಗೆ ಇವೆ ನೂರಾರು ದಾರಿಗಳು. ಅದಕ್ಕಾಗಿ, ನಿಮ್ಮ ಮನದಲ್ಲೊಂದಿಷ್ಟು ಜಾಗ ಕೊಡಿ.

## ಮಳೆಕೊಯ್ಲಿನ ಸರಳ ಸೂತ್ರ

ಧಾರಾಕಾರವಾಗಿ ಸುರಿಯುವ ಮಳೆ. ರಭಸದಿಂದ ಹರಿದು ಹೋಗುವ ಮಳೆನೀರು. ನಾವೆಲ್ಲ ಇದನ್ನು ನೋಡಿದವರು, ನೋಡುತ್ತ ನೋಡುತ್ತ ಖುಷಿ ಪಟ್ಟವರು. ಆಗೆಂದಾದರೂ 'ಈ ಮಳೆನೀರನ್ನು ಕೊಯ್ಲು ಮಾಡಲು ಸುಲಭದ ದಾರಿ ಯಾವುದು' ಎಂಬ ಪ್ರಶ್ನೆ ಕಾಡಿದೆಯೇ?

ಈಗ ಬೇಸಗೆ ಮುಗಿಯುತ್ತಿದೆ. ಜೊತೆಗೆ ಮಾವಿನ ಹಂಗಾಮು ಮುಗಿಯುತ್ತಿದೆ. ಇನ್ನಷ್ಟು ಕಾಲ ಮಾವು ತಿನ್ನಲು ಸಿಗಬೇಕಾದರೆ ಏನು ಮಾಡಬೇಕು? ಮಾವಿನ ರಸಪಾಕ ಮಾಡಿಟ್ಟರೆ ಒಂದು ತಿಂಗಳು ಉಳಿದೀತು. ಮಾವಿನ ರಸ ಬಿಸಿಲಿನಲ್ಲಿ ಒಣಗಿಸಿ ಮಾಂಬಳ ಮಾಡಿಟ್ಟರೆ ಒಂದು ವರುಷ ಉಳಿದೀತು. ಮಾವಿನ ಉಪ್ಪಿನಕಾಯಿ ಮಾಡಿಟ್ಟರೆ ಎರಡು ವರುಷ ಉಳಿದೀತು.

ಹಾಗೆಯೇ, ಮಳೆನೀರು ಉಳಿಸಲು ನೂರಾರು ದಾರಿಗಳಿವೆ. ಈ ದಾರಿಗಳ ಗುರಿ – ಮಳೆ ನೀರಿಂಗಿಸುವುದು. ಇಲ್ಲಿದೆ ಅದರ ಸರಳ ಸೂತ್ರ: ಓಡುವ ನೀರನ್ನು ನಡೆಯುವಂತೆ ಮಾಡಿ; ನಡೆಯುವ ನೀರನ್ನು ತೆವಳುವಂತೆ ಮಾಡಿ; ತೆವಳುವ ನೀರನ್ನು ನಿಲ್ಲಿಸಿ; ನಿಂತ ನೀರನ್ನು ಇಂಗಿಸಿ.

ಈ ಸರಳ ಸೂತ್ರ ಬಳಸಿ ಯಶಸ್ವಿಯಾದವರ ಅನುಭವ ತಿಳಿಯೋಣ. ದಕ್ಷಿಣಕನ್ನಡದ ವಿಟ್ಲ ಗುಡ್ಡಗಳ ಊರು. ಅಲ್ಲಿನ ಪೇಟೆಯ ಎತ್ತರದ ಜಾಗದಲ್ಲಿದೆ ಇಗರ್ಜಿ. ಅದರ ಧರ್ಮಗುರು ಫಾ. ಬೆನೆಡಿಕ್ಟ್ ರೇಗೋ ಮಳೆನೀರಿಂಗಿಸಲಿಕ್ಕಾಗಿ ಅನುಸರಿಸಿದ್ದು ಇದೇ ಸೂತ್ರ. ಚರ್ಚಿನ ಕಟ್ಟಡದ ಸುತ್ತಲೂ “u” ಆಕಾರದ ಕಣಿ ತೋಡಿಸಿದರು. ಈ ಕಣಿಯೊಳಗೆ ಅಲ್ಲಲ್ಲಿ ದೊಡ್ಡ ತೊಟ್ಟಿಲಿನಂತಹ ಗುಂಡಿಗಳು. ಚರ್ಚಿನ ಚಾವಣಿ ಮತ್ತು ಅಂಗಳದಲ್ಲಿ ಬಿದ್ದ ಮಳೆನೀರೆಲ್ಲ ಈ ಕಣಿಗೆ ಹರಿದು ಬಂದು ನಿಧಾನವಾಗಿ ಇಂಗುತ್ತದೆ – ಲಕ್ಷಲಕ್ಷ ಲೀಟರ್. (ದಕ್ಷಿಣಕನ್ನಡದಲ್ಲಿ ಸರಾಸರಿ ಮಳೆ ೪,೦೦೦ ಮಿಮೀ. ಅಂದರೆ ಅಲ್ಲಿ ಪ್ರತಿ ಸೆಂಟ್ಸ್ (೪೦ ಚ.ಮೀ.) ಜಾಗದಲ್ಲಿ ವರುಷಕ್ಕೆ ಬೀಳುವ ಮಳೆ ೧.೬ ಲಕ್ಷ ಲೀಟರ್)

ವಿಟ್ಲದ ಹತ್ತಿರದ ವಾರಣಾಶಿ ಫಾರ್ಮಿಗೆ ಹೋಗಿದ್ದಾಗ ಅಲ್ಲಿ ಕಂಡದ್ದು ಮಳೆ ನೀರಿಂಗಿಸಲು ವಾರಣಾಶಿ ಕೃಷ್ಣಮೂರ್ತಿ ಬಳಸಿದ ಹಲವು ರೀತಿಗಳು. ಗುಡ್ಡದ ಮೇಲಿನಿಂದ ಹಾದು ಬರುವ ಒಂದು ತೋಡಿನ ನೀರನ್ನು ತಿರುಗಿಸಿ, ತನ್ನ ಜಮೀನಿನಲ್ಲಿ ಸುತ್ತಾಡಿಸಿದ್ದಾರೆ. ಹೀಗೆ ಸಾಗುವಾಗ ಮಳೆನೀರು ಹೆಚ್ಚು ಇಂಗುತ್ತದೆ. ಮಳೆನೀರಿನ ತೋಡುಗಳಲ್ಲಿ ಅಲ್ಲಲ್ಲಿ ಕಲ್ಲುಗಳನ್ನಿರಿಸಿ, ನೀರಿನ ಹರಿವಿಗೆ ತಡೆಯೊಡ್ಡಿದ್ದಾರೆ. ನೀರು ಹೀಗೆ ರಭಸವಿಲ್ಲದೆ ತೆವಳಿಕೊಂಡು ಸಾಗುವಾಗ ಇನ್ನಷ್ಟು ಇಂಗುತ್ತದೆ. ಅದಲ್ಲದೆ, ಮಳೆನೀರನ್ನು ನಿಲ್ಲಿಸಿ ಇಂಗಿಸಲು ಕೆರೆಯ ಮೇಲ್ಭಾಗದಲ್ಲಿ ಒಂದು ಮದಕ (ಎರಡು ಗುಡ್ಡಗಳ ನಡುವಿನ ತಗ್ಗಿನಲ್ಲಿ ಕಟ್ಟುವ ಪುಟ್ಟ ಅಣೆಕಟ್ಟು) ನಿರ್ಮಿಸಿದ್ದಾರೆ. ಮಾತ್ರವಲ್ಲ, ವಾರಣಾಶಿ

ಫಾರ್ಮಿನ ಕಟ್ಟಗಳನ್ನು ಪುನರುಜ್ಜೀವನಗೊಳಿಸಿದ್ದಾರೆ. (ಇದು “ಕಟ್ಟಗಳು: ಅನುಶೋಧನೆಗಳು ಮತ್ತು ವಾರಣಾಶಿ ಮಾದರಿ” ಪುಸ್ತಕದಲ್ಲಿ ದಾಖಲಾಗಿದೆ.) ಹಾಗಾಗಿ ಅಲ್ಲೀಗ ನೀರ ನಿಶ್ಚಿಂತೆ.

ಮೇ ೧೨, ೨೦೦೯ರಂದು ಸುಳ್ಯದ ಸ್ನೇಹ ಪ್ರೌಢಶಾಲೆಗೆ ಹೋಗಿದ್ದೆ. ಅದು ಗುಡ್ಡದಲ್ಲಿರುವ ಶಾಲೆ. ಅದರ ಸಂಸ್ಥಾಪಕ ಡಾ. ಚಂದ್ರಶೇಖರ ದಾಮ್ಲೆ ಗುಡ್ಡದ ನೆತ್ತಿಗೆ ಕರೆದೊಯ್ದು, ಮಳೆನೀರನ್ನು ಗುಡ್ಡದಲ್ಲಿ ಸುತ್ತಾಡಿಸಲು ರಚಿಸಿದ ತೋಡನ್ನು ತೋರಿಸಿದರು. ಮಳೆ ನೀರಿಂಗಿಸಲು ನಿರ್ಮಿಸಿದ ಇಂಗುಗುಂಡಿಗಳಿಂದ ತೆಗೆದ ಮಣ್ಣು ಹಸಿಹಸಿಯಾಗಿತ್ತು. ಹತ್ತು ವರುಷಗಳ ಮುಂಚಿನ ಪರಿಸ್ಥಿತಿ ನೆನಪುಮಾಡಿಕೊಂಡರು ದಾಮ್ಲೆ, “ಈ ಗುಡ್ಡದ ಜಾಗ ನಮಗೆ ಮಾರಿದವರು ಒಬ್ಬರು ಅಜ್ಜಿ. ಬೇಸಗೆಯಲ್ಲಿ ಗುಡ್ಡದ ಬುಡದ ಬಾವಿ ತಳ ಕಾಣುತ್ತಿತ್ತು. ಅಜ್ಜಿ ಬಾವಿಯ ತಳಕ್ಕಿಳಿದರೆ ದಿನಕ್ಕೆ ನಾಲ್ಕೈದು ಕೊಡ ನೀರು ಸಿಗುತ್ತಿತ್ತು”. ಅಂತಹ ಜಾಗದಲ್ಲೀಗ ನೀರ ನಿಶ್ಚಿಂತೆ. ಬೇಸಗೆಯಲ್ಲಿ ಶಾಲಾವಠಾರದ ನೂರಾರು ಹೂಗಿಡಗಳಿಗೆ, ಅಲಂಕಾರಗಿಡಗಳಿಗೆ ತುಂತುರು ನೀರಾವರಿ.

ನಮ್ಮ ಜಮೀನಿನಲ್ಲಿ ಹರಿದು ಹೋಗುವ ಮಳೆನೀರನ್ನು ನೋಡುತ್ತಿದ್ದರೆ, ಅದನ್ನು ಎಲ್ಲಿ ನಡೆಸಬೇಕು, ಎಲ್ಲಿ ನಿಧಾನಿಸಬೇಕು, ಎಲ್ಲಿ ನಿಲ್ಲಿಸಬೇಕು ಮತ್ತು ಎಲ್ಲಿ ಇಂಗಿಸಬೇಕೆಂದು ನಮಗೇ ತಿಳಿಯುತ್ತದೆ. ಹಾಗೆ ತಲೆಯಲ್ಲಿ ಮಿಂಚಿದ್ದನ್ನು ನೆಲಕ್ಕೆ ಇಳಿಸಿದರೆ ಮಳೆನೀರೂ ಮಣ್ಣಿನಾಳಕ್ಕೆ ಇಳಿಯುತ್ತದೆ, ಅಲ್ಲವೇ?

## ನೀರಿಂಗಿಸಿದರೆ ಸಾಲದು, ಮಣ್ಣಿನ ಸಾವಯವಾಂಶ ಹೆಚ್ಚಿಸಬೇಕು

ಚಿಕ್ಕಮಗಳೂರಿನಿಂದ ಕೆ.ಬಿದರೆಗೆ ಬಸ್ಸಿನಲ್ಲಿ ಎರಡೂವರೆ ಗಂಟೆಗಳ ಪ್ರಯಾಣ. ಕಡೂರಿನಲ್ಲಿ ಬಸ್ ಬದಲಾಯಿಸಿ ಅಂದು ಕೆ.ಬಿದರೆ ತಲಪಿದಾಗ ಬಿಸಿಲೇರುತ್ತಿತ್ತು. ಹಿರಿಯರಾದ ಟಿ.ಬಿ. ಕುಮಾರಪ್ಪ ನಮಗಾಗಿ ಕಾದಿದ್ದರು.

ಅಲ್ಲಿ ಕುಮಾರಪ್ಪನವರದು ೨೭ ಎಕ್ರೆಗಳ ತೆಂಗಿನ ತೋಟ. ೩೫ ವರುಷಗಳ ಮುನ್ನ ಅವರು ಅಲ್ಲಿ ತೋಟ ಮಾಡಿದಾಗ ಕೊರೆಸಿದ್ದು ಒಂದೇ ಕೊಳವೆಬಾವಿ. ಅದರಲ್ಲಿ ೧೦೦ ಅಡಿ ಆಳದಲ್ಲೇ ಸೊಂಪಾಗಿ ನೀರು ಸಿಕ್ಕಿತ್ತು. ಆದರೆ ೨೦೦೦ ವರುಷದಿಂದೀಚೆಗೆ ಅದರಲ್ಲಿ ನೀರು ಕಡಿಮೆ ಆಗ್ತಾ ಬಂದು, ೨೦೦೪ರಲ್ಲಿ ಕೇವಲ ೨ ಇಂಚು ನೀರು ಸಿಗತೊಡಗಿತು. ಹಾಗಾಗಿ ಆ ಅವಧಿಯಲ್ಲಿ ಇನ್ನೂ ಏಳು ಕೊಳವೆಬಾವಿ ಕೊರೆಸಿದರು. ಇವುಗಳಲ್ಲಿ ನೀರು ಸಿಗಬೇಕಾದರೆ ೨೦೦ ಅಡಿಗೂ ಅಧಿಕ ಆಳ ಕೊರೆಸಬೇಕಾಯಿತು. ಇಷ್ಟು ಆಳಕ್ಕೆ ಕೊರೆಸಿದರೂ ಆ ಏಳು ಕೊಳವೆಬಾವಿಗಳಲ್ಲಿ ಸಿಗುತ್ತಿರೋದು ಕೇವಲ ೧ರಿಂದ ೨ ಇಂಚು ನೀರು. ಇವನ್ನೆಲ್ಲ ಒಂದಕ್ಕೊಂದು ಜೋಡಿಸಿಕೊಂಡು ತೋಟಕ್ಕೆ ನೀರು ಹಾಯಿಸುವ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅದೇನಿದ್ದರೂ ಅಂತರ್ಜಲ ಮಟ್ಟ ಕುಸಿದಿರುವಾಗಲೂ ಕುಮಾರಪ್ಪನವರ ೧೭೦೦ ತೆಂಗಿನ ಮರಗಳು ಹಸುರುಹಸುರಾಗಿದ್ದು ವಾರ್ಷಿಕ ೩ ಲಕ್ಷ ತೆಂಗಿನಕಾಯಿಗಳ ಇಳುವರಿ ನೀಡುತ್ತಿವೆ. ಇದಕ್ಕೇನು ಕಾರಣ?

ಕಡೂರಿನಿಂದ ಕುಮಾರಪ್ಪನವರ ತೋಟಕ್ಕೆ ಹೋಗುವಾಗ ಹಾದಿಯುದ್ದಕ್ಕೂ ಅಕ್ಕಪಕ್ಕದ ತೆಂಗಿನ ತೋಟಗಳನ್ನು ಗಮನಿಸುತ್ತಿದ್ದೆ. ಬಹುಪಾಲು ತೋಟಗಳಲ್ಲಿ ತೆಂಗಿನಮರಗಳು ನೀರಿಲ್ಲದೆ ಒಣಗಿದ್ದವು. ನುಸಿಪೀಡೆಯ ಹೊಡೆತವಂತೂ ಎದ್ದು ಕಾಣುತ್ತಿತ್ತು. ಆ ತೋಟಗಳಿಗೆ ಹೋಲಿಸಿದಾಗ ಅವೇ ಸಮಸ್ಯೆಗಳಿದ್ದರೂ ಕುಮಾರಪ್ಪನವರ ತೋಟದ ತೆಂಗಿನಮರಗಳು ಚೆನ್ನಾಗಿದ್ದವು.

ಇದಕ್ಕೆ ಕಾರಣ ಏನು? ಎಂದು ನಾನು ಕೇಳಿದಾಗ ಹಿರಿಯರಾದ ಕುಮಾರಪ್ಪನವರು ನನ್ನನ್ನು ಮನೆಯ ಹಿಂಭಾಗಕ್ಕೆ ಕರೆದೊಯ್ದರು. ಅಲ್ಲಿ ತೆಂಗಿನ ಸಿಪ್ಪೆಯ ಹುಡಿ ತುಂಬಿದ್ದ ಒಂದು ಹೊಂಡ. ಅದರ ಉದ್ದ ೨೦ ಅಡಿ, ಅಗಲ ೧೦ ಅಡಿ. ಅದರ ಮೇಲ್ಭಾಗದ ಪದರವನ್ನೆತ್ತಿ ತೋರಿಸುತ್ತ ಕುಮಾರಪ್ಪ ಹೇಳಿದರು, “ಕಾರಣ ಇಲ್ಲಿದೆ ನೋಡಿ.” ಅಲ್ಲಿ ಕಂಡದ್ದು ರಾಶಿರಾಶಿ ಎರೆಹುಳಗಳು.

“ಈ ಆಸ್ಟ್ರೇಲಿಯನ್ ಜಾತಿಯ ಎರೆಹುಳಗಳೇ ಕಾರಣ. ಎರೆಹುಳ ಗೊಬ್ಬರದ ಹೊಂಡಕ್ಕೆ ತೆಂಗಿನ ಸಿಪ್ಪೆಹುಡಿ, ಕಸಕಡ್ಡಿ ಹಾಕ್ತಾ ಇರ್ತೇವೆ. ಅದಕ್ಕೆ ಗೋಬರ್ಗ್ಯಾಸ್ ಪ್ಲಾಂಟಿನ ಸ್ಲರಿ ಬಿಡ್ತಾ ಇರ್ತೇವೆ. ಈ ಎರೆಹುಳಗಳು ಅವೆಲ್ಲ ತಿಂದು ಗೊಬ್ಬರ ಮಾಡ್ತವೆ. ತಿಂಗಳು ತಿಂಗಳೂ ಹೊಂಡದಿಂದ ಗೊಬ್ಬರ ತೆಗೆದು ತೋಟಕ್ಕೆ ಹಾಕ್ತೇವೆ. ಇಡೀ ತೋಟಕ್ಕೆ ಈ ಹೊಂಡದ ಗೊಬ್ಬರ ಸಾಕಾಗ್ತದೆ. ಅಷ್ಟೇ ಅಲ್ಲ, ಹೊಂಡದಲ್ಲಿ ಎರೆಹುಳ ಮರಿಗಳು ಆಗ್ತಾ ಇರ್ತವೆ. ಅವನ್ನು ತೋಟದಲ್ಲಿ ತೆಂಗಿನ ಮರಗಳ ಬುಡಕ್ಕೆ ಹಾಕ್ತೇವೆ. ಅವು ಅಲ್ಲೇ ಬೆಳೀತಾವೆ. ಆ ಮರಗಳ ಬುಡಕ್ಕೆ ತೆಂಗಿನ ಸೋಗೆ, ಕಸಕಡ್ಡಿ, ತೆಂಗಿನಸಿಪ್ಪೆ ಹುಡಿ ಇದೆಲ್ಲ ಹಾಕ್ತೀವಲ್ಲ; ಎರೆಹುಳಗಳು ಅವನ್ನೆಲ್ಲ ಅಲ್ಲೇ ಗೊಬ್ಬರ ಮಾಡ್ತವೆ. ನಮ್ಮ ತೆಂಗಿನಮರಗಳ ಬುಡಕ್ಕೆ ಎರೆಹುಳ ಮತ್ತು ಎರೆಹುಳ ಗೊಬ್ಬರ ಮಾತ್ರ ಹಾಕೋದು. ಬೇರೆ ಯಾವುದೇ ರಾಸಾಯನಿಕ ಗೊಬ್ಬರ ಹಾಕೋದಿಲ್ಲ. ಯಾಕಂದ್ರೆ ಅದು ಎರೆಹುಳಗಳಿಗೆ ವಿಷ ಆಗ್ತದೆ. ಅದಲ್ದೆ, ನಮ್ ತೋಟದಲ್ಲಿ ಎತ್ತು ಅಥವಾ ಟ್ರಾಕ್ಟರ್ ಓಡಿಸಿ ಉಳುಮೆ ಮಾಡೋದಿಲ್ಲ. ನಮ್ಮಲ್ಲಿ ಉಳುಮೆ ಏನಿದ್ರೂನೂ ಎರೆಹುಳಗಳಿಂದಲೇ. ಅದಕ್ಕೇ ನನ್ನ ತೆಂಗಿನ ಮರಗಳು ಚೆನ್ನಾಗಿವೆ” ಎಂದು ವಿವರಿಸಿದರು ಕುಮಾರಪ್ಪ.

ಇದು ಎಲ್ಲ ಕೃಷಿಕರೂ ಗಮನಿಸಬೇಕಾದ ಅಂಶ: ಕೇವಲ ಮಳೆನೀರಿಂಗಿಸಿದರೆ ಸಾಲದು, ಮಣ್ಣಿನ ಸಾವಯವಾಂಶ ಹೆಚ್ಚಿಸಬೇಕು. ಅದರಿಂದಾಗಿ ಮಣ್ಣಿನ ತೇವಾಂಶ ಹಿಡಿದಿಡುವ ಗುಣ ಹೆಚ್ಚುತ್ತದೆ.

ಆಗ ಕಡಿಮೆ ನೀರುಣಿಸಿ ಹೆಚ್ಚು ಫಸಲು ಪಡೆಯಲು ಸಾಧ್ಯವಾಗುತ್ತದೆ.

## ಮಳೆ ಎಂಬ ವಿಸ್ಮಯ

ಚಟಿಲ್….ಚಟಿಲ್….ಠಳಾರ್….ಕಣ್ಣು ಕೋರೈಸುವ ಮಿಂಚು. ದಢಲ್….ದಢಲ್….ದಢಾರ್….ಕಿವಿಗಡಚಿಕ್ಕುವ ಗುಡುಗು.
ಭರ್….ಭರ್….ಭಸಾಲ್….ಆಕಾಶವೇ ಕಳಚಿಬಿದ್ದಂತೆ ಸುರಿಯುವ ಮಳೆ.

ಈ ವಿಸ್ಮಯವನ್ನು ಎವೆಯಿಕ್ಕದೆ ನೋಡುತ್ತಿದ್ದ ಪುಟ್ಟ ಮಗು ಮಳೆಯತ್ತ ಬೆರಳು ತೋರಿ ಕೇಳುತ್ತದೆ, “ಅಜ್ಜಾ, ಅದೇನು?” ಅಜ್ಜನ ಉತ್ತರ, “ಮಗೂ, ಅದು ಮಳೆ. ಆಕಾಶದಿಂದ ಬರ್ತಾ ಇದೆ.” ಮಗು ಪುನಃ ಕೇಳ್ತದೆ, “ಅದು ಹೇಗೆ ಬರ್ತದೆ, ಅಜ್ಜಾ?” ಅಜ್ಜ ಯೋಚಿಸುತ್ತಾರೆ. 'ನೈಋತ್ಯ ಮಾರುತ ಮಳೆ ತರುತ್ತದೆ' ಅನ್ನಲೇ? ಛೇ, ಹಾಗಲ್ಲ, ಮಗುವಿನ ಭಾಷೆಯಲ್ಲೇ ಹೇಳಬೇಕು ಅಂದುಕೊಳ್ತಾರೆ.

ಮಗುವಿನ ಕೈಗೊಂದು ಸ್ಟೀಲ್ ಲೋಟ ಕೊಟ್ಟು, 'ಹೇಳ್ತೇನೆ, ಇದನ್ನ ಫ್ರಿಜ್‌ನಲ್ಲಿಡು' ಅಂತಾರೆ. ಅನಂತರ ಅಜ್ಜ – ಮೊಮ್ಮಗ ಮಳೆ ನೋಡ್ತಾ ಕೂರ್ತಾರೆ. ಐದು ನಿಮಿಷಗಳ ಬಳಿಕ 'ಆ ಲೋಟ ತಾ' ಎಂದು ತರಿಸ್ತಾರೆ. 'ಅದನ್ನ ಮೇಜಿನ ಮೇಲಿಟ್ಟು ನೋಡ್ತಾ ಇರು' ಅಂತಾರೆ. ಇನ್ನೂ ಐದು ನಿಮಿಷಗಳು ಸರಿಯುತ್ತವೆ. “ಏನಾಯ್ತು ಮಗೂ” ಅಜ್ಜ ಕೇಳ್ತಾರೆ. ಮಗು ಲೋಟ ತೋರಿಸ್ತಾ ಕುಪ್ಪಳಿಸುತ್ತಾ ಹೇಳ್ತದೆ, “ಅಜ್ಜಾ, ಲೋಟದಲ್ಲಿ ನೀರು ಬಂದಿದೆ.” ಅಜ್ಜ ಮುಗುಳು ನಗುತ್ತಾ “ಮಳೆ ಹೀಗೇ ಬರ್ತದೆ” ಅಂತಾರೆ. ಮಗುವೂ ಮುಗುಳು ನಗುತ್ತದೆ. ಅದಕ್ಕೆ ಅರ್ಥವಾಗಿತ್ತು.

ದೊಡ್ಡವರಿಗೆ ಈ ವಿಸ್ಮಯವನ್ನು ವಿವರಿಸಿ ಹೇಳಬೇಕಾಗ್ತದೆ, ಅಲ್ಲವೇ? ತಿಳಿಯೋಣ ಬನ್ನಿ. ವಾತಾವರಣದಲ್ಲಿ ಒಂದಾದ ಮೇಲೊಂದರಂತೆ ಜರಗುವ ವಿಶೇಷ ಬದಲಾವಣೆಗಳ ಸರಪಣಿ ಕ್ರಿಯೆಯ ಫಲವೇ ಮಳೆ. ಈ ಸರಪಣಿ ಕ್ರಿಯೆ ಸಮುದ್ರದ ಮೇಲಿನಿಂದ ಹಾದು ಬರುವ ಮಳೆ

ಮಾರುತಗಳ ಒಂದು ವ್ಯವಸ್ಥೆ. ಚಳಿಗಾಲ ಮತ್ತು ಬೇಸಗೆಕಾಲಗಳಲ್ಲಿ ಸೂರ್ಯನ ಚಲನೆಗೆ ಭೂಮಿಯ ಪ್ರತಿಕ್ರಿಯೆ ಈ ಮಾರುತಗಳ ಚಲನೆ. ಬೇಸಿಗೆಯಲ್ಲಿ ಇಡೀ ಭರತಖಂಡ ಕಾದು ಕೆಂಡದಂತಾಗುತ್ತದೆ. ಆದರೆ ಸಮುದ್ರಕ್ಕಿಂತ ಬೇಗನೇ ನೆಲ ಬಿಸಿಯೇರುತ್ತದೆ. ಇದರಿಂದಾಗಿ ನೆಲದ ಮೇಲಿನ ವಾತಾವರಣದ ಉಷ್ಣತೆ  ಸಮುದ್ರದ ಮೇಲಿನ ವಾತಾವರಣದ ಉಷ್ಣತೆಗಿಂತ ಬಹಳ ಜಾಸ್ತಿಯಾಗುತ್ತದೆ. ಹಾಗಾಗಿ ನೆಲದ ಮೇಲೆ ವಾಯುವಿನ ಒತ್ತಡ ಕಡಿಮೆಯಾಗುತ್ತದೆ. ವಾಯುವಿನ ಒತ್ತಡವನ್ನು ಸರಿದೂಗಿಸುವುದು ಪ್ರಕೃತಿಯ ನಿಯಮ. ಆದ್ದರಿಂದ ಹೆಚ್ಚಿನ ವಾಯು ಒತ್ತಡದ ಪ್ರದೇಶಗಳಿಂದ ಕಡಿಮೆ ವಾಯು ಒತ್ತಡದ ಪ್ರದೇಶಗಳಿಗೆ ಗಾಳಿ ನುಗ್ಗಿ ಬರುತ್ತದೆ. ಹೀಗೆ ನುಗ್ಗಿ ಬರುವ ಗಾಳಿ ನೆಲಮಟ್ಟದಲ್ಲಿಯೇ ಸುತ್ತುವುದಿಲ್ಲ. ಅದು ವಾತಾವರಣದಲ್ಲಿ ಎತ್ತರಕ್ಕೆ ಏರಿದಂತೆ ಅಲ್ಲಿನ ಕಡಿಮೆ ಉಷ್ಣತೆಗೆ ಒಡ್ಡಿಕೊಳ್ಳುತ್ತದೆ.

ಆಗ ಒಂದು ವಿಶೇಷ ಬದಲಾವಣೆ ಜರಗುತ್ತದೆ. ಸಮುದ್ರದ ಮೇಲಿನಿಂದ ಬೀಸಿ ಬಂದ ಗಾಳಿ ತನ್ನೊಂದಿಗೆ ಸಮುದ್ರದ ನೀರಿನ ತೇವಾಂಶವನ್ನು ಸೆಳೆದುಕೊಂಡು ಮೋಡಗಳ ರೂಪದಲ್ಲಿ ಭೂಭಾಗಕ್ಕೆ ಆಗಮಿಸಿರುತ್ತದೆ. ವಾತಾವರಣದ ಮೇಲ್ಪದರದ ತಂಪಿಗೆ ಒಡ್ಡಿಕೊಂಡಾಗ, ಈ ತೇವಾಂಶ ತಣಿದು ನೀರ ಹನಿಗಳಾಗುತ್ತವೆ. (ತಂಪಾದ ಸ್ಟೀಲ್ ಲೋಟದ ಹೊರಮೈಯಲ್ಲಿ ನೀರ ಹನಿಗಳು ಕಾಣಲು ಇದೇ ಕಾರಣ.) ಗುರುತ್ವಾಕರ್ಷಣೆಯ ಬಲದಿಂದಾಗಿ ಈ ನೀರ ಹನಿಗಳು ನೆಲಕ್ಕೆ ಇಳಿದಾಗ ಮಳೆಯಾಗುತ್ತದೆ.

ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ: ವಾತಾವರಣವನ್ನು ತಂಪಾಗಿಸಿ, ಅದರಿಂದಾಗಿ ಮಳೆಮಾರುತಗಳಿಂದ ಮಳೆ ಸುರಿಯಬೇಕಾದರೆ ಕಾಡುಗಳು ಇರಲೇ ಬೇಕು. ಹಾಗಿರುವಾಗ, ಇತ್ತ ನಿಮಿಷಕ್ಕೆ ೨೩ ಹೆಕ್ಟೇರುಗಳಂತೆ ವರುಷಕ್ಕೆ ೧೨ ಮಿಲಿಯ ಹೆಕ್ಟೇರ್ ಪ್ರದೇಶದ ಕಾಡುಗಳನ್ನು ನಾಶ ಮಾಡುತ್ತ ಅತ್ತ ಮಳೆ ಕಡಿಮೆಯಾಯಿತೆಂದು ಗೋಳಾಡುವುದಕ್ಕೆ ಅರ್ಥವಿಲ್ಲ.

"ಕೇರಳಕ್ಕೆ  ಮುಂಗಾರು ಒಂದು ವಾರ ಮುಂಚೆಯೇ ಪ್ರವೇಶಿಸಿದೆ. ೨೩ ಮೇ ೨೦೦೯ರ ಮುಂಜಾನೆಯಿಂದ ಅಲ್ಲಿ ಮಳೆ ಶುರುವಾಗಿದೆ" ಎಂಬ ವರದಿಯನ್ನು ಇಂದಿನ (೨೪-೫-೨೦೦೯) ವಾರ್ತಾ ಪತ್ರಿಕೆಗಳಲ್ಲಿ ಓದಿದಾಗ ಇವೆಲ್ಲ ಯೋಚನೆಗಳು ಚಿಮ್ಮಿ ಬಂದವು. ಬೇಸಗೆಯ ಬಿಸಿಯಿಂದ ಬಸವಳಿದ ನೆಲಕ್ಕೆ, ಮೈಮನಕ್ಕೆ ತಂಪೆರೆಯುವ ಮಳೆ ಮತ್ತೆ ಬರುತ್ತಿದೆ. ನಿಮ್ಮ ಊರಿನಲ್ಲಿ ಮಳೆ ಹೇಗೆ ಬರುತ್ತಿದೆ? ಕಳೆದ ಐದು ವರುಷಗಳಲ್ಲಿ ಏನಾದರೂ ಬದಲಾವಣೆ ಕಾಣಿಸಿದೆಯೇ? ತಿಳಿಸುತ್ತೀರಾ?

## ಮಳೆ ನೀರಿಂಗಿಸಿ, ತೋಟ ಮಾತ್ರವಲ್ಲ, ಜೀವ ಉಳಿಸಿ.

ಉಮೇಶ ಪೂಜಾರಿ ಈಗ ನಮ್ಮೊಂದಿಗಿಲ್ಲ. ೧೯ ಏಪ್ರಿಲ್ ೨೦೦೯ರಂದು ಆತ್ಮಹತ್ಯೆ ಮಾಡಿಕೊಂಡರು.

ಈ ಘಟನೆ ಬಗ್ಗೆ ೨೦ ಏಪ್ರಿಲ್ ೨೦೦೯ರ ವಾರ್ತಾಪತ್ರಿಕೆಯಲ್ಲಿ ವರದಿ ಹೀಗಿತ್ತು: "ಸಾಲದ ಬಾಧೆಯಿಂದ ಬೇಸತ್ತ ಅಲಂಕಾರು ಗ್ರಾಮದ ಕೈಯಪ್ಪೆಯ ರೈತ ಉಮ್ಮಪ್ಪ ಯಾನೆ ಉಮೇಶ ಪೂಜಾರಿ (೫೦) ಭಾನುವಾರ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡರು. ಉಮ್ಮಪ್ಪ ಅವರು ಕೆಲವು ದಿನಗಳ ಹಿಂದೆ ತನ್ನ ತೋಟದಲ್ಲಿ ಬೋರ್‌ವೆಲ್ ತೋಡಿಸಿದ್ದರು. ಸುಮಾರು ೭೦ ಸಾವಿರ ರೂಪಾಯಿ ಸಾಲ ಮಾಡಿ ತೋಡಿಸಿದ ಬೋರ್‌ವೆಲ್ ನಲ್ಲಿ ನೀರು ಸಿಗದೇ ಇದ್ದ ಕಾರಣ ಅವರು ಚಿಂತಿತರಾಗಿ ಆತ್ಮಹತ್ಯೆ ಮಾಡಿಕೊಂಡರು ಎಂದು ಕಡಬ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಮೃತರಿಗೆ ಪತ್ನಿ, ಪುತ್ರಿ, ಇಬ್ಬರು ಪುತ್ರರು ಇದ್ದಾರೆ."

ಇದನ್ನೋದಿದಾಗ ನನಗೆ ನೆನಪಾದದ್ದು ಉತ್ತರಕನ್ನಡ ಜಿಲ್ಲೆಯ ಶಿರಸಿ ಹತ್ತಿರದ ಕಾಡಕೋಳಿ ಮನೆಯ ದೇವರು ಭಟ್ ಸೋದರರು. ಅಲ್ಲಿಗೆ ಹೋಗಿದ್ದಾಗ ಅವರು ಹೇಳಿದ್ದ ಮಾತು, "ಎರಡು ವರುಷ ಮುಂಚೆ ನಾವು ನಮ್ಮ ಅಡಿಕೆ ತೋಟ ಮಾರಿ ಊರು ಬಿಟ್ಟು

ಹೋಗೋದಂತ ಮಾಡಿದ್ವು. ಈಗ ಧೈರ್ಯ ಬಂದಿದೆ. ಒಂದು ವರುಷ ಮಳೆ ಬಾರದಿದ್ರೂ ತೊಂದರೆ ಇಲ್ಲ. ನಮ್ಮ ಅಡಿಕೆ ತೋಟ ಉಳಿಸಿಕೊಳ್ತೇವೆ."

ತಮ್ಮ ಅಡಿಕೆ ತೋಟದ ಮೇಲ್ಭಾಗದ ಗುಡ್ಡದಲ್ಲಿ ನೀರಿಂಗಿಸುವ ಸಮತಲ ಅಗಳು ತೋರಿಸುತ್ತಾ ಅವರು ಕೇಳಿದ ಪ್ರಶ್ನೆ, "ಇದರ ಉದ್ದ ಎಷ್ಟು ಹೇಳಿ?" ಎಲ್ಲರ ಕಣ್ಣಂದಾಜಿನ ಲೆಕ್ಕ ತಪ್ಪಿತ್ತು. ಕೆಲವರು ಹೆಜ್ಜೆಗಳಿಂದ ಅಳೆಯುತ್ತಿದ್ದಂತೆ ಶ್ರೀಪತಿ ದೇವರು ಭಟ್ ಉತ್ತರ ಹೇಳಿಬಿಟ್ಟರು, "ಇಪ್ಪತ್ತು ಅಡಿ." ತಕ್ಷಣ ಹೊರಬಿತ್ತು ಎರಡನೆಯ ಪ್ರಶ್ನೆ, "ಇದರ ಅಗಲ ನಾಲ್ಕಡಿ, ಆಳ ೩ ಅಡಿ. ಇದರಲ್ಲಿ ಎಷ್ಟು ನೀರು ಹಿಡೀತದೆ?" ಉತ್ತರಿಸಲು ನಾವು ತಡಕಾಡುತ್ತಿರುವಾಗ "ಹೆಚ್ಚುಕಮ್ಮಿ ೫ ಸಾವಿರ ಲೀಟರ್ ನೀರು ಹಿಡೀತದೆ. ಇಂತಹ ನಲುವತ್ತು ಅಗಳು ಮಾಡಿಸಿದ್ದೇವೆ. ಅಲ್ಲಿಗೆ ಎಷ್ಟು ಮಳೆ ನೀರು ಈ ಗುಡ್ಡದಲ್ಲಿ ಕೊಯ್ಲಾಗುತ್ತದೆ, ನೀವೇ ಲೆಕ್ಕ ಹಾಕಿ" ಎಂದು ಸವಾಲೆಸೆದರು ಶ್ರೀಪತಿ ಭಟ್.

ಚುರುಕಾಗಿ ಗುಡ್ಡವೇರುತ್ತಾ ಅವರು ಆರೇಳು ಇಂಗುಗುಂಡಿಗಳನ್ನು ನಮಗೆ ತೋರಿಸಿದರು. ಕೆಲವಂತೂ ಒಂದಾಳು ಆಳ. ಅವರ ಮನೆಯ ಎದುರಿನ ಗುಡ್ಡದ ಕಾಡನ್ನು ಕಾಡು ಅನ್ನುವಂತಿಲ್ಲ. ಅಲ್ಲಿದ್ದ ಪುರಾತನ ಮರಗಳನ್ನು ಅರಣ್ಯ ಇಲಾಖೆಯವರು ಎರಡು ದಶಕಗಳ ಮುನ್ನ ಕಡಿದು ತೇಗ ನೆಟ್ಟಿದ್ದರು. ಆ ಮರಗಳು ಎತ್ತರಕ್ಕೆ ಬೆಳೆದಿದ್ದರೂ ನಿಬಿಡವಾಗಿಲ್ಲ. ಆದ್ದರಿಂದ ಅಲ್ಲಿ ಬಿದ್ದ ಮಳೆ ನೀರು ಇಂಗದೆ ಹರಿದು ಹೋಗುತ್ತಿತ್ತು. ಅದನ್ನೆಲ್ಲ ಇಂಗಿಸಲು ಆಳದ ಇಂಗುಗುಂಡಿಗಳೇ ಬೇಕು.

"ಮಳೆ ಬಂದಾಗೆಲ್ಲ ನಮ್ಮ ಮನೆ ಎದುರಿನ ತೋಡಿನಲ್ಲಿ ನೀರು ತುಂಬಿ ರಭಸದಿಂದ ಹರೀತಿತ್ತು. ಇದನ್ನಾದರೂ ಇಂಗಿಸಬೇಕೆಂಬ ಯೋಚನೆ. ಆದರೆ ಹೇಗೆ ಅಂತ ತಲೆಕೆಡಿಸಿಕೊಂಡೆವು. ಆಗ ನೆನಪಾಯಿತು. "ಅಡಿಕೆ ಪತ್ರಿಕೆ"ಯ ನೆಲ-ಜಲ ಉಳಿಸುವ ಲೇಖನಮಾಲೆಯಲ್ಲಿ ಓದಿದ್ದು. ಕೂಡಲೇ ಅಗಳು ತೆಗೆಯೋ ಕೆಲಸ ಶುರು ಮಾಡಿದೆವು" ಎಂದು ನೆನಪು ಮಾಡಿಕೊಳ್ಳುತ್ತಾ ನಮ್ಮನ್ನೆಲ್ಲ ತಮ್ಮ ಮನೆಯತ್ತ ಕರೆ ತಂದರು ಶ್ರೀಪತಿ ಭಟ್. "ಇದೇ ತೋಡು ನೋಡಿ" ಎಂದು ಆ ತೋಡನ್ನು ನಮಗೆ ತೋರಿಸುತ್ತ ಹೇಳಿದರು, "ಈಗ ಮಳೆಗಾಲದಲ್ಲಿ ಇದರಲ್ಲಿ ನೀರಿನ ಹರಿವು ಕಡಿಮೆಯಾಗಿದೆ. ಯಾಕೆಂದರೆ ಗುಡ್ಡದಲ್ಲಿ ಬಿದ್ದ ಹೆಚ್ಚಿನ ಮಳೆ ನೀರೆಲ್ಲ ಅಲ್ಲೇ ಇಂಗುತ್ತದೆ."

"ಹಾಗೆ ಇಂಗಿದ ನೀರೆಲ್ಲ ನಮಗೇ ಸಿಗ್ತದೆ. ನಮ್ಮ ಬಾವಿಯಲ್ಲಿ ನೀರೆಷ್ಟಿದೆ ನೋಡಿ" ಎಂದು ನಮ್ಮನ್ನು ಕರೆದೊಯ್ದರು. ಮನೆಗೆ ಹತ್ತಿರದಲ್ಲೇ ಇರುವ ೩೧ ಅಡಿ ವ್ಯಾಸದ ಆ ಬಾವಿ ಅವರ ಮುಖ್ಯ ನೀರಿನ ಆಸರೆ. ತಂದೆಯ ಕಾಲದಿಂದಲೂ ಅಡಿಕೆ ತೋಟಕ್ಕೆ ಮತ್ತು ಮನೆ ಬಳಕೆಗೆ ನೀರೊದಗಿಸಿದ ಬಾವಿ ಅದು. ನಾವು ನೋಡಿದಾಗ (೧೭ ಮೇ ೨೦೦೪) ಅದರಲ್ಲಿ ಸಮೃದ್ಧ ನೀರು. "ಎರಡು ವರುಷದ ಹಿಂದೆ, ಮಾರ್ಚ್ ತಿಂಗಳಲ್ಲೇ ಇದು ಒಣಗಿತ್ತು ಅಂದರೆ ನಂಬ್ತೀರಾ? ನಾವಾಗ ಕಂಗಾಲು. ಈಗ ನೋಡಿ, ಧಾರಾಳ ನೀರಿದೆ. ಇದೆಲ್ಲ ನಾವು ಗುಡ್ಡದಲ್ಲಿ ಇಂಗಿಸಿದ ನೀರು" ಎಂಬ ವಿವರಣೆ ಅವರಿಂದ.

ಮನೆಯೆದುರಿನ ಅಡಿಕೆ ತೋಟದಲ್ಲಿ ಕಳೆದ ವರುಷ ತೋಡಿದ ಎರಡನೆಯ ಬಾವಿಯಲ್ಲೂ ಹೇರಳ ನೀರು. ಹನ್ನೊಂದು ಅಡಿ ವ್ಯಾಸದ ರಿಂಗ್ ಗಳನ್ನು ಇಳಿಸಿದ ೨೦ ಅಡಿ ಆಳದ ಬಾವಿ ಅದು. ಪಂಪಿನಿಂದ ಈ ದಿನ ತಳದ ತನಕ ನೀರೆತ್ತಿದರೂ ಮರುದಿನ ಮುಂಜಾನೆ ಅದರಲ್ಲಿ ೧೪ ಅಡಿ ಆಳಕ್ಕೆ ನೀರು ತುಂಬಿರುತ್ತದೆ, ಎನ್ನುವಾಗ ಅವರ ದನಿಯಲ್ಲೇ ಒಂದು ಝಳಕ್.

"ನಮ್ಮ ಹೊಸ ಬಾವಿ ನೀವು ನೋಡಲೇ ಬೇಕು" ಎಂದು ಬೀಸುಗಾಲು ಹಾಕಿ ೩ನೆಯ ಬಾವಿಯತ್ತ ಸಾಗಿದರು. ಅದೇ ವಾರ ಕಲ್ಲು ಕಟ್ಟಿ ಮುಗಿಸಿದ್ದ ಆ ಬಾವಿಯ ವ್ಯಾಸ ೨೦ ಅಡಿ. ಅದರಲ್ಲೂ ಒಂಭತ್ತು ಅಡಿ ಆಳದ ನೀರು ನಿಂತು ನಗುತ್ತಿತ್ತು.

ಈ ೩ ಬಾವಿಗಳೂ ಇಳಿಜಾರಿನಲ್ಲಿ ಒಂದೇ ಸರಳರೇಖೆಯಲ್ಲಿವೆ. ಅವನ್ನು ತೋರಿಸಿದ ಶ್ರೀಪತಿ ದೇವರು ಭಟ್ ನಮಗೆ ಯಾವುದೇ ಸಿದ್ಧಾಂತದ ಪಾಠ ಮಾಡಿರಲಿಲ್ಲ. ಆದರೆ ಮಳೆಕೊಯ್ಲಿನ ಸರಳ ತತ್ವ ತೋರಿಸಿಕೊಟ್ಟಿದ್ದರು. ಮಾಧ್ಯಮ ಸಂಸ್ಕೃತಿ ಅಭಿವೃದ್ಧಿ ಕೇಂದ್ರ

ಶಿರಸಿಯಲ್ಲಿ ನಡೆಸಿದ ನಾಲ್ಕು ದಿನಗಳ "ನೀರ ನೆಮ್ಮದಿಗೆ ಪತ್ರಿಕೋದ್ಯಮ" ತರಬೇತಿ ಶಿಬಿರಕ್ಕೆ ಬಂದಿದ್ದ ಶಿಬಿರಾರ್ಥಿಗಳಿಗೆ ದೊರಕಿದ ಮರೆಯಲಾಗದ ಪಾಠ ಅದಾಗಿತ್ತು. ನಮ್ಮೊಂದಿಗಿದ್ದ 'ಶ್ರೀ'ಪಡ್ರೆಯವರ ಮಾತಿನಲ್ಲಿ ಹೇಳಬೇಕೆಂದರೆ "ಮಳೆಗಾಲದಲ್ಲಿ ಮೇಲಿನ ಗುಡ್ಡದಲ್ಲಿ ನೀರಿಂಗಿಸಿ ನೀರ ಠೇವಣಿ ಇಟ್ಟಿದ್ದಾರೆ. ಬೇಸಗೆಯಲ್ಲಿ ಕೆಳಮಟ್ಟದ ಬಾವಿಗಳಲ್ಲಿ ನೀರು ತೆಗೆಯುತ್ತಿದ್ದಾರೆ. ಇದು ಕೈಯಲ್ಲಿ ಕಾಸಿದ್ದಾಗ ಬ್ಯಾಂಕಿನಲ್ಲಿ ಠೇವಣಿ ಇಟ್ಟು, ಅಗತ್ಯವಿದ್ದಾಗ ಚೆಕ್ ಕೊಟ್ಟು ಹಣ ತೆಗೆಯುವಂತೆ."

ಹೌದಲ್ಲ, ಮಳೆ ನೀರನ್ನು ಗುಡ್ಡದಲ್ಲಿ ಇಂಗಿಸಲು ದೇವರು ಭಟ್ ಸೋದರರಿಗೆ ಆದ ವೆಚ್ಚ ಕೇವಲ ೫,೦೦೦ ರೂಪಾಯಿ. ಆದರೆ ಅದರಿಂದಾದ ಲಾಭ ಲಕ್ಷಗಟ್ಟಲೆ ರೂಪಾಯಿ.

ಈಗ ಹೇಳಿ, ಉಮೇಶ ಪೂಜಾರಿ ಜೀವ ಕಳೆದುಕೊಳ್ಳಬೇಕಿತ್ತೇ?

## ಅಡ್ಡೂರು ಶಿವಶಂಕರರಾಯರ ಎಂಬತ್ತರ ಕೊಯ್ಲಿನ ಕಾಳುಗಳು

**ದಣಿವರಿಯದ ದಾಖಲೆಗಾರ**

ಕಮ್ಯೂನಿಸ್ಟ್ ನೇತಾರ, ಕೃಷಿಕ, ಕೃಷಿ ಸಂವಹನಕಾರ

ನಾವಿಂದು ಯಾವುದನ್ನು 'ಕೃಷಿಕಪರ ಕೃಷಿ ಸಂವಹನ' ಎಂದು ಗುರುತ್ತಿಸುತ್ತೇವೆಯೋ, ಅದನ್ನು ಬದುಕಿನುದ್ದಕ್ಕೂ ಮಾಡುತ್ತಲೇ ಬಂದವರು 'ಅಡ್ಡೂರು'. ಈ ಕೆಲಸ ಮಾಡುವವರು ತುಂಬಾ ವಿರಳ. ಈ ಕಾರಣಕ್ಕಾಗಿ ಅಡ್ಡೂರರ ಈ ಮುಖ ನಮಗೆಲ್ಲ ಆತ್ಮೀಯ.

'ಅಡ್ಡೂರು' ಎಂದಷ್ಟೇ ಹೇಳಿದರೆ ಪರಿಚಯ ಸಿಗದ ದೂರದೂರಿನವರ ಅನುಕೂಲಕ್ಕಾಗಿ ಅವರ ಹೆಸರು ಅಡ್ಡೂರು ಶಿವಶಂಕರ ರಾವ್.

ಮೊನ್ನೆಮೊನ್ನೆ ಒಂದು ರಾತ್ರಿ ಅವರು ಮಲಗುವಾಗಲೇ ತುಂಬಾ ತಡ. ದಿನವಿಡೀ ಮಾತುಕತೆ, ನಡೆದಾಟ, ಪಯಣದ ಸುಸ್ತು. ಇನ್ನಾರೇ ಆಗಿದ್ದರೂ ಹೊದಿಕೆ ಎಳೆದು ಮಲಗಿದರೆ ಬೆಳಗಾಗದೆ ಮಿಸುಕ್ಕಾಡಲಿಕ್ಕಿಲ್ಲ. ಹೊರಗಡೆ ಕೃಷಿಕರ ಚರ್ಚೆ. ಒಳಕೋಣೆಯಲ್ಲಿ ಮಲಗಿದ ಅಡ್ಡೂರರಿಗೆ ಏನೋ ಒಳ್ಳೆಯ ವಿಚಾರ ಕಳಕೊಳ್ಳುತ್ತಿರುವ ಸಂಶಯ. 'ನೀವಿಲ್ಲಿ ಕೃಷಿ ಚರ್ಚೆಯಲ್ಲಿದ್ದರೆ ನಾನು ಹೇಗೆ ನಿದ್ರಿಸಲಿ' ಎನ್ನುತ್ತಾ ಎದ್ದು ಬಂದರು. ಅವರಿಗೆ ಎಂಭತ್ತೊಂದು ಎಂದು ಹೇಳಿದವರು ಯಾರು?

ಕೃಷಿಯ ಬಗ್ಗೆ ಜನರಿಗೆ ಮಾಹಿತಿ ಹಂಚುವ ಕೆಲಸದಿಂದಾಗಿ ತನಗೆ ಕೃಷಿಗೆ ಅಷ್ಟು ಲಕ್ಷ್ಯ ಕೊಡಲಾಗದಿರುವುದಕ್ಕೆ ಬೇಸರವಿಲ್ಲ. ಹಿಂದಿಗಿಂತಲೂ ಇಂದು ಕೃಷಿಕರ ಸಂವಾದ ಕೂಟಗಳು, ಸಂಘಟನೆಗಳು ಅಗತ್ಯ ಎನ್ನುವ ಆಶಯ. ಹೌದು, ಸಾಹಿತ್ಯ ಗೋಷ್ಠಿ, ಕಾವ್ಯ ಗೋಷ್ಠಿಗಳಂತೆ ಕೃಷಿ ಮಾಧ್ಯಮಗೋಷ್ಠಿ, ಕೃಷಿ ಸಂಶೋಧನೆಯ ವಿಮರ್ಶಾ ಗೋಷ್ಠಿಗಳು ನಮ್ಮಲ್ಲಿ ಏಕೆ ಆರಂಭವಾಗಬಾರದು? ಅಡ್ಡೂರರು ಸ್ನೇಹಿತರೊಂದಿಗೆ ಆರಂಭಿಸಿ ನಡೆಸಿದ 'ಕೃಷಿ ಅನುಭವ ಕೂಟ' ಇಂತದೊಂದು ಸಂಘಟನೆ.

ಈ ದೇಶದ ಕೃಷಿ ಸಂಶೋಧನೆಯ ದಿಕ್ಕು ಮತ್ತು ರೈತರ ಸಂಶೋಧನೆಯ ಆವಶ್ಯಕತೆಗಳು ಒಂದೇ ಹಳಿಯ ಮೇಲೆ ಹೋಗುತ್ತಿಲ್ಲ, ರೈತರಿಗೆ ಬೇಕಾಗಿದ್ದೇ ಒಂದು. ಕೃಷಿವಿಜ್ಞಾನಿಗಳು 'ನಿಮಗಿದು ವರದಾನ' ಎಂದು ಹಾಡಿಹೊಗಳುವುದು ಇನ್ನೊಂದು. ಅಡ್ಡೂರರ ಭತ್ತದ ಬೆಳೆಯ ಅನುಭವಗಳು, ಎಂಡ್ರೆಕ್ಸ್‌ಯುಕ್ತ ಬೈಹುಲ್ಲಿನಿಂದ ಸತ್ತ ದನದ ಪ್ರಕರಣಕ್ಕಿಂತ ಈ ಮಾತಿಗೆ ಬೇರೆ ನಿದರ್ಶನ ಬೇಡ.

ಕೃಷಿಯ ಪೂರ್ವಾನುಭವವಿಲ್ಲದ, ಕೃಷಿ ಸಂಶೋಧನೆಯ ಮೇಲೆ ತುಂಬು ಭರವಸೆಯಿದ್ದ ಶಿವಶಂಕರ ರಾಯರ ಕೃಷಿ ಬದುಕು ದೇಶದ ಕೃಷಿ ಸಂಶೋಧನಾ ರಂಗದ ಒಳಿತು ಕೆಡುಕುಗಳ ಒಂದು ಬ್ಯಾಲೆನ್ಸ್ ಶೀಟ್ ಕೂಡಾ ಹೌದು. ರೈತ ಆಡ್ದೂರು ಕೃಷಿಯಲ್ಲಿ ಗೆದ್ದಿದ್ದರೆ ನಮ್ಮ ಕೃಷಿ ಸಂಶೋಧನಾ ರಂಗಕ್ಕೂ ಅದರಲ್ಲೊಂದು ಗಣನೀಯ ಪಾಲಿದೆ. ಸೋತಿದ್ದರೆ ಅದರಲ್ಲೂ.

ಶಿವಶಂಕರರಾಯರಲ್ಲಿ ಕೃಷಿತಜ್ಞರ 'ಶಿಫಾರಸುಗಳಿಗೆ' ಕಿವಿಯಿದೆ. ಆದರೆ ಕೇಳಿದ್ದಕ್ಕೆಲ್ಲಾ 'ಗೋಣು ಹಾಕುವ' ಭೋಳೆತನವಿಲ್ಲ. ಬದಲಿಗೆ ರೈತ ಸಮುದಾಯದ ಕಂಗಳಿಂದ ಅದನ್ನು ವಿಮರ್ಶೆಯ ಒರೆಗೆ ಹಚ್ಚುವ, ಹೊಲದಲ್ಲಿ ಪ್ರಯೋಗಿಸಿ ತಪ್ಪಿದರೆ ಕನ್ನಡಿ ಹಿಡಿಯುವ ಛಾತಿಯಿದೆ. ಗಟ್ಟಿತನವಿದೆ. ಯಾರಿಗಾಗಿ ಇಷ್ಟೊಂದು ಶ್ರಮ, ವೆಚ್ಚದಿಂದ ಸಂಶೋಧನೆ ಮಾಡಿದ್ದಾರೋ, ಆ ಜನರಿಗೆ, ಅಂದರೆ ನಮಗೆ ಕೃಷಿಕರಿಗೆ, ಈ ಸಂಶೋಧನೆಗಳು ಹೇಗೆನಿಸಿವೆ ಎಂದು ಕೃಷಿ ವಿಜ್ಞಾನಿಗಳಿಗೆ ತಿಳಿಸುವ ಮಹತ್ವದ ಕೆಲಸ ಈ ದೇಶದಲ್ಲಿ ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಶಿವಶಂಕರ ರಾವ್ ತನ್ನ ಅನುಭವಜನ್ಯ ಪ್ರತಿಕ್ರಿಯೆಯನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸುವ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಈ ಪ್ರವೃತ್ತಿ ನಮ್ಮ ಕೃಷಿಕರಲ್ಲಿ ಹೆಚ್ಚಿದಷ್ಟು ನಮ್ಮ ಕೃಷಿ ಸಂಶೋಧನೆಯ ಮತ್ತು ರೈತ ಆಶೋತ್ತರಗಳ ನಡುವಣ ಕಂದರ ಕಿರಿದಾದಿತೇನೋ.

ಪತ್ರಕರ್ತರು, ಅದರಲ್ಲೂ ಕೃಷಿರಂಗದವರು ಆಡ್ದೂರರಿಂದ, ಈ ಪುಸ್ತಿಕೆಯಲ್ಲಿ ಪ್ರತಿಫಲಿಸಿದ ವ್ಯಕ್ತಿತ್ವದಿಂದ ಕಲಿಯಬಹುದಾದ ಪಾಠಗಳು ಹಲವು. ಮೊದಲನೆಯದು - ತನಗೆ ತಿಳಿದಿರುವ ಜ್ಞಾನವನ್ನು ಪ್ರದರ್ಶಿಸುವ ಬದಲು ಇತರರಿಂದ ಇನ್ನಷ್ಟು ಅನುಭಸಾರವನ್ನು ಹೊರಗೆಳೆಯಲು ಅದನ್ನು ಬಳಸುವುದು.

ಕೃಷಿಯಲ್ಲಿ ಹೊಸತೇನಾದರೂ ಇದೆಯೇ ಇಲ್ಲವೇ ಎಂಬುದನ್ನು ಹೊರಗಿನಿಂದಲೇ ನಿರ್ಧರಿಸುವ ಬದಲು ಕಣ್ಣಾರೆ ಕಂಡೇ ಅಭಿಪ್ರಾಯಕ್ಕೆ ಬರುವುದು ಎರಡನೆಯದು. ಸೋಗಿಲ್ಲದ, ಮನಸ್ಸು ತೆರೆದಿರುವ ಮಾತು, ಬರಹ, ಇತರರನ್ನು ನೋಯಿಸದ (ತನ್ನನ್ನೇ ಗೇಲಿ ಮಾಡಿಕೊಂಡರೂ ಅಡ್ಡಿಯಿಲ್ಲ) ತಿಳಿಹಾಸ್ಯ ಲೇಪನ ಓದುಗನಿಗ ಆತ್ಮೀಯವಾಗುತ್ತದೆ ಎನ್ನುವುದು ಮೂರನೆಯ ಸಂದೇಶ. ಅಹಂ ಹತ್ತಿರ ಸುಳಿಯದಂತೆ ನೋಡಿಕೊಂಡರೆ ಮನದಲ್ಲಿ ಎಷ್ಟೋ ವಿಚಾರ ದಾಖಲೆ ಮಾಡಲು ಜಾಗವಿರುತ್ತದೆ. ಹೊಸತನ್ನು ಎಲ್ಲಿ ಕಂಡರೂ ಗುರುತಿಸುವ, ಗ್ರಹಿಸುವ ಜಾಗ್ರತೆ ಉಳಿಯುತ್ತದೆ ಎನ್ನುವುದು ಮತ್ತೊಂದು ಗುಟ್ಟು.

ಅಡ್ದೂರರ ಆಸ್ತಿ ಅವರ ಬದುಕಿನ ಪ್ರಯೋಗಶಾಲೆ ಮುಳಿಪಡ್ಪು ಮಾತ್ರವಲ್ಲ. ಇನ್ನೂ ಮೂರು ಇವೆ. ಮೊದಲನೆಯದು ಅವರ ಅಪೂರ್ವ ಗ್ರಂಥಭಂಡಾರ. ಇದು ಕೆಲವರಿಗೆ ಗೊತ್ತು. ಎರಡನೆಯದನ್ನು ಕೆಲವೇ ಕೆಲವರು ಬಲ್ಲರು. ಅವರ ಟಿಪ್ಪಣಿ ಪುಸ್ತಕಗಳ ಸಂಗ್ರಹ. ಮೂರನೆಯದು ಹೊರಕ್ಕೆ ಕಾಣಿಸಿಕೊಳ್ಳುವುದಿಲ್ಲ. ಅದು ಅವರ ಮನದ ಗಣಕಯಂತ್ರದಲ್ಲಿರುವುದು.

ಎಲ್ಲಿ, ಯಾವ ಸಂದರ್ಭದಲ್ಲಿ ಹೊಸತೊಂದು ಮಾಹಿತಿಯ ಎಳೆ ಸಿಕ್ಕರೂ ಅದನ್ನವರು ತನ್ನ ನೋಟ್ ಬುಕ್ಕಿಗೆ ಸೇರಿಸುತ್ತಾರೆ. ಅವರು ಸಭೆ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಮತ್ತು ಟಿಪ್ಪಣಿ ಮಾಡುವ ಗತಿ ಗಮನಿಸಿದರೆ ಈ ವರೆಗಿನ ಮಾಹಿತಿಗಳು ನೂರಿನ್ನೂರು ನೋಟ್ ಬುಕ್‌ಗಳಾದರೂ ತುಂಬಿರಬಹುದು. ನಾನು ಒಮ್ಮೊಮ್ಮೆ ಹೇಳಿಕೊಳ್ಳುವುದಿದೆ, "ನಮ್ಮ ಶಿವಶಂಕರ ರಾಯರು, ಡಾ.ಸೋನ್ಸ್, ಆರ್.ಎಸ್.ಪಾಟೀಲ್, ಭರಮಗೌಡ್ರ ಮೊದಲಾದವರು ಕೃಷಿಯಲ್ಲಿ ಹೊಸಬರ ಅನ್ವೇಷಣೆಗಾಗಿ ಸದಾ ಕಾಲಿಗೆ ಚಕ್ರ ಕಟ್ಟಿಕೊಂಡವರು. ತಾವು ಕಂಡು ತಿಳಿದದ್ದನ್ನು ಬರೆಯುತ್ತಲೇ ಹೋದರೆ ಅದು ಗಟ್ಟಿಯಾದ ಕೃಷಿ ಸಾಹಿತ್ಯವಾದೀತು ಅಂತ. ಏಕೆ ಗೊತ್ತೇ, ಇವರುಗಳು ಹೇಳಿದ ಮಾತನ್ನೆಲ್ಲಾ ಮುಖಬೆಲೆಗೆ ತೆಗೆದುಕೊಳ್ಳದವರು, ರೈತಹಿತದ ಚಿಂತನೆಯಿಂದ ಕಂಡು ಕೇಳಿದ್ದನ್ನು ತೂಗಿ ಬೆಲೆ ಕಟ್ಟುವವರು.

ಅಡ್ದೂರರ ಬದುಕಿನ ಈ ಹಿನ್ನೋಟ ಓದುವಾಗಲೆಲ್ಲಾ 'ನೀವಿದನ್ನು ಬರೆಯಲೇ ಬೇಕು ಅಪ್ಪಾ' ಎಂದು ಒತ್ತಡ ತಂದ 'ಕೃಷ್ಣ' ಮಾಡಿದ್ದು ಎಷ್ಟು ಒಳ್ಳೆಯ ಕೆಲಸ ಎಂದು ನನಗನ್ನಿಸುತ್ತದೆ. ನೋಟ್‌ಬುಕ್ಕಿನೊಳಗೆ, ಮನದೊಳಗೆ ಇರುವ ಅನುಭವ- ಮಾಹಿತಿಗಳ ಸಾರದ ಮಿತಿ ಎಂದರೆ ಅದನ್ನು ಸಂಬಂಧಪಟ್ಟವರ ಸಹಕಾರ ಇಲ್ಲದೆ ಇತರರಿಗೆ ಹಂಚಲು ಬರುವುದಿಲ್ಲ. ಈ ಪುಸ್ತಿಕೆ ಈ ಕೆಲಸವನ್ನು ಸಮರ್ಥವಾಗಿ

ಮಾಡಿದೆ. ಆದರೆ ಇಷ್ಟೇ ಸಾಲದು, ಅಡ್ದೂರರ ಆಸ್ತಿಗಳ ಜ್ಞಾನಲಾಭ ಇನ್ನಷ್ಟು ಸಿಗುವಂತಾಗಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

– 'ಶ್ರೀ' ಪಡ್ರೆ

**ಶಿವಶಂಕರರಾಯರು ಹಿಂತಿರುಗಿ ನೋಡಿದಾಗ........**

ಅಡ್ದೂರು ಶಿವಶಂಕರರಾಯರ ಬಾಲ್ಯ ತಂಜಾವೂರಿನಲ್ಲಾಯಿತು. ಅಲ್ಲಿಯ ಸಂಸ್ಕೃತಿಯ ಗಾಢ ಪರಿಚಯದೊಂದಿಗೆ, ತಮಿಳು ಭಾಷೆಯಲ್ಲಿ ಅವರ ಪ್ರಾಥಮಿಕ ಮತ್ತು ಹೈಸ್ಕೂಲ್ ಶಿಕ್ಷಣ. ಅನಂತರ ಮಂಗಳೂರಿನಲ್ಲಿ ಶಿಕ್ಷಣ ಮುಂದುವರಿಸುವಾಗ ಹಾಸ್ಟೆಲಿನಲ್ಲಿ ವಾಸ. ಯೌವನದ ಆ ದಿನಗಳಲ್ಲಿ ಕಮ್ಯೂನಿಸ್ಟ್ ಚಳವಳಿಯಲ್ಲಿ ಸಕ್ರಿಯರಾಗಿ, ಅದಕ್ಕಾಗಿ ತನ್ನದೆಲ್ಲವನ್ನು ಮುಡಿಪಾಗಿಟ್ಟು ತೊಡಗಿಸಿಕೊಂಡರು. ಆದ್ದರಿಂದ ಕಮ್ಯೂನಿಸ್ಟ್ ಚಳವಳಿ ಬಲಪಡಿಸಲಿಕ್ಕಾಗಿ ದಾವಣಗೆರೆಗೆ ಬರಬೇಕೆಂಬ ಕರೆ ಬಂದಾಗ ಅಲ್ಲಿಗೆ ಹೊರಟೇ ಬಿಟ್ಟರು. ಅಲ್ಲಿ ಸರಕಾರದ ಕೆಂಗಣ್ಣು ಮತ್ತು ಕಾಟಾನ್ ಮಿಲ್ ಮ್ಹಾಲೀಕರ ದ್ವೇಷ ಎದುರಿಸುತ್ತಾ ಭೂಗತರಾಗಿದ್ದುಕೊಂಡು ಕಮ್ಯುನಿಸ್ಟ್ ಕಹಳೆ ಮೊಳಗಿಸಿದರು. ಮುಂದೆ ಕಮ್ಯೂನಿಸ್ಟ್ ಪಕ್ಷ ಎರಡಾಗಿ ಹೋಳಾದಾಗ ತನ್ನ ಪೂರ್ವಿಕರ ಕೃಷಿ ಭೂಮಿಯಲ್ಲಿ ಕೃಷಿಗಿಳಿದರು. ಮುಂದಿನ ಐದು ದಶಕಗಳಲ್ಲಿ ಕೃಷಿಯೇ ಅವರ ಬದುಕು. ಹೊಸ ತಳಿಗಳ, ಹೊಸ ಬೆಳೆಗಳ ಸತತ ಪ್ರಯೋಗ ಮಾಡಿದರು.

ತನ್ನ ಪಾಲಿಗೆ ಬಂದ ಜಂಬಿಟ್ಟಿಗೆ ಮಣ್ಣಿನ ಬಯಲಿನಲ್ಲಿ ತೆಂಗಿನ ತೋಟ ಬೆಳೆಸಿದರು. ಕೃಷಿ ವಿಜ್ಞಾನಿಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳೊಂದಿಗೆ ಆಗಾಗ ಮುಖಾಮುಖಿ. ಕೃಷಿ ವಿಚಾರಗೋಷ್ಠಿಗಳು, ಕಾರ್ಯಾಗಾರಗಳು ಮತ್ತು ಸೆಮಿನಾರುಗಳಲ್ಲಿ ಸಕ್ರಿಯ ಪಾತ್ರ. ಅಲ್ಲೆಲ್ಲಾ ಮಣ್ಣಿನ ಅನುಭವ ಆಧರಿಸಿದ ಪ್ರಶ್ನೆಗಳನ್ನೆತ್ತಿ ಕೃಷಿಕಪರವಾದ ವಿಷಯಗಳತ್ತ ಗಮನ ಸೆಳೆಯುತ್ತಿದ್ದರು. ಬದುಕಿನುದ್ದಕ್ಕೂ ಪುಸ್ತಕಗಳೇ ಒಡನಾಡಿಗಳಾಗಿದ್ದರೂ, ಇಂದಿಗೂ ಇಂಗದ ಓದಿನ ಹಸಿವು- ಇವು ಅವರ ಬದುಕಿನ ಕೆಲವು ಮುಖಗಳು.

ಎಂಟು ದಶಕಗಳ ಅವರ ಬದುಕು ಸಮೃದ್ಧ ಅನುಭವಗಳ ಖಜಾನೆ. ಅವರ ಜೊತೆ ಮಾತಿಗಿಳಿದಾಗಲೆಲ್ಲಾ ಆ ಖಜಾನೆಯ ವ್ಯಾಪ್ತಿ ಮತ್ತು ವೈವಿಧ್ಯ ಕಂಡು ದಂಗಾಗುವ ಸರದಿ ನಮ್ಮದು.

ಇದನ್ನೆಲ್ಲಾ ಇಂದಿನ ತಲೆಮಾರಿಗೆ ಪರಿಚಯಿಸೋಣ ಅಂದಾಗೆಲ್ಲಾ 'ನನ್ನದೇನು ಮಹಾ' ಎಂಬ ಪ್ರತಿಕ್ರಿಯೆ ಅವರದು.

ಯಾವ ಒತ್ತಾಯಕ್ಕೂ ಅವರು ಮಣಿಯಲಿಲ್ಲ. 1999ರ ದಶಂಬರದಲ್ಲೊಂದು ದಿನ ಕಂಪ್ಯೂಟರನ್ನು ಮಂಗಳೂರಿನ ಮನೆಯಲ್ಲಿ ಜೋಡಿಸಿಕೊಂಡು ಅಂತಿಮ ಪ್ರಯತ್ನಕ್ಕಿಳಿದೆ. 'ಅಪ್ಪ, ನಿಮ್ಮ ನೆನಪು ಹೇಳಿಂಡು ಹೋಯಿನಿ, ನಾಳೆ ಬೆಳಿಗ್ಗೆ ಅದು ನ್ಯೂಸ್ ಪೇಪರುಲೆ ಪ್ರಿಂಟಾಯಿದ್ದು ಬರ್ತು' ಅಂದೆ. ಅದು ಹೇಗೆ ಸಾಧ್ಯ? ಎಂಬ ಕುತೂಹಲದಿಂದ ಮಾತಾಡಲು ಶುರುವಿಟ್ಟರು ನನ್ನ ತಂದೆ - ಅಡ್ದೂರು ಶಿವಶಂಕರ ರಾಯರು.

ಹಾಗೆ ಶುರು ಮಾಡಿ, ಒಂದೇ ತಿಂಗಳಿನಲ್ಲಿ ಹತ್ತು ಬರೆಹಗಳನ್ನು ಹಾಳೆಗಿಳಿಸಿದರು. ಅವು ಮಣಿಪಾಲದ ಉದಯವಾಣಿ ಬಳಗದ 'ಮಾರ್ನಿಂಗ್ ನ್ಯೂಸ್' ಆಂಗ್ಲ ದಿನಪತ್ರಿಕೆಯಲ್ಲಿ 'ರಾಂಡಂ ಹಾರ್ವೆಸ್ಟ್' ಅಂಕಣದಲ್ಲಿ ಪ್ರಕಟವಾದುವು. ಅವೆಲ್ಲವೂ ಕಾಲಗರ್ಭ ಸೇರಿ ಹೋಗಲಿದ್ದ ಹಿಂದಿನ ತಲೆಮಾರಿನ ಬದುಕನ್ನು ಪದಗಳಲ್ಲಿ ಹಿಡಿದಿಟ್ಟ ಬರೆಹಗಳು.

ಈ ರೀತಿಯಲ್ಲಿ ತನ್ನ 77ನೆಯ ವಯಸ್ಸಿನಲ್ಲಿ ಬರವಣಿಗೆಗೆ ತೊಡಗಿದರು ಶಿವಶಂಕರ ರಾಯರು. ಅನಂತರ ಬದುಕಿನಲ್ಲಿ ಅನುಭವಿಸಿದ್ದನ್ನು, ಗ್ರಹಿಸಿದ್ದನ್ನು ಬರೆಯುತ್ತಲೇ ಇದ್ದಾರೆ.

ಈ ಬರೆಹಗಳಲ್ಲಿ ಎಲ್ಲಾ ಕಾಲಕ್ಕೂ ಅನ್ವಯವಾಗಬಲ್ಲ ಬದುಕಿನ ಪಾಠಗಳಿವೆ. ಮುಂದಿನ ತಲೆಮಾರುಗಳಿಗೆ ದಾರಿದೀಪವಾಗಬಲ್ಲ ಅನುಭವಗಳಿವೆ. ಇಂದಿನ ದಿನಗಳಲ್ಲಿ ಸುಲಭವಾಗಿ ದಕ್ಕದ ಒಳನೋಟಗಳಿವೆ. ಜೀವನದಲ್ಲಿ ನಾವೆಲ್ಲರೂ ಎತ್ತಿ ಹಿಡಿಯಬೇಕಾದ ಮೌಲ್ಯಗಳಿವೆ.

ಅಡ್ದೂರು ಶಿವಶಂಕರ ರಾಯರು ತಾನು ನಂಬಿದ್ದನ್ನು ಆಡಿದವರು. ಆಡಿದಂತೆ ಬಾಳಿದವರು. ಬಾಳ ಸಂಜೆಯ ತನ್ನ 82ನೆಯ ವಯಸ್ಸಿನಲ್ಲಿ ಅವರು ಹಿಂತಿರುಗಿ ನೋಡಿದಾಗ ಕಂಡ ನೋಟಗಳು ನಿಮಗೂ ಕಾಣುವಂತಾದರೆ ಅವನ್ನೆಲ್ಲಾ ದಾಖಲಿಸಿದ ಈ ಕೆಲಸ ಸಾರ್ಥಕ.

## ಆತ್ಮೀಯರ ದೃಷ್ಟಿಯಲ್ಲಿ : ಒಬ್ಬ ನಿಷ್ಕಪಟ ವ್ಯಕ್ತಿ - ಇ. ವಿಠಲ ರಾವ್

ಅಡ್ದೂರು ಶಿವಶಂಕರ ರಾಯರ ಮತ್ತು ನನ್ನ ಗೆಳೆತನ ಸುಮಾರು ನಲವತ್ತೈದು ವರುಷಗಳ ದೀರ್ಘ ಅವಧಿಯದ್ದು. ನಮ್ಮ ಸ್ನೇಹ ಸಂಬಂಧ ಅದರದ್ದೇ ಆದ ಸ್ವಂತಿಕೆಯ ಆಧಾರದಲ್ಲಿ ನಿಂತಿದೆ ಎನ್ನಬಹುದು. ಅವರು ನನ್ನಿಂದ ಪ್ರಾಯದಲ್ಲಿ ಸ್ವಲ್ಪ ಹಿರಿಯರು. ಅವರ ತಂದೆ ದಿ.ಕೃಷ್ಣಯ್ಯನವರು ಮತ್ತು ನನ್ನ ತಂದೆ ದಿ.ಇಡ್ಯ ವೆಂಕಟರಾಯರು ಸುಮಾರು ತೊಂಭತ್ತು ವರುಷಗಳ ಹಿಂದೆ, ಮದರಾಸಿನಲ್ಲಿ ವೈದ್ಯಕೀಯ ಶಿಕ್ಷಣದ (ಎಲ್.ಎಂ.ಎಸ್ ಪದವಿ) ವಿದ್ಯಾರ್ಥಿಗಳಾಗಿದ್ದಾಗ ಒಂದೆಡೆ ಊಟ ಮತ್ತು ವಸತಿಗಾಗಿ ಬಿಡಾರ ಮಾಡಿಕೊಂಡಿದ್ದರು. ಹಾಗಾಗಿ ನಮ್ಮ ಎರಡೂ ಕುಟುಂಬಗಳೊಂದಿಗೆ ಅಂದಿನಿಂದಲೇ ಪರಿಚಯ ಹಾಗೂ ಬಾಂಧವ್ಯಗಳಿದ್ದರೂ, ಇವು ನಮ್ಮ ಗೆಳೆತನದ ಮುಖ್ಯ ಬೆಸುಗೆಯಾಗಿರಲಿಲ್ಲ. ನಮ್ಮಿಬ್ಬರಿಗೂ ಒಂದೇ ವೃತ್ತಿಯ (ಕೃಷಿ) ಮೇಲಿರುವ ಆಸಕ್ತಿ ಮತ್ತು ಅಭಿರುಚಿಗಳು ನಮಿಬ್ಬರನ್ನು ಹತ್ತಿರ ತಂದವು ಮತ್ತು ಇದರಿಂದಾಗಿ ನಾವು ಸ್ನೇಹಿತರಾಗಲು ಸಹಾಯವಾಯಿತು.

ನನ್ನನ್ನು ಕೃಷಿಕನನ್ನಾಗಿ ಮಾಡಿದ್ದು ನಿಸರ್ಗದ ಮೇಲಿನ ಪ್ರೀತಿಯಾಗಿದ್ದರೆ, ಶಿವಶಂಕರರಾಯರನ್ನು ಕೃಷಿಕರನ್ನಾಗಿ ಮಾಡಿದ್ದು ರೈತಾಪಿ ವರ್ಗಕ್ಕೆ ಆದಾಯ ಹೆಚ್ಚಿಸುವ ಮತ್ತು ಜ್ಞಾನಪ್ರಸಾರದ ಅವರ ಗೀಳು. ಈ ವಿಚಾರದಲ್ಲಿ ಅವರಿಗೆ ಇಲಾಖೆಗಳ ಮೇಲೆ ಹೆಚ್ಚು ವಿಶ್ವಾಸ ಮತ್ತು ಅವರೊಡನೆ ಒಡನಾಟ ಅತಿ ಹೆಚ್ಚು. ಹಲವು ಇಲಾಖೆಗಳು ಏರ್ಪಡಿಸುತ್ತಿದ್ದ ಸಭೆ ಮತ್ತು ಚರ್ಚಾ ಕೂಟಗಳ ನಾವು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದೆವು. ಕೆಲವೊಮ್ಮೆ ಅಭಿಪ್ರಾಯ ಭೇದಗಳಿದ್ದರೂ ನಮ್ಮೊಳಗೆ ಬಹುತೇಕ ಒಮ್ಮತವಿತ್ತು. ಹೀಗೆ ನಮ್ಮ ಸ್ನೇಹ ಹೆಚ್ಚಿತು, ಪಕ್ವವಾಯಿತು, ಪ್ರೀತಿ ಆದರಗಳು ಬೆಳೆದವು. ಅಂದರೆ ಭಿನ್ನತೆ ಇದ್ದರೂ ಅದರಿಂದ ತೊಂದರೆ ಬಾರದೆ ನಮ್ಮ ಸ್ನೇಹ ಒಂದು ಶಕ್ತಿಯಾಗಿಯೇ ಮಾರ್ಪಟ್ಟಿದೆ.

ಇಂದು ನಾವಿಬ್ಬರೂ ತಗ್ಗಿದ ಧ್ವನಿಯಲ್ಲಿ ಸಂಭಾಷಣೆ ನಡೆಸಲು ಸಾಧ್ಯವಾಗುತ್ತಿಲ್ಲ. ಇದು ವಯಸ್ಸಿನ ಪ್ರಭಾವ. ನಾವು ಚಿಕ್ಕವರಾಗಿದ್ದಾಗ ಮುದುಕರು ಪರಸ್ಪರ ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿ ನಗುತ್ತಿದ್ದೆವು. ಈಗ ನಮ್ಮ ವಿಚಾರದಲ್ಲಿ ಯುವಕರು ಹೀಗೆ ಭಾವಿಸುತ್ತಿರಬಹುದೆಂಬುದನ್ನು ಎಣಿಸಿಕೊಂಡಾಗ ನಮಗೆ ನಗು ಬರುತ್ತದೆ.

ಶಿವಶಂಕರರಾಯರು ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದಾಗಿನ ಹಾಗೂ ಅನಂತರದ ಜೀವನದ ನೆನಪುಗಳನ್ನು ಅವರ ಮಗ ಕೃಷ್ಣನ ಸಹಾಯದಿಂದ ದಾಖಲಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದಾಗಿ ಬಹಳ ಕುತೂಹಲಕಾರಿ ಅಂಶಗಳು ಹೊರಬರುತ್ತಿವೆ. ನನಗೆ ಇವೆಲ್ಲಾ ಹೊಸತು! ನನಗೆ 'ಇಸಮ್'ಗಳ ಗೀಳು ಇಲ್ಲ; ಇಲ್ಲದಿದ್ದುದು ಒಳ್ಳೆಯದೇ ಆಯಿತು ಎಂದು

ಕಾಣುತ್ತಿದೆ. ಆದರೆ ಅದೇ ಸಮಯದಲ್ಲಿ ಶಿವಶಂಕರರಾಯರ ಪ್ರಾಮಾಣಿಕ ಜೀವನದ ಹೊಸಮುಖದ ಅರಿವಾದಂತೆ ಅವರ ಬಗ್ಗೆ ಹೆಮ್ಮೆಯಿಂದ ಒಂದು ಹೊಸ ಬಾಂಧವ್ಯ ಉಂಟಾಗಿದೆ.

ಅವರು ಒಬ್ಬ ನಿಷ್ಕಪಟ ವ್ಯಕ್ತಿ. 'ಇದುವೇ ಅವರ ದುರದೃಷ್ಟ' ಎಂದು ಕೆಲವರು ಹೇಳುವುದುಂಟು. ಒಬ್ಬ 'ಕಾಮ್ರೇಡ್' ಶಿವಶಂಕರ ರಾಯರ ಬಗ್ಗೆ ಹೀಗೂ ಹೇಳಿದ್ದಾರಂತೆ, "ನೀವು ನಾಯಕನಾಗದೆ ಸ್ವಯಂಸೇವಕನಾಗಿ ಉಳಿಯಲು ಇದುವೇ ಕಾರಣ, ಹಾಗಾಗಿ ನೀವು ಎಂದೂ ನಾಯಕನಾಗಲಾರಿರಿ" ಇದು ಶಿವಶಂಕರರಾಯರ ಜೀವನಕ್ಕೆ ಸಂದ ಮನ್ನಣೆಯೋ, ಟೀಕೆಯೋ?

## ಕೃಷಿ ಅನುಭವ ಕೂಟ

ಕೃಷಿ ವಿಚಾರ ವಿನಿಮಯಕ್ಕೊಂದು ವೇದಿಕೆ

ಮಂಗಳೂರಿನಲ್ಲಿ ಅರುವತ್ತರ ದಶಕದಲ್ಲಿ ಜರುಗಿದ ಒಂದು ಸೆಮಿನಾರಿನಲ್ಲಿ ಚರ್ಚೆ ನಡೆಯುತ್ತಿತ್ತು. ನಾನು ಅಲ್ಲೇ ಕುಳಿತು ಚರ್ಚೆ ಕೇಳುತ್ತಿದ್ದೆ. ಕರ್ನಾಟಕದ ಕೃಷಿ ನಿರ್ದೇಶಕರಾಗಿದ್ದ ಡಾ.ಆರಕೇರಿಯವರು ಚರ್ಚೆಯನ್ನು ನಡೆಸುತ್ತಿದ್ದ ಕೃಷಿ ತಜ್ಞರನ್ನು ಇತ್ತ ಕರೆದು, "ನೀವು ನಿಮಗೆ ಗೊತ್ತಿಲ್ಲದ ವಿಷಯವನ್ನು 'ಗೊತ್ತಿಲ್ಲ' ಆಮೇಲೆ ಹೇಳುತ್ತೇನೆ ಅನ್ನಿ. ಗೊತ್ತಿಲ್ಲದೆ ಏನಾದರೂ ಹಾರಿಕೆಯ ಉತ್ತರ ಕೊಡಬೇಡಿ. ಇಲ್ಲಿಯ ರೈತರು ಚೆನ್ನಾಗಿ ತಿಳಿದಿದ್ದಾರೆ" ಎಂದು ಕಿವಿ ಮಾತು ಹೇಳಿದರು.

ಹೀಗೆ ರೈತರ ಬಗ್ಗೆ ಅವರು ಗೌರವ ತೋರಿಸಲು ಕಾರಣ, ಮಂಗಳೂರಿನಲ್ಲಿ ನಡೆಯುತ್ತಿದ್ದ ಅಂತಹ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ ರೈತರ ತಿಳುವಳಿಕೆಯ ಮಟ್ಟ ಹಾಗೂ ದಶಕಗಳ ಅನುಭವ.

ಇಲ್ಲಿನ ರೈತರಲ್ಲಿ ತಿಳುವಳಿಕೆಯ ಮಟ್ಟ ಏರಲು ಮುಖ್ಯ ಕಾರಣ, ಇಲ್ಲಿ ಆಗಲೇ ಸಕ್ರಿಯವಾಗಿದ್ದ ಕೃಷಿ ಅನುಭವ ಕೂಟ (Farm Experience Club) ಎಂಬ ಸಂಘಟನೆ.

ಸುಮಾರು 1965ರಲ್ಲಿ ಕಿನ್ಯದ ಇ.ವಿಠಲ ರಾವ್, ನಾನು ಮತ್ತು ಕೆಲವು ಪ್ರಗತಿಶೀಲ ರೈತರು ಒಟ್ಟುಸೇರಿ ಈ ಸಂಘಟನೆ ಸ್ಥಾಪಿಸಲು ತೀರ್ಮಾನಿಸಿದೆವು. ಕೃಷಿ ತಜ್ಞರು ಮತ್ತು ಅಧಿಕಾರಿಗಳು ಹೇಳಿದ್ದನ್ನು ಕೇಳುವಾಗ, ಏಕೆ? ಹೇಗೆ? ಅದರಿಂದ ಪ್ರಯೋಜನವೇನು? ಎಂಬ ಪ್ರಶ್ನೆ ನಮ್ಮಲ್ಲಿ ಮೂಡುತ್ತಿದ್ದುವು. ಈ ಬಗ್ಗೆ ಸಂವಾದಕ್ಕಾಗಿ ಈ ಕೂಟ ಸ್ಥಾಪಿಸಿದೆವು. ನಮ್ಮ ಸದಸ್ಯರು ಕೃಷಿ ಇಲಾಖೆ ಏರ್ಪಡಿಸುವ ಸಭೆ, ವಿಚಾರಗೋಷ್ಠಿ ಮತ್ತು ಸಮಾವೇಶಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ತಿಂಗಳಿಗೊಂದು ಸಭೆ, ಪ್ರತಿ ಸಭೆಯಲ್ಲಿ ಯಾವುದಾದರೂ ಒಂದು ವಿಚಾರದ ಬಗ್ಗೆ ಅನುಭವಿ ರೈತ ಅಥವಾ ತಜ್ಞರೊಬ್ಬರಿಂದ ವಿಶ್ಲೇಷಣೆ, ಅದರ ಮೇಲೆ ಚರ್ಚೆ-ಪ್ರಶ್ನೋತ್ತರ ನಡೆಸುವುದು ನಮ್ಮ ಉದ್ದೇಶ.

ಈ ಕೂಟದ ಸಭೆಗಳಿಗೆ ಜಿಲ್ಲೆಯ ಮೂಲೆಮೂಲೆಗಳಿಂದ ಅನುಭವಿ ಕೃಷಿಕರು ಬರುತ್ತಿದ್ದರು. ಗಂಗೊಳ್ಳಿಯಿಂದ ಭಾಸ್ಕರ ಕಾಮತ್, ಉಜಿರೆಯಿಂದ ಆರ್.ಎನ್.ಭಿಡೆ, ಹಳೆಯಂಗಡಿಯಿಂದ ಬೆರ್ನಾರ್ಡ್ ಮಿರಾಂಡ, ಬಂಟ್ವಾಳದಿಂದ ಎಸ್.ಡಿ.ಕೊಂಬ್ರಬೈಲು, ಸುಳ್ಯದಿಂದ ಬಲ್ಯ ಶಿವರಾಮ ಭಟ್ಟರು, ವಿಟ್ಲ ನೂಜಿಯಿಂದ ಜಿ.ಬಿ.ನೂಜಿ, ಪುತ್ತೂರಿನಿಂದ ಮಹೇಶ್ಚಂದ್ರ, ಕಿನ್ಯದ ವಿಠಲ ರಾವ್, ಮಣೇಲಿನ ಡಿ.ಎಸ್.ಮಣೇಲ್, ನೀರುಮಾರ್ಗದ ವೆಂಕಟ್ರಮಣ ಭಟ್, ಕಲ್ಲಡ್ಕದ ಪದ್ಮನಾಭಯ್ಯ, ನಾವೂರಿನ ವೆಂಕಟ್ರಮಣ ಐತಾಳ್, ಕೈಕಂಬದ ಹಿಲಾರಿಯನ್, ಮೂಡಬಿದ್ರೆಯ ಡಾ.ಎಲ್.ಸಿ.ಸೋನ್ಸ್, ಮಂಗಳೂರಿನ ಪಂಚಮಾಲ್ ಅಚ್ಯುತ ಪ್ರಭು ... ಇನ್ನೂ ಅನೇಕರಿದ್ದು ಸುಮಾರು

ನಲವತ್ತು ಮಂದಿ ಸದಸ್ಯರಿದ್ದರು. ಕೂಟದ ಚಟುವಟಿಕೆಯನ್ನು ನೋಡಿದ ಅನೇಕ ಕೃಷಿಕರು ಸದಸ್ಯರಾಗಲು ಸಿದ್ಧರಾಗಿದ್ದರು. ಇನ್ನೂ ಹೆಚ್ಚು ಜನ ಸೇರಿದರೆ ಜಾತ್ರೆಯಂತೆ ಆದೀತು, ಇಷ್ಟು ಸಾಕು ಎಂದು ಡಾ.ಸೋನ್ಸರು ಸೂಚಿಸಿದರು. ಅನಂತರ ಹೊಸ ಸದಸ್ಯರನ್ನು ಸೇರಿಸಿಕೊಳ್ಳಲಿಲ್ಲ. ಆದರ ಕೆಲವು ಸಭೆಗಳಲ್ಲಿ ಮಿಜಾರು ಆನಂದ ಆಳ್ವ, ಜೀವಂಧರ ಕುಮಾರ್, ಜಿ.ಎಸ್.ಆಚಾರ್, ಮತ್ತು ಪೆರಾಜೆ ಶ್ರೀನಿವಾಸ ರಾವ್ ಪಾಲ್ಗೊಳ್ಳುತಿದ್ದರು. ನಮ್ಮ ಸಭೆಗಳಲ್ಲಿ ಭಾಗವಹಿಸುತ್ತಿದ್ದ ಗ್ರಾಮಸೇವಕರಲ್ಲಿ ಅಡೂರು ತಿಮ್ಮಪ್ಪಯ್ಯ, ಕಮಲಾಕ್ಷ ಇವರು ಪ್ರಮುಖರು. ಬಂಟ್ವಾಳ ನಾರಾಯಣ ನಾಯಕರು ನಮಗೆ ಸಭೆ ಜರುಗಿಸಲು ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅತಿಥಿ ಗೃಹದ ವರಾಂಡದಲ್ಲಿ ವ್ಯವಸ್ಥೆ ಮಾಡಿಕೊಟ್ಟಿದ್ದರು.

ಮಂಗಳೂರಿನ ಮೋತಿಮಹಲ್‌ನಲ್ಲಿ ಕೂಟದ ಆಶ್ರಯದಲ್ಲಿ ಬಹು ದೊಡ್ಡ ಕೃಷಿ ಸೆಮಿನಾರ್ ನಡೆದಿತ್ತು. ಅದರಲ್ಲಿ ಜಿಲ್ಲೆಯ ಸುಮಾರು ಇನ್ನೂರು ಕೃಷಿಕರು ಭಾಗವಹಿಸಿದ್ದರು. ಮೋತಿಮಹಲಿನಲ್ಲಿ ರೈತರ ಸೆಮಿನಾರ್ ಹೇಗಿರುತ್ತದೆ? ಎಂಬ ಕುತೂಹಲದಿಂದಲೇ ಕೆಲವರು ಸೆಮಿನಾರಿಗೆ ಬಂದರೆಂಬುದು ಆಮೇಲೆ ತಿಳಿಯಿತು. ಈ ಸಭೆಯಲ್ಲಿ ಬೆಂಗಳೂರು ಕೃಷಿ ವಿ.ವಿ.ಯಿಂದ ತಜ್ಞರು, ಕಾಸರಗೋಡು ಸಿ.ಪಿ.ಸಿ.ಆರ್.ಐ.ಯ ತಜ್ಞರು ಭಾಗವಹಿಸಿದ್ದರು. ಮಧ್ಯಾಹ್ನದ ಊಟಕ್ಕೆ ಐದು ರೂಪಾಯಿಯ ಕೂಪನ್ ವ್ಯವಸ್ಥೆ ಮಾಡಲಾಗಿತ್ತು. ಸೆಮಿನಾರಿನ ಸಂದರ್ಭದಲ್ಲಿ ನೆಹರೂ ಮೈದಾನಿನಲ್ಲಿ ಹಾಲು ನೀಡುವ ದನಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಅತ್ಯುತ್ತಮ ದನಕ್ಕೆ ಬಹುಮಾನ ನೀಡಲಾಯಿತು.

ಪುರಭವನದಲ್ಲಿ ನಡೆದ ಸೆಮಿನಾರಿನ ಸಮಾರೋಪ ಸಮಾವೇಶದಲ್ಲಿ ಜಿಲ್ಲಾಧಿಕಾರಿ ಕೆ.ಎನ್. ನಾಗೇಗೌಡರು ಅಧ್ಯಕ್ಷ ಸ್ಥಾನ ವಹಿಸಿದ್ದರು. ಸೀಐಲ್ಯಾಂಡ್ ಹತ್ತಿ ಬೆಳೆಗಾರರ ಸಂಘದ ಅಧ್ಯಕ್ಷರೂ, ಉತ್ತಮ ಕೃಷಿಕರೂ ಆದ ಶ್ರೀ ಎಕ್ಕಾರ್ ಸುಬ್ಬಯ್ಯ ಹೆಗ್ಡೆ ಇವರಿಗೆ ಅತ್ಯುತ್ತಮ ಕೃಷಿಕರೆಂದು ಚಿನ್ನದ ಪದಕ ನೀಡಿ ಪ್ರಶಸ್ತಿ ಕೊಡಲಾಯಿತು. ಈ ಸಮಾವೇಶದಲ್ಲಿ ಬಹಳ ಉಪಯುಕ್ತ ಚರ್ಚೆ ನಡೆದಿತ್ತು. ಅದರಲ್ಲಿ ಕೃಷಿ ಅನುಭವ ಕೂಟದ ಸದಸ್ಯರು ಹಾಗೂ ಜಿಲ್ಲೆಯ ಅನೇಕ ರೈತರು ಭಾಗವಹಿಸಿದ್ದರು.

***ನಮ್ಮ ಕೂಟದ ಮಾಸಿಕ ಸಭೆಯಲ್ಲಿ ಚರ್ಚಿತವಾದ ಕೆಲವು ವಿಚಾರಗಳು***

• ಭತ್ತದ ಹೊಸ ತಳಿಗಳು • ಕರಾವಳಿ ಕೃಷಿಯಲ್ಲಿ ಬಳಸಬಹುದಾದ ಪೀಡೆನಾಶಕಗಳು • ಭತ್ತದ ಬೆಳೆಯ ಹಿಟ್ಟು ತಿಗಣೆಯ ಹತೋಟಿ • ಕೃಷಿಕರ ಹೊಲಗಳಲ್ಲಿ ಬೆಳೆಸಬಹುದಾದ ವೃಕ್ಷಗಳು • ತೆಂಗಿನ ಮರ ಹತ್ತುವ ಉಪಕರಣದ ಪ್ರದರ್ಶನ • ತೆಂಗಿನ ಕಪ್ಪು ತಲೆ ಕಂಬಳಿ ಹುಳದ ಹತೋಟಿ • ಐಆರ್-8 ಮತ್ತು ಅನ್ನಪೂರ್ಣ ಭತ್ತದ ಕೃಷಿ • ಕೊಯಂಬತ್ತೂರಿನ ಕೃಷಿ ವಿಶ್ವವಿದ್ಯಾಲಯದ ಕುಚ್ಚಲಕ್ಕಿಗಾಗಿ ಭತ್ತ ಬೇಯಿಸುವ ಡ್ರಂ ಪ್ರದರ್ಶನ • ತೋಟದ ಕಳೆಗಳ ರಾಸಾಯನಿಕ ಹತೋಟಿ • ರಾಸಾಯನಿಕ ಗೊಬ್ಬರಗಳ ಮತ್ತು ಕೀಟನಾಶಕಗಳ ಬಗ್ಗೆ ಚರ್ಚೆ.

ನಮ್ಮ ಕೂಟ ಐ.ಆರ್.8 ಭತ್ತದ ತಳಿ ಬಿಡುಗಡೆಯಾದ ಸಂದರ್ಭದಲ್ಲಿ ಅದರ ಕೃಷಿ ಬಗ್ಗೆ ಒಂದು ಸೆಮಿನಾರ್ ಜರುಗಿಸಿತ್ತು. ರೋಟರಿ ಕ್ಲಬ್ ಅಧ್ಯಕ್ಷರಾಗಿದ್ದ ಶ್ರೀ ರಾಜಾರಾಂ ಮಲ್ಯರ ಅಧ್ಯಕ್ಷತೆ. ಅಲ್ಲಿ ಅನುಭವಿ ರೈತರ ಮತ್ತು ಕೃಷಿ ಅಧಿಕಾರಿಗಳ ಸಂವಾದ. ಸುಮಾರು ನೂರು ಜನರು ಭಾಗವಹಿಸಿದ್ದರು.

ಭತ್ತದ ಹಿಟ್ಟು ತಿಗಣೆಯ ಬಗ್ಗೆ ನಮ್ಮ ಕೂಗನ್ನು ವಿಧಾನಸೌಧದಲ್ಲಿ ಪ್ರತಿಧ್ವನಿಸುವ ಹಾಗೆ ಮಾಡಿ ಸರಕಾರವು ಕಾರ್ಯವೆಸಗುವಂತೆ ಮಾಡಿದ್ದು ಕೃಷಿ ಅನುಭವ ಕೂಟದ ಒಂದು ಸಾಹಸ.

ತೆಂಗಿನ ಬೆಳೆಗೆ ಹಾನಿ ಮಾಡುತ್ತಿದ್ದ ಕಪ್ಪು ತಲೆ ಕಂಬಳಿ ಹುಳದ ಹತೋಟಿ ಬಗ್ಗೆ ನಮ್ಮ ಕೂಟ ಒಂದು ಸಭೆ ಏರ್ಪಡಿಸಿತು. ಸಿ.ಪಿ.ಸಿ.ಆರ್.ಐ. ತಜ್ಞ ಶ್ರೀ ಎಂ.ಕೆ.ಮುಳಿಯಾರರು 'ಜೈವಿಕ ನಿಯಂತ್ರಣವೇ ಅತ್ಯುತ್ತಮ ವಿಧಾನ' ಎಂದು ಅಲ್ಲಿ ತಮ್ಮ ಅಭಿಪ್ರಾಯ ಮಂಡಿಸಿದರು. ಈ ಹಿನ್ನಲೆಯಲ್ಲಿ ತೆಂಗಿನ ಮರಗಳ ಕಾಂಡಕ್ಕೆ ಮೋನೊಕ್ರೊಟೋಫಾಸ್ ಇಂಜೆಕ್ಷನ್ ಕೊಡಬೇಕೆಂಬ ತೋಟಗಾರಿಕೆ ಇಲಾಖೆಯ ಶಿಫಾರಸನ್ನು ಕೆಲವು ಕೃಷಿಕರು ಪ್ರಶ್ನಿಸಿದರು. ಮಾಧ್ಯಮಗಳಲ್ಲಿ ವರದಿಗಳು, ಬರಹಗಳು ಪ್ರಕಟವಾದುವು. ಪ್ರಬಲ ಜನಾಭಿಪ್ರಾಯ ರೂಪಣೆಯಾಯಿತು. ಇದರ ಪರಿಣಾಮವಾಗಿ ಸರಕಾರವು ಮಂಗಳೂರಿನಲ್ಲಿ ಜಿಲ್ಲಾ ತೋಟಗಾರಿಕಾ ಅಧಿಕಾರಿಗಳು, ವಿ.ವಿ.ಯ ಕೃಷಿ ತಜ್ಞರು ಮತ್ತು ಕಾಸರಗೋಡಿನ ಕೃಷಿ ತಜ್ಞರ ಸಭೆಯನ್ನು ಕರೆದು ಚರ್ಚೆ ಏರ್ಪಡಿಸಿತ್ತು. ಅಲ್ಲಿ ಸಿ.ಪಿ.ಸಿ.ಆರ್.ಐ. ತಜ್ಞರು ಸೂಚಿಸಿದ ಪರೋಪಜೀವಿ ಕೀಟಗಳನ್ನು ಬೆಳೆಸಿ ಅವನ್ನು ತೆಂಗಿನತೋಟಗಳಲ್ಲಿ ಬಿಡುಗಡೆ ಮಾಡಿ ಕಪ್ಪು ತಲೆ ಕಂಬಳಿಹುಳ ನಿಯಂತ್ರಿಸಬಹುದೆಂಬ ತೀರ್ಮಾನಕ್ಕೆ ಬರಲಾಯಿತು. ಇದರ ಫಲವಾಗಿ ಸರಕಾರ ಹಾಗೂ ತೋಟಗಾರಿಕಾ ಇಲಾಖೆ ತನ್ನ ಶಿಫಾರಸನ್ನು ಹಿಂತೆಗೆದದ್ದು ನಮ್ಮ ಕೂಟದ ಅತಿ ದೊಡ್ಡ ಸಾಧನೆ.

ಪ್ರಾರಂಭದಲ್ಲಿ ನಾನು ಮತ್ತು ನನ್ನ ನಂತರ ಅಡ್ಡೂರು ಕೃಷ್ಣ ರಾವ್(ಕೃಷಿ ಪದವೀಧರನಾದ ಬಳಿಕ) ಇದರ ಕಾರ್ಯದರ್ಶಿಯಾಗಿ ಕೆಲಸ ಮಾಡಿದೆವು. ಕೃಷ್ಣ ರಾವ್ ಚೆನ್ನಾಗಿ ಕೆಲಸ ಮಾಡಿದರೂ ಅವನಿಗೆ ಕಾಪುವಿಗೆ ವರ್ಗವಾದ ನಂತರ ಕೃಷಿ ಅನುಭವ ಕೂಟದ ಕೆಲಸ ಸ್ಥಗಿತವಾಗಿತ್ತು. ನಾವು ಪುನಃ ಹೇಗೆ ಸಂಘಟಿಸುವುದು ಎಂದು ಯೋಚಿಸುವಾಗಲೇ ಪುತ್ತೂರಿನಲ್ಲಿ *'ಅಡಿಕೆ ಪತ್ರಿಕೆ'* ಹುಟ್ಟಿಕೊಂಡು ಅಮೋಘವಾದ ಸೇವೆ ಮಾಡಲಾರಂಭಿಸಿತು. ಹಾಗಾಗಿ ನಮ್ಮ ಕೃಷಿ ಅನುಭವ ಕೂಟವನ್ನು ಪುನರುಜ್ಜೀವನಗೊಳಿಸಲಿಲ್ಲ. ಅನಂತರದ ಅವಧಿಯಲ್ಲಿ ಕೃಷಿ ಅನುಭವ ಕೂಟದ ಮಾಹಿತಿ ಕೇಂದ್ರವು ಆಗಾಗ ಪತ್ರಿಕೆಗೆ ಹೇಳಿಕೆ ನೀಡುತ್ತಿತ್ತು. ಮಾಹಿತಿ ಕೇಂದ್ರದ ಕೆಲಸಗಳನ್ನು ನನ್ನ ಕ್ಷೇತ್ರದಿಂದಲೂ, ಇ. ವಿಠಲ ರಾಯರ ಕ್ಷೇತ್ರದಿಂದಲೂ ಮುಂದುವರಿಸಿದೆವು. ಮಾಹಿತಿ ಕೇಂದ್ರದಿಂದ 'ಮಾಹಿತಿ ಪತ್ರ' ದ ಹಲವು ಸಂಚಿಕೆಗಳನ್ನು ಪ್ರಕಟಿಸಿದೆವು.

ನಮ್ಮ ಕೂಟದ ಚಟುವಟಿಕೆಗಳ ಬಗ್ಗೆ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಓ.)ಗೆ ನಾನು ಬರೆದ ಪತ್ರವೊಂದು ಅವರ ನಿಯತಕಾಲಿಕ CERESನಲ್ಲಿ 1991ರಲ್ಲಿ ಪ್ರಕಟವಾಯಿತು. ಅದರ ಸಂಪಾದಕರು ನಮ್ಮ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಈ ಕೂಟದಲ್ಲಿ ಪ್ರಾರಂಭದಿಂದಲೂ ಕೊಂಬ್ರಬೈಲು ಸುಬ್ಬರಾವ್, ಇ. ವಿಠಲ ರಾವ್ ಮತ್ತು ಎ. ತಿಮ್ಮಪ್ಪಯ್ಯ ಮುಖ್ಯ ಪ್ರೇರಕ ಶಕ್ತಿಯಾಗಿದ್ದರು. ಮಾಸಿಕ ಸಭೆಗಳು ಕ್ರಮವಾಗಿ ಜರಗುತ್ತಿದ್ದವು. ಪಂಚಮಾಲ್ ಅಚ್ಯುತ ಪ್ರಭುಗಳು ಕೂಟವನ್ನು ಸೇರಿದ ನಂತರ ಸೆಮಿನಾರ್ ಮುಂತಾದುವುಗಳು ಏರ್ಪಟ್ಟವು.

ದೆಹಲಿಯಲ್ಲಿ ಜರಗಿದ ಜಾಗತಿಕ ಕೃಷಿ ಮೇಳದ ಸಂದರ್ಭದಲ್ಲಿ ನಾವು ಈ ಕೂಟವನ್ನು ಹುಟ್ಟು ಹಾಕುವ ಯೋಚನೆ ಮಾಡಿದ್ದೆವು. ನಮ್ಮ ಜಿಲ್ಲೆಯಿಂದಲೇ 96 ಕೃಷಿಕರು ಅದಕ್ಕಾಗಿ ರೈಲಿಯಲ್ಲಿ ಪ್ರವಾಸ ಕೈಕೊಂಡಾಗ ನಾನು ಮತ್ತು ವಿಠಲ ರಾಯರು ಭೋಪಾಲದಲ್ಲಿ ರೈಲ್ವೇ ಪ್ಲಾಟ್‌ಫಾರ್ಮನಲ್ಲಿ ಈ ಬಗ್ಗೆ ಚರ್ಚಿಸಲು ಸಭೆ ಸೇರಬೇಕೆಂದು ಸಹ ಪ್ರಯಾಣಿಕರನ್ನು ಕೇಳಿಕೊಂಡೆವು. ಆದರೆ ಅಲ್ಲಿ ರೈಲು ನಿಂತಾಗ ಎಲ್ಲರೂ ಭೋಪಾಲ ಪಟ್ಟಣ ನೋಡಲು ಹೋದರು. ಕೊನೆಗೆ ನಾವಿಬ್ಬರೇ ಪ್ಲಾಟ್ ಫಾರಂನಲ್ಲಿ ಕಾದು ಕುಳಿತೆವು!

ಕೃಷಿಕರ ಇಂತಹ ಸಂಘಟನೆಯ ಅಗತ್ಯ ಇಂದು ಹಿಂದಿಗಿಂತ ಹೆಚ್ಚಾಗಿದೆ. ಕೀಟನಾಶಕಗಳಿಂದ ಆಗುವ ಪ್ರಯೋಜನ(?)ದೊಂದಿಗೆ ಆಗಿರುವ ಹಾಗೂ ಆಗಲಿರುವ ಹಾನಿಯ ಬಗ್ಗೆ ಯೋಚಿಸಬೇಕಾಗಿದೆ. ಸಾವಯವ ಕೃಷಿ ಬಗ್ಗೆ ಅನುಭವದ ವಿನಿಮಯ ಆಗಬೇಕಾಗಿದೆ. ಅದರಿಂದ ಭವಿಷ್ಯದಲ್ಲಿ ದೇಶದ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವೇ ಎಂದು ಯೋಚಿಸಬೇಕಾಗಿದೆ.

ಕೃಷಿ ಉತ್ಪನ್ನಗಳ ಬೆಲೆ ಕುಸಿತ ಮತ್ತು ಬೆಳೆಬೆಳೆಸುವ ವೆಚ್ಚದ ಹೆಚ್ಚಳ - ಇವುಗಳಿಂದ ರೈತನು ತತ್ತರಿಸುತ್ತಿರುವಾಗ ಮುಂದೇನು ಎಂದು ಗಂಭೀರವಾಗಿ ಆಲೋಚಿಸಬೇಕಾಗಿದೆ. ಹಲವು ಬೆಳೆಗಳನ್ನು ಕಾಡುತ್ತಿರುವ ರೋಗ ಮತ್ತು ಕೀಟಗಳನ್ನು ನಿಯಂತ್ರಿಸುವ ದಾರಿ ಯಾವುದೆಂದು ಯೋಚಿಸಬೇಕಾಗಿದೆ. ಅಡಿಕೆ ಪತ್ರಿಕೆಯಂತಹ ಪತ್ರಿಕೆಗಳು ಮತ್ತು ದಿನಪತ್ರಿಕೆಗಳಲ್ಲಿ ಕೃಷಿ ಬಗ್ಗೆ ಬಹಳಷ್ಟು ಲೇಖನಗಳು ಪ್ರಕಟವಾಗುತ್ತಿವೆ. ಆದರೆ ಕೃಷಿ ಮತ್ತು ಗ್ರಾಮೀಣ ಸಮಸ್ಯೆಗಳ ಬಗ್ಗೆ ಸಂವಾದ ನಡೆಸಲು ಕೃಷಿ ಅನುಭವ ಕೂಟದಂತಹ ಸಂಘಟನೆ ಅತೀ ಅವಶ್ಯ. ಅನುಭವಿ ಕೃಷಿಕರು ಮತ್ತು ಯುವ ಕೃಷಿಕರೊಳಗೆ ವಿಚಾರ ವಿನಿಮಯಕ್ಕೆ ವೇದಿಕೆಯಾಗಬಲ್ಲ ಇಂತಹ ಸಂಘಟನೆ ಪುನಃ ನೆಲೆಗೊಳ್ಳಲೆಂದು ಹಾರೈಸುವೆ.

**Extension material** I am a middle income farmer by local standards – low income by international standards – and find *Ceres* excellent material for my personal extension work, which includes publishing the bi-monthly *Farm Expeience Club Newslettter* and arranging meetings of progressive farmers. It also helps me in participating in environmental meetings and meetings of Farmers' Forum, the Farm Information Exchange Clubs, and in talks to farmers organized by the Rural Development and Self-Employment Institute. I also run a circulating library of books and magazines on agriculture and environment, and *Ceres* is part of it.

The subscription rate of US$24 will amount to Rs.600, which is twice the amount I spend to subscribe to more than a dozen Indian farm journals. Is it possible for some one like myself to obtain a waiver of the subscription costs to *Ceres* ?

– A.Shivashankar Rao, Krishna Farm, Karntaka, India.

(*Editor'sNote: Your name has been added to those for whom the usual subscription fee is borne by FAO. Along with the subscription, please accept our thanks and admiration for your good work in sharing information with your fellow farmers in Karnataka State.)*

This Letter to Editor was published in "The FAO Review – *Ceres* ,

(Vol. 23, No.4) July – August 1991

# ಮುಖಂಡತ್ವಕ್ಕೆ, ಅದರ ಪ್ರತಿಷ್ಠೆಗೆ ಹಂಬಲಿಸಿದವರಲ್ಲ :
# ಎಂ. ನಾರಾಯಣ ಮೂರ್ತಿ, ಎನ್.ಎನ್. ಸಂಸ್ಕೃತಿ

ಕಾಮ್ರೆಡ್ ಅಡ್ಡೂರು ಶಿವಶಂಕರ ರಾಯರು ನನ್ನ ಆಪ್ತ ಮಿತ್ರ. ರಾಜಕೀಯವಾಗಿ ಜೊತೆಗೂಡಿ ನಡೆದ ಸಂಗಾತಿ.

ಇಂದೀಗ ನಾವಿಬ್ಬರೂ ವೃದ್ಧರಾಗಿದ್ದೇವೆ. ನಮ್ಮ ನಿರೀಕ್ಷೆಗಳಿಗೆ, ಆಕಾಂಕ್ಷೆಗಳಿಗೆ ಅನುಸಾರವಾಗಿ ಮೊದಲಿನಂತೆ ರಾಜಕೀಯದಲ್ಲಿ ಶ್ರಮಿಸಲು ನಮ್ಮ ದೇಹಗಳು ಅಸಮರ್ಥವಾಗಿವೆ. ಆದರೆ ಎಲ್ಲದಕ್ಕೂ ಒಂದು ಮಿತಿ ಇದೆ, ಕಾಲಾವಧಿ ಇದೆ ಎಂಬ ಸತ್ಯದ ಗ್ರಹಿಕೆಗಳಿಂದ ನಮ್ಮನ್ನು ನಾವೇ ಸಂತೈಸಿಕೊಳ್ಳುತ್ತಿದ್ದೇವೆ.

1941ರಲ್ಲಿ ನನ್ನ ಹುಟ್ಟೂರಾದ ಕೊಡಗಿನಿಂದ  ಕಾಲೇಜು ವಿದ್ಯಾಭ್ಯಾಸಕ್ಕಾಗಿ ನಾನು ಮಂಗಳೂರಿಗೆ ಬಂದೆ. ಅಂದೇ ನನ್ನಲ್ಲಿ ರಾಜಕೀಯವಾಗಿ  ಅಲ್ಪ ಚಿಂತನೆ ಇತ್ತು. 1971ರಲ್ಲಿ ರಷ್ಯಾದಲ್ಲಿ ನಡೆದ ಕ್ರಾಂತಿ, ಅನಂತರ ಅಲ್ಲಿ ರಾಜಕೀಯ ಹಾಗೂ ಸಾಮಾಜಿಕವಾಗಿ ಆದ ಬದಲಾವಣೆಗಳು ನನ್ನಲ್ಲಿ ಒಂದು ರೀತಿಯ ಉದ್ವೇಗವನ್ನು ಉಂಟುಮಾಡಿತು. ಸೋಶಿಯಲ್ ಯೂನಿಯನ್‌ನ ಸಮಾಜದಲ್ಲಿ ಜನರು ತೃಪ್ತಿಯಿಂದ ಜೀವಿಸುವುದಾದರೆ, ನಮ್ಮ ದೇಶದಲ್ಲಿಯೂ ಅಂತಹ ಸಮಾಜ ಕ್ರಮದ ಅಸ್ತಿತ್ವಕ್ಕಾಗಿ ನಾವು ಏಕೆ ಹೋರಾಟ ಮಾಡಬಾರದು ಎಂಬ ಭಾವನೆಯು ಮನಸ್ಸನ್ನು ಚಂಚಲಿಸುತ್ತಿತ್ತು. ಆದರೆ ಮಾರ್ಕಿಸ್ಟ್ ತತ್ವದ ಆಧಾರದಲ್ಲಿ ಈ ಕ್ರಾಂತಿ ನಡೆಯಿತು ಮತ್ತು ಆ ತತ್ವವನ್ನು ಕೃತಿಗಿಳಿಸಿದ ಕಾರಣ ಸೋವಿಯತ್ ಯೂನಿಯನ್‌ನ ಜನತೆಗೆ ಪರಿಹಾರ ದೊರೆಯಿತು ಎಂಬ ತಾತ್ವಿಕ ವಿಚಾರಗಳ ಕುರಿತು ನನಗೆ ತಿಳಿದಿರಲಿಲ್ಲ.

ಆಗ ಮಂಗಳೂರಿನಲ್ಲಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್‌ನಿನ ಚಟುವಟಿಕೆಗಳು ಬಿರುಸಾಗಿ ನಡೆಯುತ್ತಿದ್ದವು. ಆ ಕಾರ್ಯಗಳಲ್ಲಿ ಕಾಮ್ರೆಡ್ ಬಿ.ವಿ.ಕಕ್ಕಿಲ್ಲಾಯ, ಕಾಮ್ರೆಡ್ ಹರಿದಾಸ್ ಆಚಾರ್, ಕಾಮ್ರೆಡ್ ಶಿವಶಂಕರ ರಾವ್  ಮೊದಲಾದವರು ಮುಖ್ಯ ಕಾರ್ಯಕರ್ತರಾಗಿದ್ದರು. ನನ್ನ ಭಾವ ಎಸ್.ಎಸ್.ಗಣೇಶ ಎಂಬವರೂ ಆ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಓರ್ವ ವಿದ್ಯಾರ್ಥಿಯಾಗಿದ್ದರು. ನನ್ನ ಮನಸ್ಸಿನಲ್ಲಿದ್ದ ಭಾವನೆಗಳು ನನ್ನನ್ನು ಆ ಮಹಾನುಭಾವರೊಡನೆ ಒಡನಾಟಕ್ಕೆ ಪ್ರೇರೇಪಿಸಿದುವು.

ನಮ್ಮ ರಾಷ್ಟ್ರದಲ್ಲೂ ಒಂದು ಸಮಾಜವಾದದ ಸಮಾಜವನ್ನು ಸ್ಥಾಪಿಸಲು ಅನುವಾಗುವುದೇ ಈ ವಿದ್ಯಾರ್ಥಿ ಫೆಡರೇಶನ್‌ನ ಮುಖ್ಯ ಉದ್ದೇಶವೆಂಬುದನ್ನು ನಾನು ಮನನ ಮಾಡಿಕೊಂಡೆ.  ಇದಕ್ಕಾಗಿ ಮಾರ್ಕಿಸ್ಟ್ ತತ್ವವನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳುವುದು ಅಗತ್ಯವೆನಿಸಿತ್ತು. ಈ ತಿಳುವಳಿಕೆ ನನ್ನಲ್ಲಿ ಉಂಟುಮಾಡಿದವರು ಶಿವಶಂಕರರಾಯರು.  ಅವರು ಮೊದಲಿಗೆ ಮೇಕ್ಸಿಂ ಗೋರ್ಕಿಯ "ಮದರ್" ಎಂಬ ಪುಸ್ತಕವನ್ನು ಓದಲುಕೊಟ್ಟರು. ನಂತರ ಅಪ್‌ಟಾನ್‌ಸಿಂಕ್ಲೇಯರ್ ಬರೆದ "ಆಯಿಲ್" ಎಂಬ ಇನ್ನೊಂದು ಪುಸ್ತಕವನ್ನು ಕೊಟ್ಟರು. ಬಂಡವಾಳಶಾಹಿ ಸಮಾಜದಲ್ಲಿ ಸಮಾಜದ ಬಹುತೇಕ ಮಂದಿಯ ಶೋಷಣೆಗಳು ಹೇಗೆ ನಡೆಯುತ್ತವೆ ಎಂಬುದು ಈ ಎರಡು ಪುಸ್ತಕಗಳ ಓದುವಿಕೆಯಿಂದ ನನಗೆ ಸ್ಪಷ್ಟವಾಯಿತು. ಅನಂತರ ಕಮ್ಯೂನಿಸ್ಟ್ ಪಕ್ಷದ ಪ್ರಣಾಳಿಕೆ "ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ" ಎಂಬ ಪುಸ್ತಕವನ್ನು ಓದಲು ಹೇಳಿದರು. ಇದರಿಂದ ಕಮ್ಯೂನಿಸ್ಟ್ ಪಕ್ಷದ ತತ್ವ, ಗೊತ್ತುಗುರಿ, ಉದ್ದೇಶಗಳನ್ನು ನಾನು ತಿಳಿದುಕೊಂಡೆ. ನಂತರ ನಾನು ಭೌತಿಕ ದ್ವಂದ್ವಮಾನ, ಚಾರಿತ್ರಿಕ ದ್ವಂದ್ವಮಾನ ಇವೇ ಮುಂತಾದ ಪುಸ್ತಕಗಳನ್ನು ಓದಿದೆ. ಇವೆಲ್ಲದಕ್ಕೂ ದೀಪವನ್ನು ಹಿಡಿದು ದಾರಿ ತೋರಿಸಿದವರು ಶಿವಶಂಕರ ರಾಯರು. ಅವರಲ್ಲಿ ಸಾಕಷ್ಟು ತಿಳುವಳಿಕೆ ಇತ್ತು. ಮಾತ್ರವಲ್ಲ ಆ ಕುರಿತ ಪುಸ್ತಕಗಳು ಅವರಲ್ಲಿ ಸಾಕಷ್ಟಿತ್ತು.

ಆಗ ಕಮ್ಯೂನಿಸ್ಟ್ ಪಕ್ಷದ ವಿರುದ್ಧ ಪ್ರತಿಬಂಧಕಾಜ್ಞೆ ಇದ್ದ ಕಾರಣ ಪಕ್ಷದ ಕುರಿತು ಬಹಿರಂಗವಾಗಿ ಚರ್ಚಿಸುವುದು, ಪಕ್ಷಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಇಟ್ಟುಕೊಳ್ಳುವುದು ಅಥವಾ ಬಹಿರಂಗವಾಗಿ ಓದುವುದು ಸಾಧ್ಯವಿರಲಿಲ್ಲ. ಈ ಆಜ್ಞೆಯನ್ನು ಅಂದಿನ ಬ್ರಿಟಿಷ್ ಸರಕಾರವು 1942ರಲ್ಲಿ ರದ್ದು ಮಾಡಿತು. ಅನಂತರ ಪಕ್ಷವು ಬಹಿರಂಗವಾಗಿ ಚಟುವಟಿಕೆಗಳನ್ನು ಪ್ರರಂಭಮಾಡಿ, ಮುಂಬೈಯಿಂದ "ಪೀಪಲ್ಸ್ ವಾರ್" ಎಂಬ ವಾರಪತ್ರಿಕೆಯನ್ನು ಪ್ರಕಟಿಸಲು ಆರಂಭಿಸಿತು. ಈ ಪತ್ರಿಕೆಯನ್ನು ವಿವಿಧ ವಕೀಲರು, ಡಾಕ್ಟರುಗಳು, ಇಂಗ್ಲೀಷ್ ವಿದ್ಯಾಭ್ಯಾಸವಿದ್ದವರ ಕಚೇರಿ, ಕ್ಲಿನಿಕ್ ಅಥವಾ ಮನೆಗಳಿಗೆ ಹೋಗಿ ಮಾರಾಟ ಮಾಡುವ ಮೂಲಕ ಪಕ್ಷದ ಕೆಲಸವು ಚುರುಕಾಯಿತು. ನನ್ನೊಡನೆ ಈ ಕೆಲಸದಲ್ಲಿ ಸಹಕರಿಸಿದವರಲ್ಲಿ ಸಂಪತ್ತಿಲ ಕೃಷ್ಣ ಭಟ್ಟರೆಂಬವರು ಪ್ರಮುಖರಾದವರು. ಅವರು ಕೂಡಾ ಶಿವಶಂಕರ ರಾಯರಂತೆ ಶ್ರೀಮಂತ ಕುಟುಂಬದಿಂದ ಬಂದವರು. ನಮ್ಮ ಈ ಕೂಟಕ್ಕೆ ಶಿವಶಂಕರರಾಯರು ಮುಂದಾಳು. ನಮ್ಮ ಉತ್ಸಾಹ, ಸಾಹಸವನ್ನು ನೋಡಿದ ಅನೇಕರು ಪತ್ರಿಕೆಗಳನ್ನು ಕೊಂಡುಕೊಳ್ಳುತ್ತಿದ್ದರು. ಓದುತ್ತಿದ್ದರೋ, ಇಲ್ಲವೋ ಎಂಬುದು ಬೇರೆ ಸಂಗತಿ.

1949ರಲ್ಲಿ ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ವತಿಯಿಂದ "ಜನಶಕ್ತಿ" ಎಂಬ ಪತ್ರಿಕೆಯ ಪ್ರಕಟಣೆ ಆರಂಭವಾಯಿತು. ಆದರೆ ಕೆಲವೇ ತಿಂಗಳುಗಳಲ್ಲಿ ಅಂದಿನ ಮುಂಬೈ ಸರಕಾರವು ಅದನ್ನು ನಿಷೇಧಿಸಿತು. ಕಾ.ಸದಾಶಿವ ಅದರ ಸಂಚಾಲಕರು (ಇವರೂ ಮಂಗಳೂರಿನವರು. ಅವರ ಅಕ್ಕ ಸುಂದರಿ ಎಂಬವರು ಕಾಲೇಜಿನಲ್ಲಿ ಉಪಾನ್ಯಾಸಕರಾಗಿ ನಿವೃತ್ತಿ ಹೊಂದಿ, ಈಗ ಮಂಗಳೂರಿನಲ್ಲಿ ವಾಸವಾಗಿದ್ದಾರೆ.) ನಂತರ ಪಕ್ಷದ ವತಿಯಿಂದ ಬೇರೆ ಹೆಸರಿನಲ್ಲಿ ಪತ್ರಿಕೆಯನ್ನು ಹೊರಡಿಸುವ ವ್ಯವಸ್ಥೆ ಮಾಡಲು ನಾನು ಹುಬ್ಬಳ್ಳಿಗೆ ಹೋಗಬೇಕಾಯಿತು. ಅಂದಿನ ಮುಖಂಡರು ಭೂಗತರಾಗಿ ಅಡಗಿಕೊಂಡಿರಬೇಕಾಗಿತ್ತು. ಅವರ ಅಡಗುದಾಣಕ್ಕೆ "ಡೆನ್" ಎಂದು ಕರೆಯಲಾಗುತ್ತಿತ್ತು.

ನಾನು ಹುಬ್ಬಳ್ಳಿಗೆ ತಲುಪಿದ ಮರುದಿನವೇ ಆ ಮುಖಂಡರನ್ನು ಭೇಟಿಯಾಗಲು ಆ "ಡೆನ್"ಗೆ ಹೋಗಬೇಕಾಗಿತ್ತು. ಅವರನ್ನು ಭೇಟಿ ಮಾಡಲು ರಾತ್ರಿ ಮಾತ್ರ ಸಾಧ್ಯ. ಹಗಲು ಹೋಗುವುದೆಂದರೆ ಪೋಲೀಸರಿಗೆ ಸುಳಿವು ಕೊಟ್ಟಂತೆ. ಹಾಗೆ ರಾತ್ರಿ ಈ "ಡೆನ್"ಗೆ ನನ್ನನ್ನು ಓರ್ವ ಸಂಗಾತಿ ಕರೆದುಕೊಂಡು ಹೋದರು. "ಡೆನ್"ನ ಹತ್ತಿರದಲ್ಲಿ ನಿಂತಿದ್ದ ಓರ್ವ ಜುಟ್ಟು ಇದ್ದ ವೈದಿಕ ಬ್ರಾಹ್ಮಣ ವ್ಯಕ್ತಿ ನಮ್ಮನ್ನು ಭೇಟಿಯಾದರು. "ಡೆನ್"ನೊಳಗೆ ಸುತ್ತಿ ಹೋಗುವ ದಾರಿಯ ಮೂಲಕ ಈ ವ್ಯಕ್ತಿ ನಮ್ಮನ್ನು ಕರೆದೊಯ್ದರು. ಒಳ ಹೋದ ನಂತರವೇ ಈ ವ್ಯಕ್ತಿ ಶಿವಶಂಕರರಾಯರು ಎಂದು ನನಗೆ ತಿಳಿಯಿತು.

ಪತ್ರಿಕೆಯನ್ನು ಮುಂದುವರಿಸಲು ಸರಕಾರವು ಅವಕಾಶ ನೀಡದಿದ್ದ ಕಾರಣ ನಾನು ಮಂಗಳೂರಿಗೆ ಹಿಂತಿರುಗಿ ಬಂದೆ. ಆಮೇಲೆ ಕೆಲವು ವರುಷಗಳ ತನಕ ನನಗೂ ಶಿವಶಂಕರರಾಯರಿಗೂ ಪರಸ್ಪರ ಭೇಟಿಯಾಗುವ ಅವಕಾಶ ದೊರೆಯಲಿಲ್ಲ. ಅವರು ಹುಬ್ಬಳ್ಳಿಯಿಂದ ದಾವಣಗೆರೆ, ಭದ್ರಾವತಿ ಇವೇ ಮೊದಲಾದ ಸ್ಥಳಗಳಿಗೆ ಪಕ್ಷದ ಕೆಲಸದಲ್ಲಿ ತನ್ನ ಬಾಳ್ವೆಯನ್ನು ಸವೆಸಿದರು. ಆ ಅವಧಿಯಲ್ಲಿ ಅವರು ಪಟ್ಟ ಕಷ್ಟ ಸಂಕಷ್ಟಗಳನ್ನು ನಾನು ಗುರುತಿಸಿ ಬರೆಯುವ ಆವಶ್ಯಕತೆಯಿಲ್ಲ. ಅವರ ಜೀವನ ಚರಿತ್ರೆಯಿಂದ ಇವುಗಳೆಲ್ಲವನ್ನು ಗುರುತಿಸಬಹುದಾಗಿದೆ.

ನಂತರ ಅವರು ಮಂಗಳೂರಿಗೆ ಬಂದರು. ಇಷ್ಟರಲ್ಲಿ ಅವರು ಕೈಗೊಂಡ ಮಹತ್ವವಾದ ಕೆಲಸವೆಂದರೆ ಅವರ ಅಣ್ಣ ಡಾ.ಸುಬ್ಬರಾವ್ ಅವರನ್ನು ಕಮ್ಯೂನಿಸ್ಟ್ ಪಕ್ಷದೊಳಕ್ಕೆ ಸೆಳೆದದ್ದು. ಡಾ.ಸುಬ್ಬರಾವ್ ಅವರು ರಾಜ್ಯಸಭೆಯ ಸದಸ್ಯರಾಗಿದ್ದರು. ಅನಂತರ ಕೇರಳ ಸರಕಾರದಲ್ಲಿ ಮಂತ್ರಿಯಾದರು. ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದ ಡಾ.ಸುಬ್ಬರಾವ್ ಅವರು ಓರ್ವ ಆದರ್ಶ ಕಮ್ಯೂನಿಸ್ಟ್. ಕಮ್ಯೂನಿಸ್ಟ್ ತತ್ವವನ್ನು ತಮ್ಮ ನಿತ್ಯ ಜೀವನದಲ್ಲಿಯೂ ಸಾಧಿಸಿದವರು. ಶ್ರೀಮಂತರಲ್ಲಿ ಸ್ವಾಭಾವಿಕವಾಗಿ ಇರುವ ಯಾವ ಅವಗುಣವೂ ಅವರಲ್ಲಿ ಕಂಡುಬರುತ್ತಿರಲಿಲ್ಲ. ಅವರಿಗೆ ನಾನು ಯಾವಾಗಲೂ ತಲೆಬಾಗುತ್ತಿದ್ದೆ. ನನ್ನಲ್ಲಿ ಅವರಿಗೂ ವಿಶ್ವಾಸವಿತ್ತು. ನಾನು ಬರೆದ ಲೇಖನಗಳನ್ನು ಅವರು ಓದದೆ ಬಿಡುತ್ತಿರಲಿಲ್ಲ. ಮಂಗಳೂರಿಗೆ ಹಿಂತೆರಳಿದ ಶಿವಶಂಕರ ರಾಯರು ಕೆಲವು ವರುಷಗಳ ಕಾಲ ಪೂರ್ಣಕಾಲಿಕ ಕಾರ್ಯಕರ್ತನಾಗಿ ಪಕ್ಷ ಕೆಲಸದಲ್ಲಿ ನಿರತರಾಗಿದ್ದರು.

ನಂತರ ಅವರ ಪಾಲಿಗೆ ಬಂದ ಆಸ್ತಿಯನ್ನು ಅವರೇ ನೋಡಿಕೊಳ್ಳುವ ಅನಿವಾರ್ಯತೆ ಬಂದೊದಗಿದ ಕಾರಣ, ಅವರು ಕೃಷಿರಂಗಕ್ಕೆ ಇಳಿದರು. ಈ ರಂಗದಲ್ಲಿ ಅವರು ಓರ್ವ ಪ್ರಗತಿಶೀಲ ವ್ಯವಸಾಯಗಾರರಾದರು. ಕೃಷಿಯ ಕುರಿತು ವೈಜ್ಞಾನಿಕ ಪುಸ್ತಕಗಳನ್ನು ಅಭ್ಯಾಸ ಮಾಡಿ ಹಲವು ರೈತರಿಗೆ ಸಲಹೆಗಾರರಾದರು. ಇಂದಿಗೂ ರೈತರ ಕುರಿತು ಸಭೆ, ವಿಚಾರ ವಿನಿಮಯಗಳು, ನಡೆಯುವ ಸಂದರ್ಭಗಳಲ್ಲಿ ಅವರಿಗೆ ಕರೆ ಬಂದೇ ಬರುತ್ತದೆ.

"ಗುಣಕ್ಕೆ ಮತ್ಸರವಿಲ್ಲ" ಎಂಬ ನಿರಂತರ ಸತ್ಯವನ್ನು ಅಭಿವ್ಯಕ್ತಿಗೊಳಿಸುವ ಶಿವಶಂಕರರಾಯರನ್ನು ಸರ್ವಸಾಮಾನ್ಯವಾಗಿ ಎಲ್ಲರೂ ಗೌರವಿಸುತ್ತಾರೆ. ಎಂತಹ ದೊಡ್ಡ ಮನುಷ್ಯನೇ ಆಗಲಿ, ಅಂತಹವರ ಒಂದು ದುರ್ಗುಣ ಅಂದರೆ ಇನ್ನೊಬ್ಬರ ಕುರಿತು ಮತ್ಸರ ತಾಳುವುದು. ಅದನ್ನು ತ್ಯಜಿಸಬೇಕಾದರೆ ಆತನಲ್ಲಿ ಸೂಕ್ತವಾದ ಸಂಸ್ಕೃತಿ, ಆದರ್ಶ ನಡೆನುಡಿಗಳು ಅಗತ್ಯ. ಶಿವಶಂಕರರಾಯರಲ್ಲಿ ಯಾವ ದುರ್ಗುಣಗಳೂ ಇರಲಿಲ್ಲ.

ಇಂತಹ ಓರ್ವ ಉದಾತ್ತ , ತುಂಬು ಹೃದಯದ ವ್ಯಕ್ತಿಯಾದ ಕಾ. ಶಿವಶಂಕರ ರಾಯರು ಪರರಿಗಾಗಿ ತನ್ನ ಜೀವನದ ಕಥೆಯನ್ನು ಬರೆದ ಪುಸ್ತಕದಲ್ಲಿ ನನ್ನೊದೊಂದು ಲೇಖನ ಪ್ರಕಟಣೆಗೆ ಅವಕಾಶ ಮಾಡಿಕೊಟ್ಟದ್ದಕ್ಕೆ ಅವರಿಗೆ ನಾನು ಚಿರಋಣಿಯಾಗಿದ್ದೇನೆ.

ನನ್ನ ಪತ್ನಿ ಸಂಸ್ಕೃತಿಯೊಡನೆ ಇಂಗ್ಲೀಷ್ ಸಾಹಿತ್ಯದ ಕುರಿತು ಚರ್ಚೆ ನಡೆಸುವುದು ಅವರಿಗೆ ರೂಢಿಯಾಗಿತ್ತು. ಓದುವಿಕೆಯೇ ಅವರ ಬಾಳಿನ ಒಂದು ಸಾಧನೆಯಾಗಿರುವುದೇ ಇದಕ್ಕೆ ಕಾರಣ. ಅವರ ಸಂಪರ್ಕದಿಂದ ನಾವು ಅನೇಕ ಸುಗುಣಗಳನ್ನು ಗಳಿಸಿಕೊಂಡಿದ್ದೇವೆ. ಅವರ ಪ್ರೀತಿ ವಾತ್ಸಲ್ಯಗಳು ನಮ್ಮಲ್ಲೂ ಮೈಗೂಡಿಕೊಂಡಿವೆ.

ಶಿವಶಂಕರರಾಯರು ಓರ್ವ ಸರಳಜೀವಿ. ಅಹಂಭಾವ, ಅಹಂಕಾರದ ಸುಳಿವೇ ಅವರಲ್ಲಿಲ್ಲ. ಅವರು ಎಂದಿಗೂ ಮೊದಲಿಗೆ ಹೋಗಿ ವೇದಿಕೆಯಲ್ಲಿ ಕುಳಿತುಕೊಳ್ಳುವ ಸ್ವಭಾವದವರಲ್ಲ. ಅಂತೆಯೇ ಅವರು ಮುಖಂಡತ್ವಕ್ಕೆ, ಹಾಗೆಯೇ ಅದರ ಪ್ರತಿಷ್ಠೆಗೆ ಹಂಬಲಿಸಿದವರಲ್ಲ

ಈ ಎಲ್ಲಾ ಆದರ್ಶ ಗುಣಗಳಿಂದ ಮೈತುಂಬಿಕೊಂಡ ಶಿವಶಂಕರರಾಯರಿಗೆ ನಮ್ಮ ಮನಪೂರ್ವಕ ಅಭಿನಂದನೆಗಳು.

## ನನ್ನ ತಂದೆಯವರ ಬದುಕಿನ ಪರಿ

ನನ್ನ ತಂದೆ, ಅಡ್ಡೂರು ಶಿವಶಂಕರರಾಯರದು ಸರಳ ಜೀವನ. ನಾನು ನೋಡಿದಾಗಿನಿಂದಲೂ ಖಾದಿಯ ಅರೆತೋಳಿನ ಷರಟು, ಬಿಳಿಮುಂಡು ಅವರ ಉಡುಪು. ಹೆಗಲಿಗೊಂದು ಚೀಲ, ಕೈಯಲ್ಲೊಂದು ಕೊಡೆ. ಇದಕ್ಕಿಂತ ಹೆಚ್ಚಾಗಿ ತನಗಾಗಿ ಏನನ್ನೂ ಬಯಸಿದವರಲ್ಲ. ತನಗೊಂದು ರೇಡಿಯೋ ಸಾಕು, ಟಿವಿ ಬೇಡ ಅಂದವರು. ಈಗಲೂ ಅಡ್ಡೂರಿನ ಕೃಷ್ಣಾ ಫಾರ್ಮಿನ ಮನೆಯಲ್ಲಿ ಟಿವಿ ಇಲ್ಲ. ಇದ್ದದ್ದರಲ್ಲೇ ತೃಪ್ತಿ ಪಟ್ಟವರು. ಊಟಕ್ಕೆ ಅನ್ನವಾದರೆ ಅನ್ನ, ಗಂಜಿಯಾದರೆ ಗಂಜಿ. ತನ್ನ ಪಾಲಿನ ಒಂದಷ್ಟು ಜಮೀನು ಕಳಕೊಂಡರೇ ವಿನಾ ಹೊಸದಾಗಿ ಖರೀದಿಸಿದವರಲ್ಲ.

ಅವರಿಗೆ ಕೊಡುವುದರಲ್ಲೇ ಸಂತೋಷ ಹೊರತು ಪಡೆಯುವುದರಲ್ಲಲ್ಲ. ಭತ್ತದ ವಿವಿಧ ತಳಿಗಳ ಮತ್ತು ಹೊಸ ಬೆಳೆಗಳ ಬೀಜಗಳನ್ನು ನೂರಾರು ಕೃಷಿಕರಿಗೆ ಹಂಚಿದ್ದಾರೆ. ನಾಲ್ಕು ನೂರಕ್ಕೂ ಅಧಿಕ ಗಂಗಬೊಂಡ ತೆಂಗಿನ ಸಸಿಗಳನ್ನು ಅತೀ ಕಡಿಮೆ ಬೆಲೆಗೆ ಒದಗಿಸಿದ್ದಾರೆ. ಅದನ್ನು ಇವರು ಇಮ್ಮಡಿ ಬೆಲೆಗೆ ಮಾರಲು ಸಾಧ್ಯವಿತ್ತು. ಆದರೆ ಒಂದು ರೂಪಾಯಿ ಬೆಲೆ ಏರಿಸಲಿಕ್ಕೂ ಅವರು ತಯಾರಿರಲಿಲ್ಲ. ಅಡ್ಡೂರಿನ ಮನೆಗೆ ಧಾರ್ಮಿಕ ಸಮಾರಂಭಗಳಿಗೆ ಬಂದ ಬಂಧುಗಳಿಗೆಲ್ಲ ಗಂಗಬೊಂಡ ಕುಡಿಯಲು ಕೊಟ್ಟು ಸಂತೋಷ ಪಡುತ್ತಿದ್ದರು.

ಮನೆಗೆ ಬಂದವರಿಗೆ ಇವರಂತೆ ಎಳನೀರು ಕೊಟ್ಟು ಸತ್ಕರಿಸುವ ಯಾರನ್ನೂ ನಾನು ಕಂಡಿಲ್ಲ. ಒಂದು ವರುಷ ಇವರು ಬೆಳೆಸಿದ ಬಚ್ಚಂಗಾಯನ್ನು ಪೊಳಲಿಯ ಮಾರಾಟಗಾರರು ಕಡಿಮೆ ಬೆಲೆಗೆ ಕೇಳಿದಾಗ, ಸುತ್ತಮುತ್ತಲಿನ ಮನೆಯವರಿಗೆ ಅವನ್ನು ಹಂಚಿಬಿಟ್ಟರು. ಹಲವಾರು ವರುಷಗಳಲ್ಲಿ ಮಂಗಳೂರಿನ ತನ್ನ ಆತ್ಮೀಯರಿಗೆ ಆಡ್ಡೂರಿನಿಂದ ಬಚ್ಚಂಗಾ ಹೊತ್ತು ತಂದು ಕೊಟ್ಟಿದ್ದರು. ಕಾರಿನಲ್ಲಿ ಅಡ್ಡೂರಿಗೆ ಬರುತ್ತಿದ್ದ ಹಲವರು, ಇವರು ತೋರಿಸಿದ ಪುಸ್ತಕದ ಪುಟ ತಿರುಗಿಸಿ ನೋಡಿ, "ಇದನ್ನು ಓದಿ ಕೊಡ್ತೇವೆ' ಅಂದಾಗ, "ಇಂಥಲ್ಲಿ ಖರೀದಿಸಿ" ಎನ್ನದೆ, ಕೊಟ್ಟು ಬಿಡುತ್ತಿದ್ದರು. ಹಾಗೆ ಇವರು ಕಳೆದುಕೊಂಡ ಪುಸ್ತಕಗಳೆಷ್ಟೋ?

ಮಾಹಿತಿ ಒದಗಿಸಲು ಅವರಿಗಿರುವ ಉತ್ಸಾಹವನ್ನು ನೋಡಿಯೇ ನಂಬಬೇಕು. ಯಾರು ಏನೇ ಕೇಳಿದರೂ, ಪುಸ್ತಕಗಳಲ್ಲಿ ಪತ್ರಿಕೆಗಳಲ್ಲಿ ಹುಡುಕಾಡಿ, ಮಾಹಿತಿ ಸಂಗ್ರಹಿಸಿ ನೀಡುತ್ತಿದ್ದರು. ಹಲವು ಬಾರಿ 'ನೋಟ್ಸ್' ಬರೆದು ಕೊಡುತ್ತಿದ್ದರು. ಇದಕ್ಕೆ ಬದಲಾಗಿ ಬಾಯ್ಮಾತಿನ 'ಥ್ಯಾಂಕ್ಸ'ನ್ನೂ ನಿರೀಕ್ಷಿಸಿದವರಲ್ಲ.

ಇತರರ ಸಾಧನೆಗಳನ್ನು ಮನಸಾರೆ ಮೆಚ್ಚುವವರು. ತನಗಿಂತ ವಯಸ್ಸಿನಲ್ಲಿ ಕಿರಿಯರಾದರೂ ಸರಿ, ಅವರನ್ನು ಬಾಯ್ತುಂಬ ಹೊಗಳುತ್ತಾರೆ. ಬೇರೆಯವರ ಕಿಂಚಿತ್ ಸಹಾಯವನ್ನೂ ಬಹಳ ಸ್ಮರಿಸುತ್ತಾರೆ. ತಾನು ಮಾಡಿದ ಉಪಕಾರಗಳು ಎಷ್ಟೇ ಮಹತ್ವದ್ದಾದರೂ ಯಾವತ್ತೂ ಆ ಬಗ್ಗೆ ಹೇಳಿಕೊಂಡವರಲ್ಲ.

ಅಡ್ಡೂರಿಗೆ ವಿದ್ಯುತ್ ಸಂಪರ್ಕಕ್ಕಾಗಿ ಕರ್ನಾಟಕ ವಿದ್ಯುತ್ ಮಂಡಳಿಯವರಿಗೆ ಟ್ರಾನ್ಸ್‌ಫಾರ್ಮರ್ ಹಾಕಲು ಸೂಕ್ತ ಜಾಗ ಬೇಕಾಗಿತ್ತು. ಆದರೆ ಜಾಗ ಒದಗಿಸಲು ಅಡ್ಡೂರಿನಲ್ಲಿ ಯಾರೂ ಮುಂದೆ ಬರಲಿಲ್ಲ. ಆ ಸಂದರ್ಭದಲ್ಲಿ 'ಊರಿಗೆ ಕರೆಂಟ್ ಬರಲಿ' ಎಂಬ ಭಾವದಿಂದ, ತಮ್ಮ ಕುಟುಂಬದ ಮುಳಿಪಡ್ಪು ಎಂಬ ಜಾಗವನ್ನು ಅದಕ್ಕಾಗಿ ಒದಗಿಸಿದವರು ನನ್ನ ತಂದೆ. ಒಂದಿಂಚು ಜಾಗಕ್ಕಾಗಿ ಇಂದು ರಕ್ತಪಾತ ನಡೆಯುವುದನ್ನು ನಾವು ಕಾಣುತ್ತಿದ್ದೇವೆ. ಹಾಗಿರುವಾಗ, ಊರಿನ ರಸ್ತೆಗಾಗಿ ತನ್ನ ತೋಟದ ಪಕ್ಕದಲ್ಲಿ ಉದ್ದಕ್ಕೂ ಜಾಗ ಬಿಟ್ಟುಕೊಟ್ಟವರು ನನ್ನ ತಂದೆ.

ಪುಸ್ತಕಗಳು ಅವರ ಒಡನಾಡಿಗಳು. ನಮ್ಮ ಮನೆ ತುಂಬಾ ಪುಸ್ತಕಗಳು. ಬಾಲ್ಯದಲ್ಲಿ ನನಗೆ 'ಚಂದಮಾಮ' ಓದಲು ಕೊಟ್ಟು ಓದುವ ಗೀಳು ಹಿಡಿಸಿದವರು. ನನ್ನ ಹಾಗೆ ಅನೇಕರಲ್ಲಿ ಓದುವ ಅಭ್ಯಾಸ ಬೆಳೆಯಲು ಕಾರಣರಾಗಿದ್ದಾರೆ. ಉಪನಯನ ಮತ್ತು ಮದುವೆಗಳಲ್ಲಿ ಇವರಂತೆ ಪುಸ್ತಕಗಳ ಉಡುಗೊರೆ ಕೊಡುವವರು ವಿರಳ.

ಅವರ ಓದು ಅಗಾಧ. ನೂರಾರು ಪುಸ್ತಕಗಳ ಹೂರಣವನ್ನು ಮನಮುಟ್ಟುವಂತೆ ಬಿಚ್ಚಿಡಬಲ್ಲರು. ಆದರೂ ತಾನೆಷ್ಟೋ ತಿಳಿಯಲಿಕ್ಕಿದೆ ಎಂಬ ವಿನಯ ಅವರಲ್ಲಿ ತುಂಬಿದೆ. ಆಂಗ್ಲ ಭಾಷೆಯಲ್ಲಿ ಅವರ ಬರಹ ಹಾಗೂ ಪ್ರೌಢಿಮೆಯನ್ನು ಯಾರಾದರೂ ಮೆಚ್ಚಲೇಬೇಕು. ಅದನ್ನು ಒಪ್ಪಲು ಅವರೇ ತಯಾರಿಲ್ಲ ಎಂಬುದು ಅವರ ಸೌಜನ್ಯದ ದ್ಯೋತಕ.

ಇಂದಿನ ದಿನಗಳಲ್ಲಿ ನಮ್ಮ ಮಕ್ಕಳಿಗೆ 'ಇವರಂತೆ ಜೀವನ ನಡೆಸು' ಎಂದು ಯಾರ ಬಗ್ಗೆ ಹೇಳೋಣ? ಎಷ್ಟು ತಂದೆ-ತಾಯಂದಿರು ತಮ್ಮ ಮಕ್ಕಳಿಗೆ 'ನಮ್ಮಂತೆ ಬದುಕು ನಡೆಸು' ಎಂದು ದಾರಿ ತೋರಿಸಲು ಸಾಧ್ಯವಿದೆ? ಆ ವಿಚಾರದಲ್ಲಿ ನಾನು ಪುಣ್ಯವಂತ. ನನ್ನ ಬದುಕಿನುದ್ದಕ್ಕೂ ಮಾನವನಾಗಿ ಹೇಗೆ ಬಾಳಬೇಕೆಂದು ನನ್ನ ತಂದೆ ಮತ್ತು ತಾಯಿ ಇಬ್ಬರೂ ನನಗೆ ತೋರಿಸಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಋಣಿ.

## ಎಂಟು ದಶಕಗಳ ಬೀಸು ನೋಟ

ನನ್ನ ಅಜ್ಜ ತಿಮ್ಮಪ್ಪಯ್ಯ ಶಿರಸ್ತೇದಾರ್ ಆಗಿದ್ದರು. ಅವರಿಗೆ ಇಬ್ಬರು ಮಕ್ಕಳು. ಒಬ್ಬರು ತಂದೆ (ಅಡ್ಡೂರು ಕೃಷ್ಣಯ್ಯ) ಇನ್ನೊಬ್ಬರು ಚಿಕ್ಕಪ್ಪ (ಅನಂತರಾಮ ರಾವ್). ಬಡತನದ ಕಾಲವದು. ಇಂದಿಗಿದ್ದರೆ ನಾಳೆಗಿಲ್ಲ ಎಂಬಂತಹ ಸ್ಥಿತಿ. ಬಹಳ ಕಷ್ಟದಲ್ಲಿ ವಿದ್ಯಾಭ್ಯಾಸ ಮಾಡಿದ್ದ ನನ್ನ ತಂದೆಯವರು ಎಂಬಿಸಿಎ (MBCA)ಮುಗಿಸಿ ವೈದ್ಯಕೀಯ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿದರು.

ಹೊಸಪೇಟೆಯಲ್ಲಿ ತಂದೆಯವರ ವೃತ್ತಿ ಜೀವನ ಆರಂಭ. ಮುಂದೆ ಬೊಬ್ಬಿಲಿ, ಪಾಲಕ್ಕೊಂಡಾ, ವಿಶಾಖಪಟ್ಟಣ, ವೈನಾಡು, ತಂಜಾವೂರುಗಳಿಗೆ ವರ್ಗಾವಣೆ. ಒಂದು ಕಡೆಯಲ್ಲಿ ಬದುಕು ನೆಲೆಗೊಳಿಸುವಷ್ಟರಲ್ಲಿ ಹೊಸ ವರ್ಗಾವಣೆಯ ಆದೇಶ ಬರುತ್ತಿತ್ತು. ಇದರಿಂದಾಗಿ ತಂದೆಯವರಿಗೆ ರೋಸಿ ಹೋಗಿತ್ತು. ವೈದ್ಯಕೀಯ ಇಲಾಖೆಯಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದರೆ ಬೇಗನೆ ವರ್ಗಾವಣೆಯಾಗದು ಎಂಬ ಉದ್ದೇಶದಿಂದ ತಂಜಾವೂರಿನ ಮೆಡಿಕಲ್ ಸ್ಕೂಲಿನಲ್ಲಿ ಉಪನ್ಯಾಸಕರಾದರು. ಮುಂದಿನ ಆರೇಳು ವರುಷಗಳು ವರ್ಗಾವಣೆಯಿಂದ ಮುಕ್ತಿ. ನಂತರ ಸುಮಾರು ಎಂಟು ವರುಷ ಮದ್ರಾಸಿನಲ್ಲಿ ವಾಸ.

1914ರಲ್ಲಿ ನನ್ನ ಅಕ್ಕ ಕಾಶಮ್ಮಳ ಜನನವಾಯಿತು. 1917ಲ್ಲಿ ತಿಮ್ಮಪ್ಪಯ್ಯ, 1919ರಲ್ಲಿ ಸುಬ್ಬರಾವ್, 1922ರಲ್ಲಿ ನಾನು, 1924ರಲ್ಲಿ ಸುಶೀಲ, 1926ರಲ್ಲಿ ವೆಂಕಟ್ರಾವ್, 1929ರಲ್ಲಿ ಮನೋರಮಾ ಮತ್ತು 1932ರಲ್ಲಿ ರಾಮಮೋಹನ್ ಜನನ. ತಂದೆಯವರು ವಿಶಾಖಪಟ್ಟಣದಲ್ಲಿ ಸೇವೆಯಲ್ಲಿದ್ದಾಗ ನಾನು ಮತ್ತು ಅಣ್ಣ ಸುಬ್ಬರಾವ್ ಜನಿಸಿದೆವು.

## ನನ್ನ ಸಣ್ಣಣ್ಣ : ಡಾ. ಎ. ಸುಬ್ಬರಾವ್

ನನ್ನ ಸಣ್ಣಣ್ಣ ಡಾ.ಸುಬ್ಬ ರಾವ್ ಈಗಿಲ್ಲ. ಅವನು 14 ಸೆಪ್ಟೆಂಬರ್ 2003ರಂದು ನಿಧನನಾದ. ಒಕ್ಟೋಬರ್ 16, 1919ರಲ್ಲಿ ಆತ ವಿಶಾಖಪಟ್ಟಣದಲ್ಲಿ ಜನಿಸಿದ್ದ. ಆಗ ನಮ್ಮ ತಂದೆಯವರು ಅಲ್ಲಿ ಸರಕಾರಿ ಆಸ್ಪತ್ರೆಯ ವೈದ್ಯರಾಗಿದ್ದರು. ನಾನು ಸಹ ಅಲ್ಲೇ (1922)ಜನಿಸಿದೆ. ನನಗೂ ಅವನಿಗೂ ಸುಮಾರು ಎರಡೂವರೆ ವರುಷಗಳ ಅಂತರ.

ದ.ಕ.ಜಿಲ್ಲೆಯ ಮಂಗಳೂರು ತಾಲೂಕಿನ ಗುರುಪುರ ಹತ್ತಿರದ ಅಡ್ಡೂರು ನನ್ನ ಕುಟುಂಬದ ನೆಲೆ. ಸರಕಾರಿ ವೈದ್ಯರ ವೃತ್ತಿಯಲ್ಲಿ ನನ್ನ ತಂದೆಗೆ ಆಗಾಗ ವರ್ಗಾವಣೆ. ಆ ವರೆಗೆ ಆಂಧ್ರ, ಕೇರಳದ ವಿವಿಧ ಊರುಗಳಿಗೆ ಅವರಿಗೆ ವರ್ಗವಾಗಿತ್ತು. ಆಗೆಲ್ಲ ಅವರ ಜೊತೆ ಹೋದ ನಮ್ಮ ವಿದ್ಯಾಭ್ಯಾಸಕ್ಕೆ ತೊಂದರೆಯಾದದ್ದನ್ನು ಅವರು ಕಂಡಿದ್ದರು. ಈ ತೊಂದರೆ ಪರಿಹರಿಸಲಿಕ್ಕಾಗಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಅಧ್ಯಾಪಕ ವೃತ್ತಿಯನ್ನು ಅವರು ಆರಿಸಿಕೊಂಡಿದರು. ಇದರಿಂದಾಗಿ ತಂಜಾವೂರಿನ ಮೆಡಿಕಲ್ ಸ್ಕೂಲಿಗೆ ಅವರ ನೇಮಕವಾಯಿತು. ಅನಂತರ ಒಂದೇ ಊರಿನಲ್ಲಿ ನೆಲೆಸಿ, ಒಂದೇ ಭಾಷೆ ಕಲಿತು ವಿದ್ಯಾಭ್ಯಾಸ ಮಾಡುವ ಅವಕಾಶ ನಮಗೆ ಪ್ರಾಪ್ತವಾಯಿತು.

ತಂಜಾವೂರಿನಲ್ಲಿ ಏಳೂವರೆ ವರುಷ ಅಂದರೆ 1926ರಿಂದ 1933ರ ವರೆಗೆ, ನಂತರ 1933 ರಿಂದ 1939ರ ವರೆಗೆ ಮದರಾಸಿನಲ್ಲಿ ಇದ್ದುದರಿಂದ ತಮಿಳು ಭಾಷೆಯಲ್ಲಿ ಕಲಿಯುವ ಅವಕಾಶ ನಮಗೆ ಒದಗಿತು.

*ಬಾಲ್ಯದ ದಿನಗಳು*

ತಂಜಾವೂರಿನ ನಮ್ಮ ಜೀವನದ ಸ್ವಾರಸ್ಯದ  ಘಟನೆಗಳನ್ನು ಮರೆಯಲಾಗದು. ಅಲ್ಲಿ ಒಂದು ವರುಷ ಖಾಸಗಿ ಶಾಲೆಯಲ್ಲಿ ಓದಿ ನಾನು ಮತ್ತು ನನ್ನ ಆಣ್ಣಂದಿರು ಬೇರೆ ಶಾಲೆಗೆ ಸೇರಿದೆವು. ನನ್ನ ದೊಡ್ಡಣ್ಣ ಕಲ್ಯಾಣ ಸುಂದರಂ ಪ್ರೌಢಶಾಲೆಗೂ, ನಾನು ಮತ್ತು ಸುಬ್ಬರಾವ್ ಸ್ಯೆಂಟ್ ಜಾರ್ಜ್ ಸ್ಪೋರ್ಟ್ಸ್ ಸ್ಕೂಲಿಗೂ ಸೇರಿದೆವು.

ಮೂರನೇ ತರಗತಿಯ ಅಧ್ಯಾಪಕರೊಬ್ಬರು ಬಹಳ ಕ್ರೂರಿ. ಯಾರಿಗೂ ಅವರನ್ನು ಕಂಡರೆ ಆಗುತ್ತಿರಲಿಲ್ಲ. ಮಕ್ಕಳ ಮೇಲೆ ಬೆತ್ತ ಪ್ರಯೋಗಿಸುವುದರಲ್ಲಿ ಅವರು ನಿಸ್ಸೀಮರು. ಆ ಕೆಲಸ ಅವ್ಯಾಹತವಾಗಿ ನಡೆಯುತ್ತಿತ್ತು. ಆದರೂ ಯಾರೂ ಅವರ ಮೇಲೆ ದೂರು ಹೇಳುತ್ತಿರಲಿಲ್ಲ.

ಒಮ್ಮೆ ಕೆಲವು ಹುಡುಗರು ತಂಟೆ ಮಾಡಿದರೆಂಬುದಕ್ಕಾಗಿ ಎಲ್ಲರಿಗೂ ಜೋರಾಗಿ ಏಟು ಬಾರಿಸಿದರು. ಏನೂ ಚೇಷ್ಟೆ ಮಾಡದಿದ್ದರೂ ನನ್ನ ಅಣ್ಣನಿಗೂ ಜೋರಾಗಿ ಪೆಟ್ಟು ಬಿತ್ತು. ಬಾಸುಂಡೆ ಬಂದು ಅನಂತರ ಜ್ವರದಲ್ಲಿ ನರಳುವಂತಾಯಿತು. ನನ್ನ ತಂದೆಯವರು ಶಾಲೆಯ ಮುಖ್ಯಸ್ಥರಿಗೆ ದೂರು ನೀಡಿದರು. ದೂರು ತನಿಖೆಯಾಗಿ ಆ ಅಧ್ಯಾಪಕರು ಕೆಲಸ ಕಳೆದುಕೊಳ್ಳಬೇಕಾಯಿತು. ಅವನು ಜ್ವರದಲ್ಲಿ ಮಲಗಿದ್ದಾಗ ಪ್ರತಿದಿನವೂ ಶಾಲೆಯಿಂದ ಅನೇಕ ಮಕ್ಕಳು ಅವನನ್ನು ನೋಡಲು ಬರುತ್ತಿದ್ದರು.

*ನಾಟಕದ ಗೀಳು*

ನನ್ನ ಅಣ್ಣನಿಗೆ ಬಾಲ್ಯದಿಂದಲೇ ನಾಟಕದ ಗೀಳು. ನಮ್ಮ ತಂದೆಯವರ ಸಹೋದ್ಯೋಗಿ ಡಾ.ರಾಘವಾಚಾರಿ ಅವರು  ಹರಿಶ್ಚಂದ್ರ ನಾಟಕವೊಂದನ್ನು ಸಂಯೋಜಿಸಿದ್ದರು. ಅಣ್ಣನಿಗೂ ಒಂದು ಪಾತ್ರವಿತ್ತು.

ಅದೇ ನಾಟಕವನ್ನು ನಮ್ಮ ಬೀದಿಯಲ್ಲಿದ್ದ  ಶ್ಯಾಮಾ ಮತ್ತು ಸುಂದರಂ  ಅವರ ಮನೆಯಲ್ಲಿ ಪುನಃ ಆಡಲಾಯಿತು.  ಮಾಳಿಗೆಯು ನಾಟಕದ ವೇದಿಕೆಯಾಗಿತ್ತು. ಸುತ್ತ ಮುತ್ತಲಿನ ಹಲವಾರು ಮಂದಿ ಬಂದಿದ್ದರು. ಅಲ್ಲಿ ನಾಟಕದಲ್ಲಿ ಅಣ್ಣನದು  ಹರಿಶ್ಚಂದ್ರನ ಪಾತ್ರ. ಹರಿಶ್ಚಂದ್ರನ ಮನೆಗೆ ಋಷಿಗಳು ಬಂದಾಗ ಅಲ್ಲಿ ಗಂಡು ಮಕ್ಕಳಿಲ್ಲ ಎಂಬ ಕಾರಣ ಅವನ ಮನೆಯಲ್ಲಿ ಊಟ ಮಾಡಲು ನಿರಾಕರಿಸುತ್ತಾರೆ. ಆಗ ಹರಿಶ್ಚಂದ್ರ 'ಹಾಯ್' ಎಂದು ದೊಪ್ಪನೆ ಬೀಳಬೇಕು. ಅಣ್ಣನ ಪಾತ್ರ ಎಷ್ಟು ಅಮೋಘವಾಗಿತ್ತೆಂದರೆ ಸಭಿಕರಿಂದ "Once more" ಕೇಳಿಬಂತು. ಹಾಗಾಗಿ ಆ ದೃಶ್ಯವನ್ನು ಪುನಃ ಅಭಿನಯಿಸಲಾಯಿತು.

ಆ ನಾಟಕದಲ್ಲಿ ನನಗೂ ಒಂದು ಪಾತ್ರ ಇತ್ತು. ಲೋಹಿತಾಶ್ವನ ಪಾಠಶಾಲೆಯಲ್ಲಿ ನನ್ನದು ಅಧ್ಯಾಪಕನ ಪಾತ್ರ. ನಾನು ಕೈಯಲ್ಲಿ ಬೆತ್ತ ಹಿಡಿದಿದ್ದೆ. ಲೋಹಿತಾಶ್ವ ಒಳ್ಳೆಯ ಹುಡುಗ ಎಂಬುದನ್ನು ನಾಟಕದಲ್ಲಿ ತೋರಿಸಬೇಕಾಗಿತ್ತು. ಇತರರು ಚೇಷ್ಟೆ ಮಾಡುವುದನ್ನು ಅಭಿನಯಿಸಿದಾಗ ನಾನು ಗದರಿಸಿ ಬೆತ್ತವನ್ನು ಪ್ರಯೋಗಿಸಿದೆ. ನನ್ನ ಬೆತ್ತದ ಏಟು ಜೋರಾಗಿ ಬಿತ್ತು.  ಏಟು ತಿಂದ ಮಕ್ಕಳು ನನ್ನ ಕೈಯಿಂದ ಬೆತ್ತ ಎಳೆದು ನನ್ನ ಮೇಲೆ ಮುಗಿಬಿದ್ದರು. ಲೋಹಿತಾಶ್ವ ಅದೇ ಬೆತ್ತದಲ್ಲಿ ನನಗೆ ಬಾರಿಸಿದ! ನನಗೆ ಅಳು ಬಂದು ಕೂಡಲೇ ವೇದಿಕೆಯಿಂದ ಕಾಲ್ಕಿತ್ತೆ.

ಇದೇ ನಾಟಕವನ್ನು ತನ್ನ ಮನೆಯಲ್ಲೂ ಆಡಿಸಬೇಕೆಂದು ಇನ್ನೊಬ್ಬ ಹುಡುಗ ಲಕ್ಷ್ಮಿನಾರಾಯಣನ್ ಆಹ್ವಾನಿಸಿದ. ನಾವು ಅವನಲ್ಲಿಗೆ ಹೋದೆವು. ಸಭಿಕರು ತುಂಬಿದ್ದರು. ನಾಟಕ ಶುರುವಾಯಿತು. ಆಗ ಕೆಲಸಕ್ಕೆ ಹೋಗಿದ್ದ ಆ ಮನೆಯ ಯಜಮಾನ ಮರಳಿ ಬಂದರೆಂದು ಯಾರೋ ಬೊಬ್ಬೆ ಹಾಕಿದ್ರು. ನಮ್ಮ ಉಡುಪು ಸರಂಜಾಮುಗಳನ್ನೆಲ್ಲಾ ಬಿಟ್ಟು ಓಟಕಿತ್ತೆವು. ನಾಟಕ ಅರ್ಧದಲ್ಲೇ ನಿಂತಿತು.

ನಮ್ಮಲ್ಲಿ ಒಂದು ಹೆಚ್.ಎಂ.ವಿ. ಗ್ರಾಮಾಫೋನ್ ಇತ್ತು. ಹಲವು ಹಾಡಿನ ಪ್ಲೇಟ್‌ಗಳಿದ್ದುವು. ಪರವೂರಿನಿಂದ ನಮ್ಮಲ್ಲಿಗೆ ಅತಿಥಿಯಾಗಿ ಬಂದವರಿಗೆ ಪ್ಲೇಟ್‌ಗಳನ್ನು ಹಾಕಿ ಹಾಡು ಕೇಳಿಸುತ್ತಿದ್ದೆವು. ಹಾಡಿನ ಸಂಗ್ರಹದಲ್ಲಿ ಒಂದು ಹೆಂಡ ಕುಡುಕರ ಹಾಡು ಇತ್ತು. ಅದನ್ನು ಹಾಕಿ ಅಣ್ಣ ಹೆಂಡಕುಡುಕರ ಹಾಗೆ ನರ್ತಿಸಿ ತೋರಿಸುತ್ತಿದ್ದ. ಆಗ ಎಲ್ಲರೂ ನಗುತ್ತಿದ್ದರು.

*ಮದ್ರಾಸಿನ ದಿನಗಳು*

1933 ರಲ್ಲಿ ತಂಜಾವೂರಿನ ವೈದ್ಯಕೀಯ ಶಾಲೆ ಮುಚ್ಚಲ್ಪಟ್ಟಿತು. ನನ್ನ ತಂದೆಯವರನ್ನು ಮದರಾಸಿಗೆ ವರ್ಗ ಮಾಡಿದರು. ಹಾಗಾಗಿ ಬಾಲ್ಯದ ದಿನಗಳನ್ನು ಕಳೆದ ತಂಜಾವೂರನ್ನು ಬಿಡಬೇಕಾಯಿತು. ಮದರಾಸಿನಲ್ಲಿ ಮುಂದಿನ ಆರೂವರೆ ವರುಷಗಳನ್ನು ಕಳೆದೆವು.

ಮೈಲಾಪುರದಲ್ಲಿ ನಮ್ಮ ವಸತಿ. ಪಿ.ಎಸ್.ಹೈಸ್ಕೂಲ್ ಎಂಬ ಪ್ರಸಿದ್ಧ ಶಾಲೆಗೆ ಸೇರಿದೆವು. ಅಣ್ಣ ಐದನೇ ಫಾರ್ಮ್ (ಹತ್ತನೇ ತರಗತಿ) ಮತ್ತು ನಾನು ಮೂರನೇ ಫಾರ್ಮ್ (ಎಂಟನೇ ತರಗತಿ). ನಾನು ಹತ್ತರೊಟ್ಟಿಗೆ ಹನ್ನೊಂದು ಎಂಬ ಬಾಲಕನಾಗಿದ್ದರೂ ಸಣ್ಣಣ್ಣ ಅವನ ಒಳ್ಳೆಯ ಗುಣಗಳಿಂದಾಗಿ ತರಗತಿಯ ಮಕ್ಕಳಲ್ಲಿ ಪ್ರಮುಖನಾಗಿ ಕಾಣಿಸಿಕೊಳ್ಳುತ್ತಿದ್ದ.

ಒಮ್ಮೆ ನಾನು ಮಕ್ಕಳ ಗುಂಪಿನೊಂದಿಗೆ ನಡೆಯುತ್ತ ಕೆಲವರನ್ನು ಹಿಂದಕ್ಕೆ ಹಾಕಿ ಮುಂದೆ ನಡೆಯಲು ಪ್ರಯತ್ನಿಸಿದಾಗ ಒಬ್ಬ ಹುಡುಗ 'ಡಬ್ಬಾ' ಎಂದು ಹೇಳುವುದು ಕೇಳಿಸಿತು. ಡಬ್ಬಾ ಎಂದರೆ ಕೆಟ್ಟ ಶಬ್ದ. ಅದರ ಅರ್ಥ ನನಗೆ ಆಗ ಗೊತ್ತಿರಲಿಲ್ಲ. ಕೆಟ್ಟ ಶಬ್ದ ಎಂದಷ್ಟೇ ಗೊತ್ತು. ಅವನು ನನ್ನನ್ನೇ ಉದ್ದೇಶಿಸಿ ಹಾಗೆ ಹೇಳಿದ್ದೆಂದು ಭಾವಿಸಿ ನಾನು ಕೋಪಗೊಂಡೆ. ಸಣ್ಣಣ್ಣ ನನ್ನ ಹಿಂದಿನಿಂದ ಬರುತ್ತಿದ್ದ. ಅವನೊಂದಿಗೆ ದೂರು ಹೇಳಿದೆ. ಸಣ್ಣಣ್ಣ ನೇರವಾಗಿ ಆ ಹುಡುಗನ ಹತ್ತಿರ ಹೋಗಿ 'ನೀನು ಏನು ಹೇಳಿದ್ದು ಇವನಿಗೆ' ಎಂದು ವಿಚಾರಿಸಿದ. ಅವನಿಗೆ ಹೇಗೆ ಉತ್ತರಿಸುವುದೆಂದು ಗೊತ್ತಾಗಲಿಲ್ಲ. ತಾನು ಏನು ಹೇಳಿದ್ದೆಂದು ಅವನಿಗೂ ನೆನಪಿಲ್ಲ. ಆದರೆ 'ಹಾಗೆ ಹೇಳಿದರೆ ನೀನೇನು ಮಾಡುವೆ?' ಎಂದು ಆತ ಎದುರಾಡಿದ. ಅಲ್ಲೇ ಮಾರ್ಗದ ಮಧ್ಯೆ ಅವರಿಬ್ಬರಿಗೂ ಹೊಕೊಯಾಯಿತು. ಆಗ ಬೇರೆಯವರು ಬಂದು ಬಿಡಿಸಿದರು. ಕೆಲವು ದಿನಗಳ ಬಳಿಕ ಅವರಿಬ್ಬರೂ ಸ್ನೇಹಿತರಾದರು. ಇಬ್ಬರಲ್ಲೂ ದ್ವೇಷ ಉಳಿಯಲಿಲ್ಲ.

ಹೈಸ್ಕೂಲ್ ಮುಗಿಸಿ ನನ್ನ ಅಣ್ಣ ಸುಬ್ಬರಾವ್ ಪಚ್ಚಪ್ಪಾಸ್ ಕಾಲೇಜಿಗೆ ಸೇರಿ ಅಲ್ಲಿ ಎರಡು ವರುಷ ಕಲಿತ. ಮುಂದೆ ಕೀಲ್ಪಾರ್ಕ್ ವೈದ್ಯಕೀಯ ಸ್ಕೂಲಿಗೆ ಸೇರಿದ. ದೊಡ್ಡಣ್ಣ ತಿಮ್ಮಪ್ಪಯ್ಯ ಗಳಿಸಿದಷ್ಟು ಉತ್ತಮ ಅಂಕ ಇವನು ಗಳಿಸಲಿಲ್ಲ. ಆದ್ದರಿಂದ ಇವನಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಗಲಿಲ್ಲ. ಹಾಗಾಗಿ ಎಲ್.ಐ.ಎಂ. ಕಲಿಯಲು ಮುಂದಾದ.

ಆ ಸಮಯದಲ್ಲಿ ಆತ ತಾಯಿಗೆ ಮನೆ ಕೆಲಸದಲ್ಲಿ ಸಹಕರಿಸುತ್ತಿದ್ದ. ತರಕಾರಿ ತರುವುದು, ಜೀನಸು ತರುವುದು, ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸುವುದು.. ಇತ್ಯಾದಿ. ನಮ್ಮ ಮನೆಯಲ್ಲಿ ಅಡುಗೆ ಕೆಲಸಕ್ಕೆ ಬೇರೆ ಜನರಿದ್ದರು. ಹಾಗಾಗಿ ಮನೆಯಲ್ಲಿ ಹೆಚ್ಚು ಕೆಲಸವಿರುತ್ತಿರಲಿಲ್ಲ. ಆದರೆ ನಾನು ಯಾವ ಕೆಲಸಕ್ಕೂ ಸಿಕ್ಕುತ್ತಿರಲಿಲ್ಲ. 'ಉಪಕಾರಗೇಡಿ' ಎಂಬ ಬಿರುದು ಗಳಿಸಿದ್ದೆ!

ನಾವು ವರ್ಷಂಪ್ರತಿ ಊರಿಗೆ ಬೇಸಿಗೆ ರಜೆಯಲ್ಲಿ ಹೋಗಿ ಬರುತ್ತಿದ್ದೆವು. ಬರುವಾಗ ಸೆಂಟ್ರಲ್ ಸ್ಟೇಷನ್‌ನಲ್ಲಿ ಬೆಳಿಗ್ಗೆ ರೈಲಿನಿಂದಿಳಿದು ಕಾರಿನಲ್ಲಿ ಮನೆಗೆ ಬಂದು ಉಪಾಹಾರ ಮಾಡುತ್ತಿದ್ದೆವು. ಆದರೆ ಸಣ್ಣಣ್ಣನಿಗೆ ಮಾತ್ರ ಸಾಮಾನನ್ನೆಲ್ಲ ಎತ್ತಿನ ಗಾಡಿಯಲ್ಲಿ ತುಂಬಿ ಗಾಡಿಯಲ್ಲೇ ಕುಳಿತು ಮೈಲಾಪುರಕ್ಕೆ ಬರುವ ಕೆಲಸ. ಹಾಗಾಗಿ ಅವನು ಮನೆಗೆ ಬಂದು ಉಪಾಹಾರ ಮಾಡುವಾಗ ಸುಮಾರು ಮಧ್ಯಾಹ್ನ ಗಂಟೆ ಹನ್ನೆರಡಾಗುತ್ತಿತ್ತು.

ಹೀಗಿರುವಾಗ ಒಮ್ಮೆ ತಾಯಿ ನನಗೆ 'ದೇವಸ್ಥಾನಕ್ಕೆ ಹಣ್ಣುಕಾಯಿ ಮಾಡಲು ನೀನು ಹೋಗಬಾರದೇ? ಅವನು ಎಷ್ಟು ಸಲ ಹೋಗುತ್ತಾನೆ' ಎಂದರು. ನಾನು ಇದನ್ನು ಸಣ್ಣಣ್ಣನಿಗೆ ಹೇಳಿದಾಗ, 'ಭಕ್ತಿಯಿಂದ ಯಾರು ಅಲ್ಲಿಗೆ ಹೋಗುತ್ತಾರೆ? ನಾನು ಅಲ್ಲಿಗೆ ಬರುವವರನ್ನು ನೋಡಲು ಹೋಗುವುದು' ಎಂದ.

ತಂದೆಯವರು ತಾನು ಶಾಲೆಗೆ ಹೋಗಲು ಬಳಸುತ್ತಿದ್ದ ಸೈಕಲ್ಲನ್ನು ಸಣ್ಣಣ್ಣನಿಗೆ ಕೊಟ್ಟಿದ್ದರು. ಪ್ರತೀದಿನ ಸಂಜೆ ನಾನು ಫುಟ್‌ಬಾಲ್ ಮತ್ತು ಅವನು ಕ್ರಿಕೆಟ್ ಆಡುತ್ತಿದ್ದೆವು.

ಮದರಾಸಿನಲ್ಲಿ ನನಗೂ ಅವನಿಗೂ ಓದಲು ಒಂದೇ ಕೋಣೆ. ಕೆಲವು ಸಲ ಜಗಳವಾಗಿ ನಮ್ಮೊಳಗೆ ಜಟಾಪಟಿ ಆಗುತ್ತಿತ್ತು. ನನಗೆ ಕೆಲವೊಮ್ಮೆ ಹಿಂದಿನಿಂದ ತಿವಿಯುವುದು, ಗುದ್ದುವುದು.... ಇಂತಹ ತಂಟೆಗಳನ್ನು ನನ್ನ ತಂಗಿಯರು ಮಾಡುತ್ತಿದ್ದರು. ನನ್ನ ಸಹಾಯಕ್ಕೆ ಯಾರೂ ಬರುತ್ತಿರಲಿಲ್ಲ. ಎಲ್ಲರೂ ಅವನ ಸಹಾಯಕರೇ. ಇದು ಸಾಲದೆಂಬಂತೆ ಸಂಜೆ ತಂದೆಯವರು ಬಂದಾಗ ಅವರಿಗೆ ದೂರು ಹೇಳಿ ನನಗೆ ಬೆಲ್ಟಿನಿಂದ ಏಟು ಸಿಗುವಂತೆ ಮಾಡುತ್ತಿದ್ದರು. ನಮ್ಮ ಮನೆಯಲ್ಲಿ ತಂದೆಯವರ ಕೈಯಿಂದ ಬೆಲ್ಟಿನಿಂದ ಏಟು ತಿಂದವನು ನಾನೊಬ್ಬನೇ.

*ತಂದೆಯವರ ನಿಧನಾನಂತರ*

ಮದರಾಸಿನಲ್ಲಿದ್ದಾಗ ತಂದೆಯವರು (1939 ನವಂಬರ್ 6ರಂದು) ತೀರಿಕೊಂಡರು. ತಾಯಿ ನಮಗೆ ಬಿಡಾರ ಮಾಡಿಕೊಟ್ಟು ಊರಿಗೆ ಮರಳಿದರು. ತಂದೆಯ ಕೆಲವು ಆಪ್ತರು ಹೋಗುವುದು ಬೇಡ, ಮಕ್ಕಳ ವಿದ್ಯಾಭ್ಯಾಸ ಹಾಳಾಗುತ್ತದೆ ಎಂದರೂ ಕೇಳದೆ ಅಮ್ಮ ಅಡ್ಡೂರಿಗೆ ಹೊರಟುಹೋದಳು. ಆಗ ದೊಡ್ಡಣ್ಣ ಎಂಬಿಬಿಎಸ್ ಕೊನೆಯ ವರುಷದಲ್ಲಿ ಕಲಿಯುತ್ತಿದ್ದ. ಇನ್ನು ಒಂದು ವರುಷ ಓದಿ ಹೌಸ್ ಸರ್ಜನ್ ಮುಗಿಸಿದರೆ ಆತನ ವಿದ್ಯಾಭ್ಯಾಸ ಮುಗಿಯಲಿತ್ತು. ನಾನು ಎಫ್.ಎ.ಯಲ್ಲಿ ಓದುತ್ತಿದ್ದೆ. ಸಣ್ಣಣ್ಣ ಎಲ್.ಐ.ಎಂ.ಓದುತ್ತಿದ್ದ. ನಾನು ಮತ್ತು ದೊಡ್ಡಣ್ಣ ಒಂದು ರೂಂ ಮಾಡಿ ವಿದ್ಯಾಭ್ಯಾಸ ಮುಂದುವರಿಸಿದೆವು. ಸಣ್ಣಣ್ಣ ಅವನ ಕಾಲೇಜಿನ ಹತ್ತಿರ ಸಹಪಾಠಿಗಳೊಂದಿಗೆ ಇರುತ್ತಿದ್ದ.

ನಮಗೆ ಖರ್ಚಿಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಸಿಗುತ್ತಿತ್ತು. ಆದರೆ ಸಣ್ಣಣ್ಣ ತಿಂಗಳು ಮುಗಿಯುವ ಮೊದಲೇ ಆ ಹಣ ಖರ್ಚು ಮಾಡಿ ಕಷ್ಟ ಪಡುತ್ತಿದ್ದ. ಆಗ ದೊಡ್ಡಣ್ಣ ಅವನಿಗೆ ಸಹಾಯ ಮಾಡುತ್ತಿದ್ದ.

1940ರ ಮಾರ್ಚ್‌ನಲ್ಲಿ ನಾನು ಮಂಗಳೂರಿಗೆ ಬಂದೆ. ತಮ್ಮ ಊರಿಗೆ ಬಂದು ಮಂಗಳೂರಿನಲ್ಲಿ ಕಲಿಯಲು ಶುರು ಮಾಡಿದ. ದೊಡ್ಡಣ್ಣನ ವಿದ್ಯಾಭ್ಯಾಸ ಮುಗಿದಿತ್ತು. ಇನ್ನು ಕ್ಲಿನಿಕ್ ತೆರೆಯಲು ತಾನು ತಂದೆಯವರ ಉಳಿತಾಯದ ಹಣವನ್ನು ಖರ್ಚು ಮಾಡಿದರೆ ಸೋದರ ಸೋದರಿಯರ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಹುದೆಂದು ಗ್ರಹಿಸಿ ಆತ ಸೈನ್ಯಕ್ಕೆ ಸೇರಿದ.

ತಂದೆಯವರ ನಿವೃತ್ತಿ ವೇತನ ಮತ್ತು ಇತರ ಅಲ್ಪಸ್ವಲ್ಪ ಉಳಿತಾಯದ ಹಣವನ್ನು ಅಮ್ಮ ಬ್ಯಾಂಕಿಗೆ ಹಾಕುತ್ತಿರಲಿಲ್ಲ. ಅವರು ಅದರಿಂದ ಕೃಷಿ ಭೂಮಿ ಖರೀದಿಸಿ ಗೇಣಿ ವಸೂಲಿ ಮಾಡಿ ಬದುಕಬೇಕೆಂದು ನಿಶ್ಚಯಿಸಿದ್ದರು. ಇದಕ್ಕೆ ಸಣ್ಣಣ್ಣನ ಬೆಂಬಲವಿತ್ತು. ಇದರಿಂದಾಗಿ ನಮ್ಮ ಒಟ್ಟು ಉತ್ಪತ್ತಿ ಸುಮಾರು 450 ಮುಡಿ ಅಕ್ಕಿ ಗೇಣಿ ಬರುವಷ್ಟಾಯಿತು. ಹಿಂದೆ ಅದು 150 ಇತ್ತು. ಈ ಹಣದಿಂದ ನನ್ನ ತಾಯಿ ಮನೆ ಖರ್ಚನ್ನು, ಮಕ್ಕಳ ವಿದ್ಯಾಭ್ಯಾಸವನ್ನು ನಡೆಸಲು ಸಾಧ್ಯವಾಯಿತು.

ಮದರಾಸಿನಲ್ಲಿ ಸಣ್ಣಣ್ಣ ಕಾಲೇಜು ದಿನಗಳಲ್ಲಿ ದುಂದುವೆಚ್ಚ ಮಾಡದೆ ಅವನಿಗೆ ಕೊಟ್ಟ ಹಣದಲ್ಲಿ ಮಿತವ್ಯಯದಲ್ಲಿ ಬಹಳ ಜಾಗ್ರತೆಯಿಂದ ಜೀವನ ನಡೆಸುತ್ತಿದ್ದ. ಅವನಿಗೆ ರಾಜಕೀಯದ ಗಂಧಗಾಳಿ ಇರಲಿಲ್ಲ. ಆಗ ಎರಡನೇ ಮಹಾಯುದ್ಧ ಶುರುವಾಗಿತ್ತು, ಚಳುವಳಿ ಜೋರಾಗಿತ್ತು. ಅವನು ಮಾತ್ರ ನಿಶ್ಚಿಂತನಾಗಿದ್ದ.

*ರಾಜಕೀಯದ ಅಲೆಗಳಲ್ಲಿ*

ಇತ್ತ ಮಂಗಳೂರಿನಲ್ಲಿ ಬೀಸುತ್ತಿದ್ದ ರಾಜಕೀಯದ ಅಲೆಯಿಂದಾಗಿ ನಾನು ಇರುತ್ತಿದ್ದ ಹಾಸ್ಟೆಲ್‌ನಲ್ಲಿ ರಾಜಕೀಯ ಚಟುವಟಿಕೆ ಜೋರಾಯಿತು.  ನಾನು ಅದನ್ನು ಸೇರಿಕೊಂಡೆ. ಕಮ್ಯೂನಿಸ್ಟ್ ಸಿದ್ಧಾಂತಗಳು ಮತ್ತು ಅದರಿಂದ ಪ್ರೇರಿತವಾದ ಕಾರ್ಯಗಳಲ್ಲಿ ನಾನು ಕಟ್ಟುಬಿದ್ದೆ.

ಒಮ್ಮೆ ಸಣ್ಣಣ್ಣ ಮಂಗಳೂರಿಗೆ ಬಂದಿದ್ದಾಗ ನನ್ನ ಹಾಸ್ಟೆಲ್ ರೂಂನಲ್ಲಿ ತಂಗಿದ್ದ. ರಾತ್ರಿಯಿಡೀ ನನ್ನ ರಾಜಕೀಯ ಜೀವನದ ಬಗ್ಗೆ ಚರ್ಚಿಸಿದ್ದ. ಬೆಳಿಗ್ಗೆ ಆವನೊಂದಿಗೆ ರೈಲ್ವೇ ನಿಲ್ದಾಣಕ್ಕೆ ನಾನೂ ಹೊರಟೆ. ಹೋಗುತ್ತಿದ್ದಾಗ ಕಮ್ಯೂನಿಸ್ಟ್ ಪತ್ರಿಕೆಯೊಂದನ್ನು ಕೊಂಡುಕೊಳ್ಳಲು ವಿನಂತಿಸಿದೆ. ರಾಜಕೀಯದ ಅರಿವಿಲ್ಲದ ಅವನು ನಿರಾಕರಿಸಿದ. ಇದರಿಂದಾಗಿ ನನಗೆ ಬೇಸರವಾಗಿತ್ತು.

ರೈಲ್ವೇ ನಿಲ್ದಾಣ ಸಮೀಪಿಸುತ್ತಿದ್ದಂತೆ ಆತನ ಚಪ್ಪಲಿಯ ಬಾರ್ ಕಡಿಯಿತು. ಚಪ್ಪಲಿ ಹಾಕಿಕೊಂಡು ಹೋಗುವ ಸ್ಥಿತಿಯಲ್ಲಿರಲಿಲ್ಲ. ಕೈಯಲ್ಲಿ ಹಿಡಿದುಕೊಂಡೇ ಹೋಗಬೇಕಾಗಿತ್ತು.ಆಗ ಅವನಿಗೆ ನನ್ನ ಪತ್ರಿಕೆ ನೆನಪಾಗಿ 'ಒಂದು ಪೇಪರ್ ಕೊಡು' ಎಂದು ಕೇಳಿದ. ನಾನು 'ಕೊಡುವುದಿಲ್ಲವೆಂದು ಹೇಳಿದೆ. 'ಹಣ ಕೊಡುತ್ತೇನೆ, ಕೊಡು' ಎಂದು ಒತ್ತಾಯಿಸಿದ. ನೀನು ಎಷ್ಟೇ ಹಣ ಕೊಟ್ಟರೂ ನಿನಗೆ ಕೊಡುವುದಿಲ್ಲ ಎಂದು ನಾನು ಪಟ್ಟು ಹಿಡಿದೆ. ಇದರಿಂದಾಗಿ ನನ್ನ ಪಕ್ಷ ನಿಷ್ಠೆಯ ಕುರಿತು ಆತನಿಗೆ ತಿಳಿದಿರಬೇಕು. ಮತ್ತೆ ಆತ ಒತ್ತಾಯಿಸಲಿಲ್ಲ. ಅದಾದ ಬಳಿಕ ತಾಯಿಯ ಬಳಿ ಹೇಳಿ ನನ್ನನ್ನು ತಿದ್ದಲು ಅವನು ಪ್ರಯತ್ನಿಸುತ್ತಿದ್ದ.

ಪಕ್ಷದ ಮೇಲಿನ ನಿರ್ಬಂಧ ತೆಗೆಯಲಾಯಿತು. ಕಮ್ಯೂನಿಸ್ಟ್ ಪಕ್ಷದ ಕೆಲಸ ಚುರುಕಿನಿಂದ ಆರಂಭವಾಯಿತು. ಪಕ್ಷಕ್ಕೆ ಬೇಕಾದ ಆರ್ಥಿಕ ಮೂಲಕ್ಕಾಗಿ ಪಕ್ಷದ ನಿಧಿಯೊಂದನ್ನು ರೂಪಿಸಲಾಯಿತು. ಹಲವು ಅಭಿಮಾನಿಗಳು, ಪ್ರೋತ್ಸಾಹಕರು, ಪಕ್ಷ ಕಾರ್ಯಕರ್ತರು ಸಾಧ್ಯವಾದಷ್ಟು ನೆರವಾದರು. ರಾಜೇಶ್ವರರಾಯರು ಅವರ ಪೂರ್ಣ ಆಸ್ತಿ ಮಾರಿ, ಅವರ ಹೆಂಡತಿಗೆ ಜೀವನಕ್ಕಾಗಿ ಆರು ಎಮ್ಮೆ ತೆಗೆದುಕೊಟ್ಟು,  ಉಳಿದೆಲ್ಲಾ ಸಂಪತ್ತನ್ನು ಪಕ್ಷಕ್ಕೆ ಧಾರೆಯೆರೆದರು.

ಈ ವಿಚಾರ ನನಗೆ ಸ್ಫೂರ್ತಿ ನೀಡಿತು. ನನ್ನಲ್ಲಿ ಹಣ ಎಲ್ಲಿಂದ? ನಮ್ಮ ಕುಟುಂಬದ ಆಸ್ತಿ ಇದೆ. ಹಾಗಾಗಿ ಅಮ್ಮನ ಹತ್ತಿರ ನನ್ನ ಪಾಲಿನ ಬಾಬ್ತು ಕೇವಲ ಮೂರು ಸಾವಿರ ಕೇಳಿದೆ. ನನ್ನೆಲ್ಲಾ ಹಕ್ಕನ್ನು ನಿಮಗೆ ಬರೆದುಕೊಡುತ್ತೇನೆ ಎಂದಿದ್ದೆ. ಅಮ್ಮ 'ಆಗುವುದಿಲ್ಲ' ಎಂದರು. ಕೊಡದಿದ್ದರೆ ನನ್ನ ಜೀವಕ್ಕೆ ಅಪಾಯ ಬರಬಹುದೆಂದು ಹೆದರಿಸಿದೆ. ಅಂತಹ ಸಂಘಕ್ಕೆ (ಪಕ್ಷಕ್ಕೆ) ಯಾಕೆ ಸೇರಿದೆ ಎಂದು ಅಮ್ಮನೂ ಪಿರಿಪಿರಿ   ಮಾಡಿದಳು. ಆಗ ಸಣ್ಣಣ್ಣ ತುಂಬೆ ಕೃಷ್ಣರಾಯರಲ್ಲಿ ಸಲಹೆ ಕೇಳಿದಾಗ, 'ಅವನು ಮಾಡುವುದು ಮಾಡಲಿ, ಕೊಡಬೇಡ ' ಎಂದರಂತೆ. ಸಣ್ಣ ಅಣ್ಣನೂ ಗಟ್ಟಿ ನಿಂತ. ಅದರಿಂದಾಗಿ ನಾನು ನಿರೀಕ್ಷಿಸಿದ ಹಣ ಸಿಗಲಿಲ್ಲ. ನನ್ನ ಆಸ್ತಿ ಅಂದು ಕಳೆದುಕೊಂಡಿದ್ದರೆ, ಪಕ್ಷ ಬಿಟ್ಟ ನಂತರದ ಈಗಿನ ಜೀವನಕ್ಕೆ ಕಷ್ಟವಾಗುತ್ತಿತ್ತು.

# ರಾಜನೀತಿಯ ಅಪರಂಜಿ ಡಾ. ಅಡ್ಡೂರು ಸುಬ್ಬರಾವ್

## ಬದುಕಿದ್ದಾಗಲೇ ದಂತಕತೆಯಾದ ಡಾ. ಸುಬ್ಬರಾವ್

ಸರಕಾರದ ಮಂತ್ರಿಯಾಗಿದ್ದರೂ ಸ್ವಂತ ಮನೆಯನ್ನಾಗಲೀ, ಸ್ವಂತಕಾರನ್ನಾಗಲೀ ಖರೀದಿಸದವರು ಇರಬಹುದೇ? ಎಂ.ಪಿ. ಮತ್ತು ಎಂ.ಎಲ್.ಎ. ಆಗಿದ್ದರೂ ಜೀವಮಾನವಿಡೀ ಬಾಡಿಗೆ ಮನೆಯಲ್ಲೇ ವಾಸ ಮಾಡಿದವರು ಇದ್ದಾರೆಯೇ? ಡಾಕ್ಟರ್ ಆಗಿದ್ದರೂ ನಾಲ್ಕು ದಶಕಗಳ ವೃತ್ತಿಜೀವನದಲ್ಲಿ ಸ್ವಂತ ಕ್ಲಿನಿಕ್ ಅಥವಾ ನರ್ಸಿಂಗ್ ಹೋಂ ಮಾಡಿಕೊಳ್ಳದವರು (ಅಂದರೆ ಬಾಡಿಗೆ ಕ್ಲಿನಿಕ್‌ನಲ್ಲಿಯೇ ವೃತ್ತಿ ನಡೆಸಿದವರು) ಇರಬಹುದೇ?ಅಂಥವರೊಬ್ಬರು ಇದ್ದರು - ಅವರೇ ಡಾಕ್ಟರ್ ಅಡ್ಡೂರು ಸುಬ್ಬರಾವ್. ಕೇರಳದ ಉತ್ತರ ತುದಿಯ ಮಂಜೇಶ್ವರ - ಕಾಸರಗೋಡು ಪ್ರದೇಶದಲ್ಲಿ ಅವರ ಹೆಸರು ಕೇಳದವರಿಲ್ಲ. ತಮ್ಮ ಕರ್ಮಭೂಮಿ ಮಂಜೇಶ್ವರದಲ್ಲಿ ಆರು ದಶಕಗಳ ಕಾಲ ಮಾಡಿದ ಜನಸೇವೆಯಿಂದಾಗಿ ಬದುಕಿದ್ದಾಗಲೇ ದಂತಕತೆಯಾದವರು ಡಾಕ್ಟರ್ ಸುಬ್ಬರಾವ್. ಇಂದಿಗೂ ಅಲ್ಲಿನ ಜನರಿಗೆ 'ಡಾಕ್ಟರ್' ಅಂದರೆ 'ಡಾಕ್ಟರ್ ಸುಬ್ಬರಾವ್' ಒಬ್ಬರೇ.ಇಂತಹ ಡಾಕ್ಟರ್ ಸುಬ್ಬರಾವ್ ಅವರ ಬಾಲ್ಯ ಹೇಗಿತ್ತು? ಅವರ ಯೌವನದ ದಿನಗಳು ಹೇಗಿದ್ದವು?

## ಬಾಲ್ಯ – ಯೌವನ

ಡಾ. ಸುಬ್ಬರಾಯರ ಬಾಲ್ಯದ ಹಾಗೂ ಯೌವನದ ದಿನಗಳನ್ನು ಅವರ ತಮ್ಮ ಅಡ್ಡೂರು ಶಿವಶಂಕರ ರಾವ್ ಹೀಗೆ ನೆನಪು ಮಾಡಿಕೊಳ್ಳುತ್ತಾರೆ :ನನ್ನ ಸಣ್ಣಣ್ಣ ಡಾ|| ಸುಬ್ಬರಾವ್ ಅಕ್ಟೋಬರ್ ೧೨, ೧೯೧೯ರಲ್ಲಿ ವಿಶಾಖಪಟ್ಟಣ ದಲ್ಲಿ ಜನಿಸಿದ್ದ. ಆಗ ನಮ್ಮ ತಂದೆಯವರು ಅಲ್ಲಿ ಸರಕಾರಿ ಆಸ್ಪತ್ರೆಯ ವೈದ್ಯರಾಗಿದ್ದರು. ನಾನು ಸಹ ಅಲ್ಲೇ (೧೯೨೨) ಜನಿಸಿದೆ. ನನಗೂ ಅವನಿಗೂ ಸುಮಾರು ಎರಡೂವರೆ ವರುಷಗಳ ಅಂತರ.ದ.ಕ. ಜಿಲ್ಲೆಯ ಮಂಗಳೂರು ತಾಲೂಕಿನ ಗುರುಪುರ ಹತ್ತಿರದ ಅಡ್ಡೂರು ನನ್ನ ಕುಟುಂಬದ ನೆಲೆ. ಸರಕಾರಿ ವೈದ್ಯರ ವೃತ್ತಿಯಲ್ಲಿದ್ದ ನನ್ನ ತಂದೆಗೆ ಆಗಾಗ ವರ್ಗಾವಣೆ. ಆವರೆಗೆ ಆಂಧ್ರ, ಕೇರಳದ ವಿವಿಧ ಊರುಗಳಿಗೆ ಅವರಿಗೆ ವರ್ಗವಾಗಿತ್ತು. ಆಗೆಲ್ಲ ಅವರ ಜೊತೆ ಹೋದ ನಮ್ಮ ವಿದ್ಯಾಭ್ಯಾಸಕ್ಕೆ ತೊದರೆಯಾದದ್ದನ್ನು ಅವರು ಕಂಡಿದ್ದರು. ಈ ತೊಂದರೆ ಪರಿಹರಿಸಲಿಕ್ಕಾಗಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಅಧ್ಯಾಪಕ ವೃತ್ತಿಯನ್ನು ಅವರು ಆರಿಸಿಕೊಂಡರು. ಇದರಿಂದಾಗಿ ತಂಜಾವೂರಿನ ಮೆಡಿಕಲ್ ಸ್ಕೂಲಿಗೆ ಅವರ ನೇಮಕ ವಾಯಿತು. ಅನಂತರ ಒಂದೇ ಊರಿನಲ್ಲಿ ನೆಲೆಸಿ, ಒಂದೇ ಭಾಷೆ ಕಲಿತು ವಿದ್ಯಾಭ್ಯಾಸ ಮಾಡುವ ಅವಕಾಶ ನಮಗೆ ಒದಗಿತು. ತಂಜಾವೂರಿನಲ್ಲಿ ಏಳೂವರೆ ವರುಷ ಅಂದರೆ ೧೯೨೬ರಿಂದ ೧೯೩೩ರ ವರೆಗೆ, ನಂತರ ೧೯೩೩ರಿಂದ ೧೯೩೯ರ ವರೆಗೆ ಮದರಾಸಿನಲ್ಲಿ ಇದ್ದುದರಿಂದ ತಮಿಳು ಭಾಷೆಯಲ್ಲಿ ಕಲಿಯುವ ಅವಕಾಶವೂ ನಮಗೆ ಒದಗಿತು.

## ಬಾಲ್ಯದ ದಿನಗಳು

ತಂಜಾವೂರಿನ ನಮ್ಮ ಜೀವನದ ಸ್ವಾರಸ್ಯದ ಘಟನೆಗಳನ್ನು ಮರೆಯಲಾಗದು. ಅಲ್ಲಿ ಒಂದು ವರುಷ ಖಾಸಗಿ ಶಾಲೆಯಲ್ಲಿ ಓದಿ ನಾನು ಮತ್ತು ನನ್ನ ಅಣ್ಣಂದಿರು ಬೇರೆ ಶಾಲೆ ಸೇರಿದೆವು. ನನ್ನ ದೊಡ್ಡಣ್ಣ ಕಲ್ಯಾಣ ಸುಂದರಂ ಪ್ರೌಢಶಾಲೆಗೂ, ನಾನು ಮತ್ತು ಸುಬ್ಬರಾವ್ ಸೈಂಟ್ ಜಾರ್ಜ್ ಸ್ಪೋರ್ಟ್ಸ್ ಸ್ಕೂಲಿಗೂ ಸೇರಿದೆವು.ಮೂರನೇ ತರಗತಿಯ ಅಧ್ಯಾಪಕರೊಬ್ಬರು ಬಹಳ ಕ್ರೂರಿ. ಯಾರಿಗೂ ಅವರನ್ನು ಕಂಡರೆ ಆಗುತ್ತಿರಲಿಲ್ಲ. ಮಕ್ಕಳ ಮೇಲೆ ಬೆತ್ತ ಪ್ರಯೋಗಿಸುವುದರಲ್ಲಿ ಅವರು ನಿಸ್ಸೀಮರು. ಆ ಕೆಲಸ ಅವ್ಯಾಹತವಾಗಿ ನಡೆಯುತ್ತಿತ್ತು. ಆದರೂ ಯಾರೂ ಅವರ ಮೇಲೆ ದೂರು ಹೇಳುತ್ತಿರಲಿಲ್ಲ.ಒಮ್ಮೆ ಕೆಲವು ಹುಡುಗರು ತಂಟೆ ಮಾಡಿದರೆಂಬುದಕ್ಕಾಗಿ ಎಲ್ಲರಿಗೂ ಜೋರಾಗಿ ಏಟು ಬಾರಿಸಿದರು. ಏನೂ ಚೇಷ್ಟೆ ಮಾಡದಿದ್ದರೂ ನನ್ನ ಅಣ್ಣನಿಗೂ ಜೋರಾಗಿ ಪೆಟ್ಟು ಬಿತ್ತು. ಬಾಸುಂಡೆ ಬಂದು ಅನಂತರ ಜ್ವರದಲ್ಲಿ ನರಳುವಂತಾಯಿತು. ನನ್ನ ತಂದೆಯವರು ಶಾಲೆಯ ಮುಖ್ಯಸ್ಥರಿಗೆ ದೂರು ನೀಡಿದರು. ದೂರು ತನಿಖೆಯಾಗಿ ಆ ಅಧ್ಯಾಪಕರು ಕೆಲಸ

ಕಳೆದುಕೊಳ್ಳಬೇಕಾಯಿತು. ಅವನು ಜ್ವರದಲ್ಲಿ ಮಲಗಿದ್ದಾಗ ಪ್ರತಿದಿನವೂ ಶಾಲೆಯಿಂದ ಅನೇಕ ಮಕ್ಕಳು ಅವನನ್ನು ನೋಡಲು ಬರುತ್ತಿದ್ದರು.

**ನಾಟಕದ ಗೀಳು**

ನನ್ನ ಅಣ್ಣನಿಗೆ ಬಾಲ್ಯದಿಂದಲೇ ನಾಟಕದ ಗೀಳು. ನಮ್ಮ ತಂದೆಯವರ ಸಹೋದ್ಯೋಗಿ ಡಾ ರಾಘವಾಚಾರಿ ಅವರು ಸತ್ಯ ಹರಿಶ್ಚಂದ್ರನ ಬಗ್ಗೆ ನಾಟಕವೊಂದನ್ನು ಸಂಯೋಜಿಸಿದ್ದರು. ಅಣ್ಣನಿಗೂ ಒಂದು ಪಾತ್ರವಿತ್ತು.ಅದೇ ನಾಟಕವನ್ನು ನಮ್ಮ ಬೀದಿಯಲ್ಲಿದ್ದ ಶ್ಯಾಮಾ ಮತ್ತು ಸುಂದರಂ ಅವರ ಮನೆಯಲ್ಲಿ ಪುನಃ ಆಡಲಾಯಿತು. ಮಾಳಿಗೆಯು ನಾಟಕದ ವೇದಿಕೆಯಾಗಿತ್ತು. ಸುತ್ತಮುತ್ತಲಿನ ಹಲವಾರು ಜನರು ಬಂದಿದ್ದರು. ಅಲ್ಲಿ ನಾಟಕದಲ್ಲಿ ಅಣ್ಣನದು ಹರಿಶ್ಚಂದ್ರನ ಪಾತ್ರ. ಹರಿಶ್ಚಂದ್ರನ ಮನೆಗೆ ಋಷಿಗಳು ಬಂದಾಗ ಅಲ್ಲಿ ಗಂಡು ಮಕ್ಕಳಿಲ್ಲ ಎಂಬ ಕಾರಣ ಅವನ ಮನೆಯಲ್ಲಿ ಊಟ ಮಾಡಲು ನಿರಾಕರಿಸುತ್ತಾರೆ. ಆಗ ಹರಿಶ್ಚಂದ್ರ 'ಹಾಯ್' ಎಂದು ದೊಪ್ಪನೆ ಬೀಳಬೇಕು. ಅಣ್ಣನ ಪಾತ್ರ ಎಷ್ಟು ಅಮೋಘವಾಗಿತ್ತೆಂದರೆ ಸಭಿಕರಿಂದ 'Once more' ಕೇಳಿಬಂತು. ಹಾಗಾಗಿ ಆ ದೃಶ್ಯವನ್ನು ಪುನಃ ಅಭಿನಯಿಸಲಾಯಿತು.ಆ ನಾಟಕದಲ್ಲಿ ನನಗೂ ಒಂದು ಪಾತ್ರ ಇತ್ತು. ಲೋಹಿತಾಶ್ವನ ಪಾಠಶಾಲೆಯಲ್ಲಿ ನನ್ನದು ಅಧ್ಯಾಪಕನ ಪಾತ್ರ. ನಾನು ಕೈಯಲ್ಲಿ ಬೆತ್ತ ಹಿಡಿದಿದ್ದೆ. ಲೋಹಿತಾಶ್ವ ಒಳ್ಳೆಯ ಹುಡುಗ ಎಂಬುದನ್ನು ನಾಟಕದಲ್ಲಿ ತೋರಿಸಬೇಕಾಗಿತ್ತು. ಇತರ ಮಕ್ಕಳು ಚೇಷ್ಟೆ ಮಾಡುವುದನ್ನು ಅಭಿನಯಿಸಿದಾಗ ನಾನು ಬಲವಾಗಿ ಬೆತ್ತವನ್ನು ಪ್ರಯೋಗಿಸಿದೆ. ನನ್ನ ಬೆತ್ತದ ಏಟು ಜೋರಾಗಿ ಬಿತ್ತು. ಏಟು ತಿಂದ ಮಕ್ಕಳು ನನ್ನ ಕೈಯಿಂದ ಬೆತ್ತ ಎಳೆದು ನನ್ನ ಮೇಲೆ ಮುಗಿಬಿದ್ದರು. ಲೋಹಿತಾಶ್ವ ಅದೇ ಬೆತ್ತದಲ್ಲಿ ನನಗೆ ಬಾರಿಸಿದ! ನನಗೆ ಅಳು ಬಂದು ಕೂಡಲೇ ವೇದಿಕೆಯಿಂದ ಕಾಲ್ಕಿತ್ತೆ.ಇದೇ ನಾಟಕವನ್ನು ತನ್ನ ಮನೆಯಲ್ಲೂ ಆಡಿಸಬೇಕೆಂದು ಇನ್ನೊಬ್ಬ ಹುಡುಗ ಲಕ್ಷ್ಮೀನಾರಾಯಣನ್ ಆಹ್ವಾನಿಸಿದ. ನಾವು ಅವನಲ್ಲಿಗೆ ಹೋದೆವು. ಸಭಿಕರು ತುಂಬಿದ್ದರು. ನಾಟಕ ಶುರುವಾಯಿತು. ಆಗ ಕೆಲಸಕ್ಕೆ ಹೋಗಿದ್ದ ಆ ಮನೆಯ ಯಜಮಾನ ಮರಳಿ ಬಂದರೆಂದು ಯಾರೋ ಬೊಬ್ಬೆ ಹಾಕಿದ್ರು. ನಮ್ಮ ಉಡುಪು ಸರಂಜಾಮುಗಳೆಲ್ಲವನ್ನೂ ಬಿಟ್ಟು ಓಟ ಕಿತ್ತೆವು. ನಾಟಕ ಅರ್ಧದಲ್ಲೇ ನಿಂತಿತು.ನಮ್ಮಲ್ಲಿ ಒಂದು ಹೆಚ್.ಎಂ.ವಿ. ಗ್ರಾಮಾಫೋನ್ ಇತ್ತು. ಹಲವು ಹಾಡಿನ ಪ್ಲೇಟ್‌ಗಳಿದ್ದವು. ಪರವೂರಿನಿಂದ ನಮ್ಮಲ್ಲಿಗೆ ಬಂದ ಅತಿಥಿಗಳಿಗೆ ಪ್ಲೇಟ್‌ಗಳನ್ನು ಹಾಕಿ ಹಾಡು ಕೇಳಿಸುತ್ತಿದ್ದೆವು. ಹಾಡಿನ ಸಂಗ್ರಹದಲ್ಲಿ ಒಂದು ಹೆಂಡ ಕುಡುಕರ ಹಾಡು ಇತ್ತು. ಅದನ್ನು ಹಾಕಿ ಅಣ್ಣ ಹೆಂಡಕುಡುಕರ ಹಾಗೆ ನರ್ತಿಸಿ ತೋರಿಸುತ್ತಿದ್ದ. ಆಗ ಎಲ್ಲರೂ ನಗುತ್ತಿದ್ದರು.

**ಮದ್ರಾಸಿನ ದಿನಗಳು**

೧೯೩೩ರಲ್ಲಿ ತಂಜಾವೂರಿನ ವೈದ್ಯಕೀಯ ಶಾಲೆ ಮುಚ್ಚಲ್ಪಟ್ಟಿತು. ನನ್ನ ತಂದೆ ಯವರನ್ನು ಮದರಾಸಿಗೆ ವರ್ಗ ಮಾಡಿದರು. ಹಾಗಾಗಿ ಬಾಲ್ಯದ ದಿನಗಳನ್ನು ಕಳೆದ ತಂಜಾವೂರನ್ನು ಬಿಡಬೇಕಾಯಿತು. ಮದರಾಸಿನಲ್ಲಿ ಮುಂದಿನ ಆರೂವರೆ ವರುಷಗಳನ್ನು ಕಳೆದೆವು.ಮೈಲಾಪುರದಲ್ಲಿ ನಮ್ಮ ವಸತಿ. ಪಿ.ಎಸ್. ಹೈಸ್ಕೂಲ್ ಎಂಬ ಪ್ರಸಿದ್ಧ ಶಾಲೆಗೆ ಸೇರಿದೆವು. ಅಣ್ಣ ಐದನೇ ಫಾರ್ಮರ್ (ಹತ್ತನೇ ತರಗತಿ) ಮತ್ತು ನಾನು ಮೂರನೇ ಫಾರ್ಮರ್ (ಎಂಟನೇ ತರಗತಿ). ನಾನು ಹತ್ತರೊಟ್ಟಿಗೆ ಹನ್ನೊಂದು ಎಂಬ ಬಾಲಕನಾಗಿದ್ದರೂ ಸಣ್ಣಣ್ಣ ಅವನ ಒಳ್ಳೆಯ ಗುಣಗಳಿಂದಾಗಿ ತರಗತಿಯ ಮಕ್ಕಳಲ್ಲಿ ಪ್ರಮುಖನಾಗಿ ಕಾಣಿಸಿಕೊಳ್ಳುತ್ತಿದ್ದ.ಒಮ್ಮೆ ನಾನು ಮಕ್ಕಳ ಗುಂಪಿನೊಂದಿಗೆ ನಡೆಯುತ್ತ ಕೆಲವರನ್ನು ಹಿಂದಕ್ಕೆ ಹಾಕಿ ಮುಂದೆ ನಡೆಯಲು ಪ್ರಯತ್ನಿಸಿದಾಗ ಒಬ್ಬ ಹುಡುಗ 'ಡಬ್ಬಾ' ಎಂದು ಹೇಳುವುದು ಕೇಳಿಸಿತು. ಡಬ್ಬಾ ಎಂದರೆ ಕೆಟ್ಟ ಶಬ್ದ. ಅದರ ಅರ್ಥ ನನಗೆ ಆಗ ಗೊತ್ತಿರಲಿಲ್ಲ. ಕೆಟ್ಟ ಶಬ್ದ ಎಂದಷ್ಟೇ ಗೊತ್ತು. ಅವನು ನನ್ನನ್ನೇ ಉದ್ದೇಶಿಸಿ ಹಾಗೆ ಹೇಳಿದ್ದೆಂದು ಭಾವಿಸಿ ನಾನು ಕೋಪಗೊಂಡೆ. ಸಣ್ಣಣ್ಣ ನನ್ನ ಹಿಂದಿನಿಂದ ಬರುತ್ತಿದ್ದ. ಅವನೊಂದಿಗೆ ದೂರು ಹೇಳಿದೆ. ಸಣ್ಣಣ್ಣ ನೇರವಾಗಿ ಆ ಹುಡುಗನ ಹತ್ತಿರ ಹೋಗಿ 'ನೀನು ಏನು ಹೇಳಿದ್ದು ಇವನಿಗೆ' ಎಂದು ವಿಚಾರಿಸಿದ. ಅವನಿಗೆ ಹೇಗೆ ಉತ್ತರಿಸುವುದೆಂದು ಗೊತ್ತಾಗಲಿಲ್ಲ. ತಾನು ಏನು ಹೇಳಿದ್ದೆಂದು ಅವನಿಗೂ ನೆನಪಿಲ್ಲ. ಆದರೆ 'ಹಾಗೆ ಹೇಳಿದರೆ ನೀನೇನು ಮಾಡುವೆ?' ಎಂದು ಆತ ಎದುರಾಡಿದ. ಅಲ್ಲೇ ಮಾರ್ಗದ ಮಧ್ಯೆ ಅವರಿಬ್ಬರಿಗೂ ಹೊಕೈಯಾಯಿತು. ಆಗ ಬೇರೆಯವರು ಬಂದು ಬಿಡಿಸಿದರು. ಕೆಲವು ದಿನಗಳ ಬಳಿಕ ಅವರಿಬ್ಬರೂ

ಸ್ನೇಹಿತರಾದರು. ಇಬ್ಬರಲ್ಲೂ ದ್ವೇಷ ಉಳಿಯಲಿಲ್ಲ.ಹೈಸ್ಕೂಲ್ ಮುಗಿಸಿ ನನ್ನ ಅಣ್ಣ ಸುಬ್ಬರಾವ್ ಪಚ್ಚಪ್ಪಾಸ್ ಕಾಲೇಜಿಗೆ ಸೇರಿ ಅಲ್ಲಿ ಎರಡು ವರುಷ ಕಲಿತ. ಮುಂದೆ ಕೀಲ್ಪಾರ್ಕ್ ವೈದ್ಯಕೀಯ ಸ್ಕೂಲಿಗೆ ಸೇರಿದ. ದೊಡ್ಡಣ್ಣ ತಿಮ್ಮಪ್ಪಯ್ಯ ಗಳಿಸಿದಷ್ಟು ಉತ್ತಮ ಅಂಕ ಇವನು ಗಳಿಸಲಿಲ್ಲ. ಆದ್ದರಿಂದ ಇವನಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಗಲಿಲ್ಲ. ಹಾಗಾಗಿ ಎಲ್.ಐ.ಎಂ. ಕಲಿಯಲು ಮುಂದಾದ.ಆ ಸಮಯದಲ್ಲಿ ಆತ ತಾಯಿಗೆ ಮನೆ ಕೆಲಸದಲ್ಲಿ ಸಹಕರಿಸುತ್ತಿದ್ದ. ತರಕಾರಿ ತರುವುದು, ಜೀನಸು ತರುವುದು, ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸುವುದು... ಇತ್ಯಾದಿ. ನಮ್ಮ ಮನೆಯಲ್ಲಿ ಅಡುಗೆ ಕೆಲಸಕ್ಕೆ ಬೇರೆ ಜನರಿದ್ದರು. ಹಾಗಾಗಿ ಮನೆಯಲ್ಲಿ ಹೆಚ್ಚು ಕೆಲಸವಿರುತ್ತಿರಲಿಲ್ಲ. ಆದರೆ ನಾನು ಯಾವ ಕೆಲಸಕ್ಕೂ ಸಿಕ್ಕುತ್ತಿರಲಿಲ್ಲ. 'ಉಪಕಾರಗೇಡಿ' ಎಂಬ ಬಿರುದು ಗಳಿಸಿದ್ದೆ! ನಾವು ವರ್ಷಂಪ್ರತಿ ಊರಿಗೆ ಬೇಸಿಗೆ ರಜೆಯಲ್ಲಿ ಹೋಗಿ ಬರುತ್ತಿದ್ದೆವು. ಬರುವಾಗ ಸೆಂಟ್ರಲ್ ಸ್ಟೇಷನ್‌ನಲ್ಲಿ ಬೆಳಿಗ್ಗೆ ರೈಲಿನಿಂದಿಳಿದು ಕಾರಿನಲ್ಲಿ ಮನೆಗೆ ಬಂದು ಉಪಾಹಾರ ಮಾಡುತ್ತಿದ್ದೆವು. ಆದರೆ ಸಣ್ಣಣ್ಣನಿಗೆ ಮಾತ್ರ ಸಾಮಾನನ್ನೆಲ್ಲ ಎತ್ತಿನ ಗಾಡಿಯಲ್ಲಿ ತುಂಬಿ ಗಾಡಿಯಲ್ಲೇ ಕುಳಿತು ಮೈಲಾಪುರಕ್ಕೆ ಬರುವ ಕೆಲಸ. ಹಾಗಾಗಿ ಅವನು ಮನೆಗೆ ಬಂದು ಉಪಾಹಾರ ಮಾಡುವಾಗ ಸುಮಾರು ಮಧ್ಯಾಹ್ನ ಗಂಟೆ ಹನ್ನೆರಡಾಗುತ್ತಿತ್ತು.ಹೀಗಿರುವಾಗ ಒಮ್ಮೆ ತಾಯಿ ನನಗೆ 'ದೇವಸ್ಥಾನಕ್ಕೆ ಹಣ್ಣುಕಾಯಿ ಮಾಡಲು ನೀನು ಹೋಗಬಾರದೇ? ಅವನು ಎಷ್ಟು ಸಲ ಹೋಗುತ್ತಾನೆ?' ಎಂದರು. ನಾನು ಇದನ್ನು ಸಣ್ಣಣ್ಣನಿಗೆ ಹೇಳಿದಾಗ, 'ಭಕ್ತಿಯಿಂದ ಯಾರು ಅಲ್ಲಿಗೆ ಹೋಗುತ್ತಾರೆ? ನಾನು ಅಲ್ಲಿಗೆ ಬರುವವರನ್ನು ನೋಡಲು ಹೋಗುವುದು' ಎಂದ.ತಂದೆಯವರು ತಾನು ಶಾಲೆಗೆ ಹೋಗಲು ಬಳಸುತ್ತಿದ್ದ ಸೈಕಲನ್ನು ಸಣ್ಣಣ್ಣನಿಗೆ ಕೊಟ್ಟಿದ್ದರು. ಪ್ರತೀದಿನ ಸಂಜೆ ನಾನು ಫುಟ್‌ಬಾಲ್ ಮತ್ತು ಅವನು ಕ್ರಿಕೆಟ್ ಆಡುತ್ತಿದ್ದೆವು.ಮದರಾಸಿನಲ್ಲಿ ನನಗೂ ಅವನಿಗೂ ಓದಲು ಒಂದೇ ಕೋಣೆ. ಕೆಲವು ಸಲ ಜಗಳವಾಗಿ ನಮ್ಮೊಳಗೆ ಜಟಾಪಟಿ ಆಗುತ್ತಿತ್ತು. ನನಗೆ ಕೆಲವೊಮ್ಮೆ ಹಿಂದಿನಿಂದ ತಿವಿಯುವುದು, ಗುದ್ದುವುದು.. ಇಂತಹ ತಂಟೆಗಳನ್ನು ನನ್ನ ತಂಗಿಯರು ಮಾಡುತ್ತಿದ್ದರು. ನನ್ನ ಸಹಾಯಕ್ಕೆ ಯಾರೂ ಬರುತ್ತಿರಲಿಲ್ಲ. ಎಲ್ಲರೂ ಅವನ ಸಹಾಯಕರೇ. ಇದು ಸಾಲದೆಂಬಂತೆ ಸಂಜೆ ತಂದೆಯವರು ಬಂದಾಗ ಅವರಿಗೆ ದೂರು ಹೇಳಿ ನನಗೆ ಬೆಲ್ಟಿನಿಂದ ಏಟು ಸಿಗುವಂತೆ ಮಾಡುತ್ತಿದ್ದರು. ನಮ್ಮ ಮನೆಯಲ್ಲಿ ತಂದೆಯವರ ಕೈಯಿಂದ ಬೆಲ್ಟಿನಿಂದ ಏಟು ತಿಂದವನು ನಾನೊಬ್ಬನೇ.

**ತಂದೆಯವರ ನಿಧನಾನಂತರ**

ಮದರಾಸಿನಲ್ಲಿದ್ದಾಗ ತಂದೆಯವರು (೧೯೩೯ ನವೆಂಬರ್ ೭ರಂದು) ತೀರಿಕೊಂಡರು. ತಾಯಿ ನಮಗೆ ಬಿಡಾರ ಮಾಡಿಕೊಟ್ಟು ಊರಿಗೆ ಮರಳಿದರು. ತಂದೆಯ ಕೆಲವು ಆಪ್ತರು ಹೋಗುವುದು ಬೇಡ, ಮಕ್ಕಳ ವಿದ್ಯಾಭ್ಯಾಸ ಹಾಳಾಗುತ್ತದೆ ಎಂದರೂ ಕೇಳದೆ ಅಮ್ಮ ಅಡ್ಡೂರಿಗೆ ಹೊರಟುಹೋದಳು. ಆಗ ದೊಡ್ಡಣ್ಣ ಎಂಬಿಬಿಎಸ್ ಕೊನೆಯ ವರುಷದಲ್ಲಿ ಕಲಿಯುತ್ತಿದ್ದ. ಇನ್ನು ಒಂದು ವರುಷ ಓದಿ ಹೌಸ್ ಸರ್ಜನ್ ಮುಗಿಸಿದರೆ ಆತನ ವಿದ್ಯಾಭ್ಯಾಸ ಮುಗಿಯಲಿತ್ತು. ನಾನು ಎಫ್.ಎ.ಯಲ್ಲಿ ಓದುತ್ತಿದ್ದೆ. ಸಣ್ಣಣ್ಣ ಎಲ್.ಐ.ಎಂ. ಓದುತ್ತಿದ್ದ. ನಾನು ಮತ್ತು ದೊಡ್ಡಣ್ಣ ಒಂದು ರೂಂ ಮಾಡಿ ವಿದ್ಯಾಭ್ಯಾಸ ಮುಂದುವರಿಸಿದೆವು. ಸಣ್ಣಣ್ಣ ಅವನ ಕಾಲೇಜಿನ ಸಹಪಾಠಿಗಳೊಂದಿಗೆ ಇರುತ್ತಿದ್ದ.ನಮಗೆ ಖರ್ಚಿಗೆ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಸಿಗುತ್ತಿತ್ತು. ಸಣ್ಣಣ್ಣ ಕಾಲೇಜು ದಿನಗಳಲ್ಲಿ ದುಂದುವೆಚ್ಚ ಮಾಡದೆ ಮಿತವ್ಯಯದಲ್ಲಿ ಜೀವನ ನಡೆಸುತ್ತಿದ್ದ. ೧೯೪೦ರ ಮಾರ್ಚ್‌ನಲ್ಲಿ ನಾನು ಮಂಗಳೂರಿಗೆ ಬಂದೆ. ನನ್ನ ತಮ್ಮ ಊರಿಗೆ ಬಂದು ಮಂಗಳೂರಿನಲ್ಲಿ ಕಲಿಯಲು ಶುರು ಮಾಡಿದ. ದೊಡ್ಡಣ್ಣನ ವಿದ್ಯಾಭ್ಯಾಸ ಮುಗಿದಿತ್ತು. ಇನ್ನು ಕ್ಲಿನಿಕ್ ತೆರೆಯಲು ತಾನು ತಂದೆಯವರ ಉಳಿತಾಯದ ಹಣ ಖರ್ಚು ಮಾಡಿದರೆ ಸೋದರ ಸೋದರಿಯರ ವಿದ್ಯಾಭ್ಯಾಸಕ್ಕೆ ತೊಂದರೆಯಾದೀತೆಂದು ಆತ ಸೈನ್ಯಕ್ಕೆ ಸೇರಿದ.ತಂದೆಯವರ ನಿವೃತ್ತಿ ವೇತನ ಮತ್ತು ಇತರ ಅಲ್ಪಸ್ವಲ್ಪ ಉಳಿತಾಯದ ಹಣವನ್ನು ಅಮ್ಮ ಬ್ಯಾಂಕಿಗೆ ಹಾಕುತ್ತಿರಲಿಲ್ಲ. ಅವರು ಅದರಿಂದ ಕೃಷಿಭೂಮಿ ಖರೀದಿಸಿ ಗೇಣಿ ವಸೂಲಿ ಮಾಡಿ ಬದುಕಬೇಕೆಂದು ನಿಶ್ಚಯಿಸಿದ್ದರು. ಇದಕ್ಕೆ ಸಣ್ಣಣ್ಣನ ಬೆಂಬಲವಿತ್ತು. ಇದರಿಂದಾಗಿ ನಮ್ಮ ಒಟ್ಟು ಉತ್ಪತ್ತಿ ಸುಮಾರು ೪೫೦ ಮುಡಿ ಅಕ್ಕಿ ಗೇಣಿ ಬರುವಷ್ಟಾಯಿತು. ಹಿಂದೆ ಅದು ೧೫೦ ಅಕ್ಕಿ ಮುಡಿಗಳಾಗಿತ್ತು. ಈ ಹಣದಿಂದ ನನ್ನ ತಾಯಿ ಮನೆ ಖರ್ಚನ್ನು, ಮಕ್ಕಳ ವಿದ್ಯಾಭ್ಯಾಸವನ್ನು ನಿಭಾಯಿಸಲು ಸಾಧ್ಯವಾಯಿತು.ಮದರಾಸಿನಲ್ಲಿ ಅವನಿಗೆ ರಾಜಕೀಯದ ಗಂಧಗಾಳಿ ಇರಲಿಲ್ಲ. ಆಗ ಎರಡನೇ ಮಹಾಯುದ್ಧ ಶುರುವಾಗಿತ್ತು. ಚಳುವಳಿ ಜೋರಾಗಿತ್ತು. ಆದರೆ ಅವನು ಅದೆಲ್ಲದರಿಂದ ದೂರವಾಗಿದ್ದ.

**ರಾಜಕೀಯದ ಅಲೆಗಳಲ್ಲಿ**

ಇತ್ತ ಮಂಗಳೂರಿನಲ್ಲಿ ಬೀಸುತ್ತಿದ್ದ ರಾಜಕೀಯದ ಅಲೆಯಿಂದಾಗಿ ನಾನು ಇರುತ್ತಿದ್ದ ಹಾಸ್ಟೆಲ್‌ನಲ್ಲಿ ರಾಜಕೀಯ ಚಟುವಟಿಕೆ ಜೋರಾಯಿತು. ನಾನು ಇದನ್ನು ಸೇರಿಕೊಂಡೆ. ಕಮ್ಯೂನಿಸ್ಟ್ ಸಿದ್ಧಾಂತಗಳು ಮತ್ತು ಅದರಿಂದ ಪ್ರೇರಿತವಾದ ಕಾರ್ಯಗಳಲ್ಲಿ ನಾನು ಕಟ್ಟುಬಿದ್ದೆ.ಒಮ್ಮೆ ಸಣ್ಣಣ್ಣ ಮಂಗಳೂರಿಗೆ ಬಂದಿದ್ದಾಗ ನನ್ನ ಹಾಸ್ಟೆಲ್ ರೂಂನಲ್ಲಿ ತಂಗಿದ್ದ. ರಾತ್ರಿಯಿಡೀ ನನ್ನ ರಾಜಕೀಯ ಜೀವನದ ಬಗ್ಗೆ ಚರ್ಚಿಸಿದ್ದ. ಬೆಳಿಗ್ಗೆ ಅವನೊಂದಿಗೆ ರೈಲ್ವೇ ನಿಲ್ದಾಣಕ್ಕೆ ನಾನೂ ಹೊರಟೆ. ಹೋಗುತ್ತಿದ್ದಾಗ ಕಮ್ಯೂನಿಸ್ಟ್ ಪತ್ರಿಕೆಯೊಂದನ್ನು ಕೊಂಡು ಕೊಳ್ಳಲು ವಿನಂತಿಸಿದೆ. ರಾಜಕೀಯದ ಅರಿವಿಲ್ಲದ ಅವನು ನಿರಾಕರಿಸಿದ. ಇದರಿಂದಾಗಿ ನನಗೆ ಬೇಸರವಾಗಿತ್ತು.ರೈಲ್ವೇನಿಲ್ದಾಣ ಸಮೀಪಿಸುತ್ತಿದ್ದಂತೆ ಆತನ ಚಪ್ಪಲಿಯ ಬಾರ್ ಕಡಿಯಿತು. ಚಪ್ಪಲಿ ಹಾಕಿಕೊಂಡು ಹೋಗುವ ಸ್ಥಿತಿಯಲ್ಲಿರಲಿಲ್ಲ. ಕೈಯಲ್ಲಿ ಹಿಡಿದುಕೊಂಡು ಹೋಗಬೇಕಾಗಿತ್ತು. ಆಗ ಅವನಿಗೆ ನನ್ನ ಪತ್ರಿಕೆ ನೆನಪಾಗಿ 'ಒಂದು ಪೇಪರ್ ಕೊಡು' ಎಂದು ಕೇಳಿದ. ನಾನು ಕೊಡುವುದಿಲ್ಲವೆಂದು ಹೇಳಿದೆ. 'ಹಣ ಕೊಡುತ್ತೇನೆ, ಕೊಡು' ಎಂದು ಒತ್ತಾಯಿಸಿದ. ನೀನು ಎಷ್ಟೇ ಹಣ ಕೊಟ್ಟರೂ ನಿನಗೆ ಕೊಡುವುದಿಲ್ಲ ಎಂದು ನಾನು ಪಟ್ಟು ಹಿಡಿದೆ. ಇದರಿಂದಾಗಿ ನನ್ನ ಪಕ್ಷನಿಷ್ಠೆಯ ಕುರಿತು ಆತನಿಗೆ ತಿಳಿದಿರಬೇಕು. ಮತ್ತೆ ಆತ ಒತ್ತಾಯಿಸಲಿಲ್ಲ. ಅದಾದ ಬಳಿಕ ತಾಯಿಯ ಬಳಿ ಹೇಳಿ ನನ್ನನ್ನು ತಿದ್ದಲು ಅವನು ಪ್ರಯತ್ನಿಸುತ್ತಿದ್ದ.ಪಕ್ಷದ ಮೇಲಿನ ನಿರ್ಬಂಧ ತೆಗೆಯಲಾಯಿತು. ಕಮ್ಯೂನಿಸ್ಟ್ ಪಕ್ಷದ ಕೆಲಸ ಚುರುಕಿನಿಂದ ಆರಂಭವಾಯಿತು. ಪಕ್ಷಕ್ಕೆ ಬೇಕಾದ ಅರ್ಥಿಕ ಮೂಲಕ್ಕಾಗಿ ಪಕ್ಷದ ನಿಧಿಯೊಂದನ್ನು ರೂಪಿಸಲಾಯಿತು. ಹಲವು ಅಭಿಮಾನಿಗಳು, ಪ್ರೋತ್ಸಾಹಕರು, ಪಕ್ಷ ಕಾರ್ಯಕರ್ತರು ಸಾಧ್ಯವಾದಷ್ಟು ನೆರವಾದರು. ರಾಜೇಶ್ವರ ರಾಯರು ಅವರ ಪೂರ್ಣ ಆಸ್ತಿ ಮಾರಿ, ಅವರ ಹೆಂಡತಿಗೆ ಜೀವನಕ್ಕಾಗಿ ಆರು ಎಮ್ಮೆ ತೆಗೆದುಕೊಟ್ಟು ಉಳಿದೆಲ್ಲಾ ಸಂಪತ್ತನ್ನು ಪಕ್ಷಕ್ಕೆ ಧಾರೆಯೆರೆದರು.ಈ ವಿಚಾರ ನನಗೆ ಸ್ಫೂರ್ತಿ ನೀಡಿತು. ನನ್ನಲ್ಲಿ ಹಣ ಎಲ್ಲಿಂದ? ನಮ್ಮ ಕುಟುಂಬದ ಆಸ್ತಿ ಇದೆ. ಹಾಗಾಗಿ ಅಮ್ಮನ ಹತ್ತಿರ ನನ್ನ ಪಾಲಿನ ಬಾಬ್ತು ಕೇವಲ ಮೂರು ಸಾವಿರ ಕೇಳಿದೆ. ನನ್ನೆಲ್ಲಾ ಹಕ್ಕನ್ನು ನಿಮಗೆ ಬರೆದುಕೊಡುತ್ತೇನೆ ಎಂದಿದ್ದೆ. ಅಮ್ಮ 'ಆಗುವುದಿಲ್ಲ' ಎಂದರು.

**ರಾಜಕೀಯಕ್ಕೆ ಧುಮುಕಿದ ಸಣ್ಣಣ್ಣ**

ರಾಜಕೀಯದ ಗಂಧಗಾಳಿಯೂ ಇಲ್ಲದ, ಅದರ ಮೇಲೆ ಆಸ್ಥೆಯೂ ಇಲ್ಲದ ಸುಬ್ಬರಾವ್ ಏಕಾಏಕಿ ರಾಜಕೀಯ ರಂಗಕ್ಕೆ ಧುಮುಕಿದ. ೧೯೪೨ರ ಚಳುವಳಿ ಅವನ ಮೇಲೆ ಯಾವುದೇ ಪ್ರಭಾವ ಬೀರಿರಲಿಲ್ಲ. ೧೯೪೩ರಲ್ಲಿ ಗಾಂದೀಜಿ ಉಪವಾಸ ಸತ್ಯಾಗ್ರಹ ಪ್ರಾರಂಬಿಸಿದಾಗ ಅವನ ಕಾಲೇಜಿನ ಹಾಗೂ ಮದ್ರಾಸಿನ ಕಾಲೇಜುಗಳ ವಿದ್ಯಾರ್ಥಿ ಸಮುದಾಯ ಸತ್ಯಾಗ್ರಹಕ್ಕೆ ಇಳಿಯಿತು. ಗಾಂದೀಜಿಯವರ ಬಿಡುಗಡೆಗೆ ಒತ್ತಾಯಿಸಿ ತಂಡ ತಂಡವಾಗಿ ಸತ್ಯಾಗ್ರಹ ಮಾಡಬೇಕೆಂದು ಅವರು ನಿರ್ಣಯಿಸಿದ್ದರು. ಒಂದೆರಡು ತಂಡಗಳವರು ಬಂದಿತರಾಗಿ ಸತ್ಯಾಗ್ರಹ ಮುಂದುವರಿಸಲು ಸ್ವಯಂಸೇವಕರ ಕೊರತೆ ಕಂಡಾಗ ಸಣ್ಣಣ್ಣನಿಗೆ ಸಿಟ್ಟು ಬಂತು. ಅವನೂ ಸತ್ಯಾಗ್ರಹಕ್ಕೆ ಧುಮುಕಿದ. ಹಲವರೊಂದಿಗೆ ಅಣ್ಣನೂ ಬಂಧನಕ್ಕೊಳಗಾದನು. ಅವನನ್ನು ಅಲಿಪುರಂ ಜೈಲಿಗೆ ಒಯ್ಯಲಾಯಿತು.ಅವನು ಅಲ್ಲಿದ್ದಾಗ ಒಂದು ಸ್ವಾರಸ್ಯ ನಡೆಯಿತು. ಅಲಿಪುರಂ ಜೈಲಿನಲ್ಲಿ ಸಾವಿರಾರು ರಾಜಕೀಯ ಕೈದಿಗಳಿಗೆ ಬೆಳಿಗ್ಗೆ ಸುಮಾರು ಒಂಬತ್ತು ಗಂಟೆಗೆ ಜೈಲಿನ ಆವರಣ ದೊಳಗಿನ ಕಂಪೌಂಡ್‌ನಲ್ಲಿ ಅಡ್ಡಾಡಲು ಅವರವರ ಕೋಣೆಗಳಿಂದ ಹೊರಬಿಡುತ್ತಿದ್ದರು. ಆ ಸಮಯದಲ್ಲೇ ಸ್ನಾನ ಮಾಡಬೇಕಿತ್ತು. ಎಲ್ಲರೂ ನಳ್ಳಿಯ ಹತ್ತಿರ ಜಮಾಯಿಸಿದ್ದರು. ಕೆಲವರಿಗೆ ಸ್ನಾನ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಹೀಗಿರುವಾಗ ಒಂದು ದಿನ ಎಲ್ಲರನ್ನೂ ಹೊರಗೆ ಬಿಟ್ಟಾಗ ಯಾರೂ ನಳ್ಳಿಯ ಹತ್ತಿರ ಜಮಾಯಿಸದಿದ್ದುದನ್ನು ಕಂಡು ಅಣ್ಣನಿಗೆ ಕುತೂಹಲ ವಾಯಿತು. ಕೂಡಲೇ ಬೈರಾಸ್ ಹಿಡಿದುಕೊಂಡು ನಳ್ಳಿಯ ಹತ್ತಿರ ಹೋಗಿ ಸ್ನಾನ ಮಾಡುವಾಗ ಶುರುವಾಯಿತು - ಧೂಳಿನ ಸುಂಟರಗಾಳಿ. (ಅದು ಬಳ್ಳಾರಿ ಜಿಲ್ಲೆಯ ವಾತಾವರಣದಲ್ಲಿ ಉಂಟಾಗುವ ವೈಪರೀತ್ಯ). ಆಗ ಆಗಸದಲ್ಲಿ ಮೋಡ ಕವಿದಿತ್ತು. ಅವನ ಮೈಯೆಲ್ಲಾ ಧೂಳು ಮೆತ್ತಿಕೊಂಡಿತು. ಇತರರು ಯಾಕೆ ಸ್ನಾನಕ್ಕೆ ಹೋಗಲಿಲ್ಲವೆಂಬುದು ಆಗ ಆತನಿಗೆ ತಿಳಿಯಿತು.ಮೂರು ತಿಂಗಳುಗಳ ಕಠಿಣ ಶಿ◌ೆಯ ನಂತರ ಅವನ ಬಿಡುಗಡೆಯಾಯಿತು. ಕೂಡಲೇ ಅವನು ಅಡ್ಡೂರಿಗೆ ಬಂದ. ಅದನ್ನು ತಿಳಿದು ನಾನೂ ಅಡ್ಡೂರಿಗೆ ಧಾವಿಸಿದೆ.ನನಗೂ ಅವನಿಗೂ ಬಿಸಿಬಿಸಿ ವಾದ ನಡೆಯಿತು. ಅವನು

ನಮ್ಮ ಕಮ್ಯೂನಿಸ್ಟ್ ಪಕ್ಷವನ್ನು ಜರೆದ. ನೀವು ದ್ರೋಹಿಗಳೆಂದು ಹೀಗಳೆದ. ನಾನೂ ಸುಮ್ಮನಿರಲಿಲ್ಲ. ಹೊರಗಿನಿಂದ ನೋಡುವವರಿಗೆ ನಾವು ಬಡಿದಾಡಿಕೊಂಡಂತೆ ಭಾಸವಾಗುತ್ತಿತ್ತು. ಹೀಗೆ ಮಾತನಾಡುವಾಗ ನನ್ನ ಅಮ್ಮ 'ನೀನು ಇವನಿಗೆ ಸ್ವಲ್ಪ ಬುದ್ಧಿ ಹೇಳು ಸುಬ್ಬರಾವ್. ಅವನಿನ್ನೂ ಸಂಪಾದನೆಯ ದಾರಿಯಲ್ಲಿ ಹೋಗುವಂತೆ ಕಾಣುವುದಿಲ್ಲ. ಅವನಿಗೆ ಹಣ ಕೊಡಲು ನನ್ನಿಂದ ಸಾಧ್ಯವಿಲ್ಲ. ಗೇಣಿಯೂ ಸರಿಯಾಗಿ ಬರುತ್ತಿಲ್ಲ' ಎಂದು ಒಗ್ಗರಣೆ ಹಾಕುತ್ತಿದ್ದಳು. 'ಗೇಣಿ ಯಾಕೆ ಬರುವುದಿಲ್ಲ?' ಎಂದು ಅಣ್ಣ ಕೇಳಿದ. 'ಅವರಿಗೆ ಹೊಟ್ಟೆತುಂಬ ಊಟ ಮಾಡಬೇಕು' ಎಂದರು ಅಮ್ಮ. ಅದನ್ನು ಕೇಳಿ ನನಗೂ ಆಶ್ಚರ್ಯವಾಯಿತು. 'ಹೊಟ್ಟೆತುಂಬ ತಿಂದರೆ ಗೇಣಿ ಕೊಡುವುದು ಕಷ್ಟವೇ?' ಎಂದು ಕೇಳಿದೆ. ಅಮ್ಮ ಸತ್ಯವಾದುದನ್ನೇ ಹೇಳಿದ್ದಳು, 'ಸಮಾ ಊಟ ಮಾಡಿದರೆ ಗೇಣಿ ಹೇಗೆ ಕೊಡಲಿಕ್ಕಾಗುತ್ತದೆ?' ಎಂದು. ನಾನು ಕಮ್ಯೂನಿಸ್ಟ್ ಸಿದ್ಧಾಂತವನ್ನು ಒಪ್ಪಿದವನಾದ್ದರಿಂದ ಅದನ್ನು ಕೇಳಿ ಸುಮ್ಮನಾದೆ. ನನ್ನ ಮುಖ ನೋಡಿ ಅಣ್ಣನೂ ಚಿಂತಿಸತೊಡಗಿದ. ಆಗಿನ ಸಮಾಜದ ಆಗುಹೋಗುಗಳು ಮತ್ತು ಕಷ್ಟಸುಖಗಳು ಅದೇ ಮೊದಲ ಬಾರಿಗೆ ಅವನಿಗೆ ಮನವರಿಕೆಯಾದಂತಿತ್ತು.

### ಮಂಜೇಶ್ವರದಲ್ಲಿ ವೃತ್ತಿ ಆರಂಭ

ಮುಂದೆ ಅಣ್ಣ ಮಂಜೇಶ್ವರದಲ್ಲಿ ಡಿಸೆಂಬರ್ ೧೯೪೩ರಲ್ಲಿ ಕ್ಲಿನಿಕ್ ತೆರೆದು ವೈದ್ಯಕೀಯ ಸೇವೆ ಮುಂದುವರಿಸಿದ. ನಾವು ಒಟ್ಟು ಸೇರಿದಾಗ ಮೊದಲಿನಂತೆ ಚರ್ಚೆ ಆಗುತ್ತಿತ್ತು. ಆಗ ನೆಹರೂ ಮೈದಾನದ ಅಂಚಿನಲ್ಲಿದ್ದ ಪಕ್ಷದ ಕಚೇರಿಯಲ್ಲಿ ಹೆಚ್ಚು ಸಮಯವಿರುತ್ತಿದ್ದೆ. ಮುಖ್ಯವಾಗಿ ಅಲ್ಲಿ ಶಾಂತಾರಾಂ ಪೈ, ಬಿ.ವಿ. ಕಕ್ಕಿಲ್ಲಾಯರು ಇರುತ್ತಿದ್ದರು. ಅಣ್ಣನಿಗೆ ಅವರೊಂದಿಗೂ ಸಂಪರ್ಕವಾಯಿತು. ಅಣ್ಣನು ಆಗಾಗ್ಗೆ ಬಂದಾಗ ರಾಜಕೀಯ ಕುರಿತು ಬಿಸಿಬಿಸಿ ವಿಚಾರ ವಿನಿಮಯವಾಗುತ್ತಿತ್ತು.ಮಂಜೇಶ್ವರದಲ್ಲಿ ಸಣ್ಣಣ್ಣ ಕ್ರಿಕೆಟ್ ಮುಂತಾದ ಕ್ರೀಡೆಗಳಲ್ಲಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಯುವಕರಿಗೆಲ್ಲಾ ಮುಂದಾಳಾಗಿದ್ದನು. ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದನು. ಮಂಗಳೂರಿನಲ್ಲಿ ಸನ್ಯಾಸಿಗುಡ್ಡೆಯಲ್ಲಿ ನಮ್ಮ ಬಿಡಾರ ಇತ್ತು. ೧೯೪೭ರ ನಂತರ ಅಮ್ಮ ಅಡ್ದೂರಿಗೆ ಹೋಗಿ ನೆಲೆಸಿದಳು. ಹಾಗಾಗಿ ನಾವು (ನಾನು ಮತ್ತು ಪಕ್ಷದ ಸದಸ್ಯರು) ಅಲ್ಲೇ ಸಣ್ಣ ಮನೆಯೊಂದಕ್ಕೆ ಬಿಡಾರ ಬದಲಿಸಿದ್ದೆವು. ಹೊಳ್ಳರು, ಕಕ್ಕಿಲ್ಲಾಯರು, ಶಾಂತಾರಾಂ ಅಲ್ಲದೆ ಹಲವು ಪಕ್ಷದ ಮುಖಂಡರು ಆಗಾಗ್ಗೆ ಅಲ್ಲಿಗೆ ಬರುತ್ತಿದ್ದರು. ಅಣ್ಣನೂ ಬರುತ್ತಿದ್ದ. ಹಾಗಾಗಿ ಅಣ್ಣನಿಗೆ ಅವರೆಲ್ಲರ ಪರಿಚಯವಾಗಿತ್ತು.ಆಗ ಕಮ್ಯೂನಿಸ್ಟ್ ಪಕ್ಷದ ಧೋರಣೆ ಗಡುಸಾಗಿತ್ತು. ಎರಡನೇ ಮಹಾಯುದ್ಧ ಮುಗಿದಾಗ ಸೋವಿಯತ್ ರಷ್ಯಾ ಅಜೇಯವಾಗಿ ಉಳಿದು, ಅದು ನಾಶವಾಗುವುದೆಂದು ನಂಬಿದ್ದ ಸಾಮ್ರಾಜ್ಯಶಾಹಿ ಜಗತ್ತಿಗೆ ನಿರಾಶೆಯಾಯಿತು. ಸೋವಿಯತ್ ರಷ್ಯದ ಸ್ಫೂರ್ತಿಯಿಂದ ಜಗತ್ತಿನಾದ್ಯಂತ ಕಾರ್ಮಿಕರ ಮತ್ತು ವಸಾಹತು ಜನರ ಹೋರಾಟ ಹುರುಪುಗೊಂಡಿತು. ಭಾರತದಲ್ಲಿ ಹೋರಾಟ ಚುರುಕಾಯಿತು. ಇದರಲ್ಲಿ ಕಮ್ಯೂನಿಸ್ಟ್ ಪಕ್ಷವು ಮುಂಚೂಣಿಯಲ್ಲಿತ್ತು. ಹಲವರು ಹೋರಾಟಗಳಲ್ಲಿ ನೇತೃತ್ವ ವಹಿಸಿದರು. ನಾವಿಕರ ಬಂಡಾಯ, ಅಂಚೆ ಮುಷ್ಕರ, ಐ.ಎನ್.ಐ. ಕೈದಿಗಳ ಬಿಡುಗಡೆ ಮುಂತಾದ ಹೋರಾಟಗಳು ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ನಾಯಕರಿಗೂ ಚಳಿ ಹುಟ್ಟಿಸಿತು. ಕಾಂಗ್ರೆಸ್ ಸರಕಾರವು ಕಮ್ಯೂನಿಸ್ಟರ ಹುಟ್ಟಡಗಿಸುವ ಛಲ ಕೈಗೊಂಡಿತ್ತು. ಕೆಲವರನ್ನು ಜೈಲಿಗೆ ಹಾಕುವ ಕಾರ್ಯ ಭರದಿಂದ ಸಾಗುತ್ತಿತ್ತು. ಕೆಲವರು ಭೂಗತರಾದರು. ಈ ದಬ್ಬಾಳಿಕೆಯನ್ನು ಸಣ್ಣಣ್ಣ ಸುಬ್ಬರಾವ್ ಸಹಿಸುತ್ತಿರಲಿಲ್ಲ. ಇದನ್ನು ಖಂಡಿಸುತ್ತಿದ್ದ. ಸರಕಾರದ ಈ ಧೋರಣೆಗಳಿಂದ ಆತನಿಗೆ ಕಾಂಗ್ರೆಸ್ ಮೇಲಿನ ವ್ಯಾಮೋಹ ಕಡಿಮೆಯಾಗತೊಡಗಿತು.

### ಕಮ್ಯುನಿಸ್ಟ್ ಚಳವಳಿಗೆ ರಂಗ ಪ್ರವೇಶ

ಡಾ. ಸುಬ್ಬರಾವ್ ವೈದ್ಯವೃತ್ತಿ ಆರಂಬಿಸಿದ ಮಂಜೇಶ್ವರ ಪಟ್ಟಣ ಕಾಸರಗೋಡು ಪ್ರದೇಶದಲ್ಲಿದೆ. ಅಲ್ಲಿ ರೈಲುನಿಲ್ದಾಣವಿದ್ದರೂ ಅದು ಹಿಂದುಳಿದ ಪ್ರದೇಶವಾಗಿತ್ತು. ಬಹುಪಾಲು ಜನರು ಅನಕ್ಷರಸ್ಥರು ಹಾಗೂ ಸಾಮಾಜಿಕವಾಗಿ ಹಿಂದುಳಿದವರು. ಅಲ್ಲಿನ ರೈತರು ಹಾಗೂ ಕೃಷಿ ಕಾರ್ಮಿಕರು ಭೂಮಾಲಿಕರ ಗುಲಾಮರಂತೆ ಜೀವಿಸುತ್ತಿದ್ದರು. ಕಯ್ಯೂರಿನಲ್ಲಿ ಭೂಮಾಲಿಕರ ವಿರುದ್ಧ ಸ್ವಾತಂತ್ರ್ಯ ಸಮರ ಸೇನಾನಿಗಳು ನಡೆಸಿದ ಹೋರಾಟ ದಕ್ಷಿಣಭಾರತದಲ್ಲೇ ಸುದ್ದಿಯಾಗಿದ್ದರೂ ಮಂಜೇಶ್ವರಕ್ಕೆ ಅದರ ಬಿಸಿ ತಟ್ಟಿರಲಿಲ್ಲ. ಆದ್ದರಿಂದಲೇ ಭೂಮಾಲೀಕರಿಂದ ರೈತರ ಶೋಷಣೆ ರಾಜಾರೋಷವಾಗಿ ನಡೆಯುತ್ತಿತ್ತು. ಒಕ್ಕಲುಗಳು ಸಲ್ಲಿಸಿದ ಗೇಣಿಗೆ ಭೂಮಾಲೀಕರು ರಶೀದಿ ನೀಡುತ್ತಿರಲಿಲ್ಲ. ಬೆಳೆ

ನಾಶವಾಗಿ ಗೇಣಿ ಕೊಡದಿದ್ದರೂ ಒಕ್ಕಲೆಬ್ಬಿಸುತ್ತಿದ್ದರು. ಪ್ರತಿಭಟಿಸಿದವರ ಮೇಲೆ ದೈಹಿಕ ಹಲ್ಲೆ ನಡೆಸುತ್ತಿದ್ದರು. ಕೂಲಿಕಾರ್ಮಿಕರ ಸ್ಥಿತಿಯೂ ಶೋಚನೀಯವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ರೈತರನ್ನೂ ಕೂಲಿಕಾರ್ಮಿಕರನ್ನೂ ಸಂಘಟಿಸಲು ದೀರ ನೇತಾರನೊಬ್ಬನ ಅಗತ್ಯವಿತ್ತು.ಈ ಹೊತ್ತಿನಲ್ಲಿ, ೧೯೫೨ರಲ್ಲಿ ಮಂಜೇಶ್ವರದ ಎಸ್.ಎ.ಟಿ. ಹೈಸ್ಕೂಲಿಗೆ ಅಧ್ಯಾಪಕರಾಗಿ ರಾಮಪ್ಪ ಮಾಸ್ತರರ ಆಗಮನ. ಊರಿನವರನ್ನು ಬೇಗನೇ ಪರಿಚಯ ಮಾಡಿಕೊಂಡ ರಾಮಪ್ಪ ಮಾಸ್ಟರ್ ಕಮ್ಯುನಿಸ್ಟ್ ಪಾರ್ಟಿಯ ಕಾರ್ಯಕರ್ತರು. ಅವರು ಡಾ. ಸುಬ್ಬರಾಯರ ನಾಯಕತ್ವ ಗುಣಗಳನ್ನು ಗುರುತಿಸಿದರು. ರೈತರ ಹಾಗೂ ಕೂಲಿಕಾರ್ಮಿಕರ ಸಂಘಟನೆಗೆ ಡಾ. ಸುಬ್ಬರಾಯರೇ ಮುಂದಾಳುತನ ವಹಿಸಬೇಕೆಂದು ನಿಧಾನವಾಗಿ ಮನವೊಲಿಸಿದರು. ರೈತರನ್ನು ಆಗಿನ ಕಾಲದಲ್ಲಿ ಸಂಘಟಿಸುವುದು ಸುಲಭವಾಗಿರಲಿಲ್ಲ. ರೈತ ಸಂಘಟನೆಗೆ ಸೇರಿದರೆ ಧನಿಗಳು ಒಕ್ಕಲೆಬ್ಬಿಸುತ್ತಾರೆಂದು ಹೆದರುತ್ತಿದ್ದ ರೈತರಲ್ಲಿ ಆತ್ಮವಿಶ್ವಾಸ ತುಂಬಬೇಕಿತ್ತು. ಡಾ. ಸುಬ್ಬರಾವ್ ಈ ಸವಾಲನ್ನು ಸ್ವೀಕರಿಸಿದರು. ರೈತ ಸಂಘಟನೆ ಕಟ್ಟುವ ಮೂಲಕ ಕಮ್ಯುನಿಸ್ಟ್ ಚಳವಳಕ್ಕೆ ರಂಗಪ್ರವೇಶ ಮಾಡಿದರು.ಅವರಿಗೆ ರಾಮಪ್ಪ ಮಾಸ್ತರರ ಸಮರ್ಥ ಬೆಂಬಲ. ಇವರಿಬ್ಬರ ನಾಯಕತ್ವದಲ್ಲಿ ಸಂಘಟನೆ ಬೆಳೆಯಿತು. ಹೆಚ್ಚು ಹೆಚ್ಚು ರೈತರು ರೈತಸಂಘ ಸೇರತೊಡಗಿದರು. ಇದರಿಂದ ಆತಂಕಗೊಂಡ ಭೂಮಾಲೀಕರು ಒಕ್ಕಲು ರೈತರನ್ನೂ ಕೂಲಿ ಕಾರ್ಮಿಕರನ್ನೂ, ಪೀಡಿಸ ತೊಡಗಿದರು. ಗೂಂಡಾಗಳ ಸಹಾಯದಿಂದ ಬೆದರಿಸತೊಡಗಿದರು. ಗೇಣಿ ಬಾಕಿಯಿದೆ ಎಂಬ ನೆಪ ಹೇಳಿ, ರೈತರು ಬೆಳೆದ ಪೈರನ್ನು ಧನಿಗಳ ಗೂಂಡಾಗಳು ಕಟಾವು ಮಾಡತೊಡಗಿದರು. ಇದನ್ನು ವಿರೋದಿಸಿ ವರ್ಕಾಡಿ ಪಂಚಾಯತಿ ಮತ್ತು ಪುತ್ತಿಗೆ ಪಂಚಾಯಿತಿಗಳಲ್ಲಿ ಡಾ. ಸುಬ್ಬರಾವ್ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸಿದರು. ಕೊನೆಗೂ ಧನಿಯ ಗೂಂಡಾಗಳು ಕಟಾವು ಮಾಡಿದ್ದ ಪೈರನ್ನು ಅವನ್ನು ಬೆಳೆಸಿದ್ದ ರೈತರಿಗೇ ಹಿಂತಿರುಗಿಸುವಲ್ಲಿ ಡಾ. ಸುಬ್ಬರಾವ್ ಯಶಸ್ವಿಯಾದರು. ಇದುವೇ ಅವರ ಮುಂದಿನ ಹೋರಾಟಗಳಿಗೆ ಭದ್ರ ಬುನಾದಿಯಾಯಿತು.ಈ ಹೋರಾಟಗಳಲ್ಲಿ ಡಾ. ಸುಬ್ಬರಾಯರಿಗೆ ಹೆಗಲಿಗೆ ಹೆಗಲು ಕೊಟ್ಟು ನಿಂತವರು ಹಲವರು. ನಾರಾಯಣ ತಾಳಿತ್ತಾಯ, ಅನಂತರಾಮ ತಾಳಿತ್ತಾಯ, ನಾರಾಯಣ ಮಡಿವಾಳ, ನಾರಾಯಣ ಹೆಗ್ಗಡೆ, ದೂಮ ಮೂಲ್ಯ, ಐತಪ್ಪ ಪೂಜಾರಿ, ಮಾಂಕು ಸಾಲಿಯಾನ್ ಇತರರು. ಸಾವಿರಾರು ಮುಡಿ ಅಕ್ಕಿ ಗೇಣಿ ಪಡೆಯುತ್ತಿದ್ದ ಒಬ್ಬ ಧನಿ, ಒಕ್ಕಲು ತಂದೊಪ್ಪಿಸಿದ ಒಂದು ಅಕ್ಕಿ ಮುಡಿ ಸಡಿಲವಾಗಿತ್ತು ಎಂಬ ಕಾರಣಕ್ಕೆ ಆ ಒಕ್ಕಲಿಗೆ ಹೊಡೆದುರುಳಿಸಿದ್ದ ಕಾಲಘಟ್ಟದಲ್ಲಿ ಡಾ. ಸುಬ್ಬರಾಯರ ರೈತಪರ ಹೋರಾಟವು ಚಾರಿತ್ರಿಕ ಘಟನೆ.

**ಪ್ರತಿಭಟನೆಗಳ ಮುಂಚೂಣಿಯಲ್ಲಿ**

ಮಂಜೇಶ್ವರದಲ್ಲಿ ಪ್ರತಿಭಟನೆಗಳ ಮುಂಚೂಣಿಯಲ್ಲಿ ಇರುತ್ತಿದ್ದವರು ಡಾ. ಸುಬ್ಬರಾವ್. ಮೈನವಿರೇಳಿಸುವ ಪ್ರತಿಭಟನೆಯನ್ನು ನೆನಪು ಮಾಡಿಕೊಳ್ಳುತ್ತಾರೆ ಸಿ.ಪಿ.ಐ. ಜಿಲ್ಲಾ ಸಮಿತಿ ಸದಸ್ಯರಾದ ಪಿ. ರಾಘವನ್. ೧೯೬೪-೬೫ರಲ್ಲಿ ಕೇಂದ್ರ ಸರಕಾರದ ಜನವಿರೋದಿ ನೀತಿಯನ್ನು ಪ್ರತಿಭಟಿಸಲು 'ರೈಲುತಡೆ ಚಳವಳ'ಕ್ಕೆ ಕಮ್ಯುನಿಸ್ಟ್ ಪಾರ್ಟಿ ಕರೆ ನೀಡಿತ್ತು. ಮಂಜೇಶ್ವರದ ಕಮ್ಯುನಿಸ್ಟ್ ಕಾರ್ಯಕರ್ತರು ಕಣ್ವತೀರ್ಥದಲ್ಲಿ ರೈಲು ತಡೆ ಹಮ್ಮಿಕೊಂಡಿದ್ದರು.ರೈಲುಹಳಿಗಳಲ್ಲಿ ನೂರಾರು ಕಮ್ಯುನಿಸ್ಟ್ ಕಾರ್ಯಕರ್ತರು ನಿಂತಿದ್ದರು. ಆ ದಿನ ಬೆಳಗ್ಗೆಯೇ ರೈಲು ಅತೀ ವೇಗದಿಂದ ಕಾರ್ಯಕರ್ತರತ್ತ ನುಗ್ಗಿ ಬರತೊಡಗಿತು. ಇದನ್ನು ಕಂಡ ಒಬ್ಬಿಬ್ಬರು ಅಂಜಿ ನಿಂತಲ್ಲಿಂದ ಪಕ್ಕಕ್ಕೆ ಓಡಿಹೋದರು. ಪಿ. ರಾಘವನ್, ಬಿ.ವಿ. ರಾಜನ್, ಆದಂ ಕುಂಞ, ಪಟ್ಟ ರಾಘವ, ಹೊನ್ನೆ ನಾರಾಯಣ, ಪಿಂಟು ಮೂಲ್ಯ, ಟೈಲರ್ ನಾರಾಯಣ ಮುಂತಾದವರ ಮುಂದೆ ರೈಲಿಗೆದುರಾಗಿ ಡಾ. ಸುಬ್ಬರಾವ್ ನಿಂತಿದ್ದರು. ರೈಲು ಕ್ಷಣಕ್ಷಣಕ್ಕೂ ಹತ್ತಿರ ಬರುತ್ತಿದ್ದರೂ ಅವರು ಒಂದಿನಿತೂ ಅಂಜಲಿಲ್ಲ, ಅಳುಕಲಿಲ್ಲ. ಧೈರ್ಯದ ಹೆಬ್ಬಂಡೆಯಾಗಿ ಡಾ. ಸುಬ್ಬರಾವ್ ನಿಂತಿದ್ದರೆ, ಅಂತಿಮವಾಗಿ ರೈಲ್ವೇ ಕೆಲಸಗಾರನೊಬ್ಬ ಸಿಗ್ನಲ್ ನೀಡಿದ್ದರಿಂದಾಗಿ ರೈಲು ನಿಂತಿತು - ಕೆಲವೇ ಮೀಟರ್ ಅಂತರದಲ್ಲಿ.ಅಲ್ಲೇ ಕಾದು ನಿಂತಿದ್ದ ಮೀಸಲು ಪೊಲೀಸರು ಇವರನ್ನೆಲ್ಲ ದಸ್ತಗಿರಿ ಮಾಡಿದರು. ಆ ದಿನ ಹೊಸಂಗಡಿಯಲ್ಲೂ ಪೈವಳಿಕೆಯ ಗೋಡಣ್ಣ ಪೂಜಾರಿ ಮತ್ತು ಚೂಡಪ್ಪ ಪೂಜಾರಿ ಯವರ ನೇತೃತ್ವದಲ್ಲಿ ರೈಲುತಡೆ ನಡೆಯಿತು. ಕಣ್ವತೀರ್ಥದಲ್ಲಿ ಡಾ. ಸುಬ್ಬರಾಯರು ತೋರಿದ ಧೈರ್ಯವನ್ನು ಕಣ್ಣಾರೆ ಕಂಡ ಕಮ್ಯುನಿಸ್ಟ್ ಕಾರ್ಯಕರ್ತರೆಲ್ಲರೂ ಪುಳಕಿತರಾಗಿದ್ದರು ಎನ್ನುತ್ತಾರೆ ಪಿ. ರಾಘವನ್.

**ಜನಸೇವೆಗೆ ಸದಾ ಸಿದ್ಧ**

೧೯೭೭ರಲ್ಲಿ ಡಾಕ್ಟರ ಕ್ಲಿನಿಕ್‌ಗೆ ಹತ್ತಿರದ ಬಂಗ್ರಮಂಜೇಶ್ವರದಲ್ಲಿ ಭಾರೀ ನೆರೆ. ಹೊಳೆಯಲ್ಲಿ ನೀರು ಉಕ್ಕಿ ಹರಿದು ಸಮೀಪದ ಸಸಿಹಿತ್ಲು ಜಲಾವೃತವಾಗಿತ್ತು. ಆ ಸಂದರ್ಭ ದಲ್ಲಿ ಡಾಕ್ಟರ್ ಸುಬ್ಬರಾವ್ ಅಲ್ಲಿನ ಮನೆಗಳಿಂದ ಮಕ್ಕಳನ್ನು ಸ್ವತಃ ಎತ್ತಿಕೊಂಡು ಬಂದು, ಹಳೆಯ ವಿಜಯಾ ಬ್ಯಾಂಕಿನ ಮಾಳಿಗೆಯಲ್ಲಿ ತಾತ್ಕಾಲಿಕ ನೆರೆ ಪರಿಹಾರ ಶಿಬಿರಕ್ಕೆ ತಲಪಿಸಿ, ಹಗಲುರಾತ್ರಿಯೆನ್ನದೆ ಪರಿಹಾರಕಾರ್ಯದಲ್ಲಿ ತೊಡಗಿದ್ದನ್ನು ಬಿ.ವಿ. ರಾಜನ್ ನೆನಪು ಮಾಡಿಕೊಳ್ಳುತ್ತಾರೆ. 'ಡಾಕ್ಟರರ ಪರಿಚಯವಾದ ಬಳಿಕ ಅದೇ ಮೊದಲ ಬಾರಿ ಅವರ ಸೇವಾ ಮನೋಭಾವ ಕಂಡು ದಂಗಾಗಿ ಹೋದೆ' ಎಂದು ರಾಜನ್ ದಾಖಲಿಸಿದ್ದಾರೆ.ಕಣ್ವತೀರ್ಥದಲ್ಲಿ ನೆರೆ ಏರುತ್ತಿದ್ದಂತೆ ಡಾಕ್ಟರ್ ಕಮ್ಯುನಿಸ್ಟ್ ಪಾರ್ಟಿಯ ಕಾರ್ಯಕರ್ತ ರನ್ನು ಸಂಘಟಿಸಿದರು; ಗೋಣಿಚೀಲಗಳಲ್ಲಿ ಹೊಯಿಗೆ (ಮರಳು) ತುಂಬಿಸಿ, ಅವನ್ನು ಸಾಲಾಗಿಟ್ಟು ಅಡ್ಡಗೋಡೆ ನಿರ್ಮಿಸಿದರು. ಆ ಮೂಲಕ ಹಲವಾರು ವಸತಿ, ಸೊತ್ತು, ಜೀವಗಳನ್ನು ಉಳಿಸಿ ದುರಂತ ತಪ್ಪಿಸಿದರು ಎಂದು ಪಿ. ರಾಘವನ್ ಜ್ಞಾಪಿಸಿಕೊಳ್ಳುತ್ತಾರೆ.ಅನಂತರ ನೆರೆಪೀಡಿತರನ್ನು ಸಮೀಪದ ಎಸ್.ಎ.ಟಿ. ಹೈಸ್ಕೂಲಿನ ಶಿಬಿರಕ್ಕೆ ಸ್ಥಳಾಂತರಿಸಲಾಯಿತು. ನೆರೆ ಪರಿಹಾರ ನಿಧಿ ಸಂಗ್ರಹ, ನೆರೆಪೀಡಿತರಿಗಾಗಿ ಬಟ್ಟೆಬರೆ ಸಂಗ್ರಹ ಇತ್ಯಾದಿಗಾಗಿ ಡಾಕ್ಟರ್ ಸುಬ್ಬರಾವ್ ಎಡೆಬಿಡದೆ ಕೆಲಸ ಮಾಡಿದರು. ನೆರೆಪೀಡಿತರ ಶಿಬಿರಕ್ಕೆ ಆಗಾಗ ಭೇಟಿ ನೀಡಿ ಆಹಾರ ಸರಬರಾಜಿನ ವ್ಯವಸ್ಥೆಯನ್ನು ಸ್ವತಃ ಪರಿಶೀಲಿಸುತ್ತಿದ್ದರು. ತಮ್ಮ ಕ್ಲಿನಿಕ್‌ನ ಪಕ್ಕದ ಕೊಠಡಿಯಿಂದಲೇ ಇವೆಲ್ಲ ಪರಿಹಾರ ಕೆಲಸಗಳಿಗೆ ನಿರ್ದೇಶನ ಕೊಡುತ್ತಿದ್ದರು. ತಮ್ಮ ವೈದ್ಯವೃತ್ತಿಯ ಜೊತೆ ಜೊತೆಗೆ ಅವರು ಇಷ್ಟೆಲ್ಲ ಪರಿಹಾರ ಕೆಲಸ ಮಾಡಿದರೆಂಬುದು ನಂಬಲಸಾಧ್ಯವೆನಿಸುತ್ತದೆ.ಸುಮಾರು ೧೦ ವರುಷಗಳ ನಂತರ, ೧೯೯೬ರಲ್ಲಿ ಒಂದು ದಿನ ರಾತ್ರಿ ೨ ಗಂಟೆಗೆ ಉಪ್ಪಳ ಹೊಳೆಯ ರೈಲ್ವೇ ಸೇತುವೆ ಬಳಿ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿ, ಬೋಗಿಗಳು ಮಗುಚಿ ಬಿದ್ದವು. ಆಗ ರೈಲ್ವೆ ಇಲಾಖೆಯವರಿಗೂ ನೆನಪಾದದ್ದು ಡಾ. ಸುಬ್ಬರಾಯರು ಎಂದು ಬಿ.ವಿ. ರಾಜನ್ ದಾಖಲಿಸಿದ್ದಾರೆ. ತಕ್ಷಣವೇ ಡಾಕ್ಟರ್ ಸುಬ್ಬರಾವ್ ಇನ್ನೂ ಹಲವು ವೈದ್ಯರಿಗೆ ತಿಳಿಸಿ ಪ್ರಥಮ ಚಿಕಿತ್ಸೆಗೆ ಬೇಕಾದ ಔಷದಿ - ಸಲಕರಣೆಗಳೊಂದಿಗೆ ಅಪಘಾತದ ಸ್ಥಳಕ್ಕೆ ಧಾವಿಸಿ, ಗಾಯಗೊಂಡವರಿಗೆ ಪ್ರಥಮ ಚಿಕಿತ್ಸೆ ನೀಡಿ, ಆಸ್ಪತ್ರೆಗೆ ಕಳಿಸಿಕೊಟ್ಟರೆಂದು ಪಿ. ರಾಘವನ್ ಸ್ಮರಿಸುತ್ತಾರೆ.ಆಗ ಡಾಕ್ಟರ್ ಸುಬ್ಬರಾಯರಿಗೆ ಸುಮಾರು ೭೭ ವರುಷ ವಯಸ್ಸು. ಆ ಇಳಿವಯಸ್ಸಿನಲ್ಲಿ ಮಧ್ಯರಾತ್ರಿ ದಾಟಿದ ಹೊತ್ತಿನಲ್ಲಿ ಗಾಯಾಳುಗಳ ಶುಶ್ರೂಷೆಗಾಗಿ ತಕ್ಷಣವೇ ಧಾವಿಸಿ ಹೋದದ್ದು ಅವರ ಮಾನವೀಯತೆಗೆ ಸಾಕ್ಷಿ.ಮಂಜೇಶ್ವರದಲ್ಲಿ ಸಾಂಕ್ರಾಮಿಕ ರೋಗ ಕಾಲರಾ ಹರಡಿದಾಗ ಡಾ. ಸುಬ್ಬರಾವ್ ಸಮಾರೋಪಾದಿಯಲ್ಲಿ ಚಿಕಿತ್ಸೆ ನೀಡಿದ್ದನ್ನೂ, ಯುವಕರನ್ನು ಸಂಘಟಿಸಿ ಬಾವಿಗಳಿಗೆ ಮದ್ದು ಹಾಕಿದ್ದನ್ನೂ ಬಿ.ಎಂ. ಅನಂತ್ ನೆನಪು ಮಾಡಿಕೊಳ್ಳುತ್ತಾರೆ.ಅವರ ಸೇವಾ ತತ್ಪರತೆಗೆ ಪುರಾವೆಯಾಗಿ ಅವರ ಜೀವನದುದ್ದಕ್ಕೂ ಇಂತಹ ಹಲವಾರು ಘಟನೆಗಳನ್ನು ದಾಖಲಿಸಬಹುದು.

**ಬಹುಮುಖಿ ಡಾ. ಸುಬ್ಬರಾವ್**

ವೈದ್ಯರಾಗಿವೈದ್ಯರಾಗಿ ಡಿಸೆಂಬರ್ ೧೯೪೩ರಲ್ಲಿ ಮಂಜೇಶ್ವರಕ್ಕೆ ಕಾಲಿಟ್ಟ ಡಾ. ಸುಬ್ಬರಾವ್ 'ಡಾಕ್ಟರ್ ಎಂದರೆ ಅವರೊಬ್ಬರೇ' ಆಗಿ ಬೆಳೆದರು. ಅವರು ಅಲ್ಲಿ ಇಂದಿಗೂ ಜನಮನದಲ್ಲಿ ಡಾಕ್ಟರ್ ಆಗಿ ಉಳಿದಿದ್ದಾರೆ.ಅವರು ಹೇಗೆ ಚಿಕಿತ್ಸೆ ನೀಡುತ್ತಿದ್ದರು? ಮಂಜೇಶ್ವರದ ಶ್ರೀಮತಿ ಲಿಲ್ಲಿಬಾ ಟೀಚರ್ ಹೀಗೆ ಜ್ಞಾಪಿಸಿಕೊಳ್ಳುತ್ತಾರೆ : ಅವರು ನಮ್ಮ ನೆರೆಹೊರೆಯವರು. ಇಂಗ್ಲಿಷ್ ಮದ್ದಿನ ಡಾಕ್ಟರೆಂದು ಅವರನ್ನು ನಮ್ಮ ಮನೆಯಲ್ಲಿ ಕರೆಯುವ ರೂಡಿ. ಯಾಕೆಂದರೆ ಅವರು ಇಂಗ್ಲಿಷ್ ಮದ್ದು, ಇಂಜೆಕ್ಷನ್ ಕೊಡುವವರು. ಚಿಕಿತ್ಸೆಗಾಗಿ ಅವರ ಕ್ಲಿನಿಕ್ ಹತ್ತಿರದಲ್ಲಿ ಆಯುರ್ವೇದ ಔಷಧಾಲಯವೂ ಇತ್ತು. ಅದು 'ಅಪ್ಪಾ ಭಟ್ಟರ ಷಾಪು'! ನಮಗೆ ಕಾಯಿಲೆಯಾದಾಗ ನಾವು ಕ್ಲಿನಿಕ್‌ಗೆ ಹೋಗಿ ಔಷದಿ ತರುವ ಕ್ರಮ. ಆದರೆ ನಮ್ಮ ನೆರೆಮನೆಯಲ್ಲಿ ಹೃದಯ ಕಾಯಿಲೆಗೆ ಒಳಗಾದ ಮಹಿಳೆಯೊಬ್ಬರಿಗೆ ಡಾ. ಸುಬ್ಬರಾವ್ ಮನೆಗೆ ಬಂದು ಶುಶ್ರೂಷೆ ನೀಡುತ್ತಿದ್ದರು. ದಿನಂಪ್ರತಿ ತಪಾಸಣೆಗೂ ಬರುತ್ತಿದ್ದರು. ಆ ಮಹಿಳೆಗೆ ಮಾತ್ರೆ, ಮದ್ದು ತರಲಿಕ್ಕಾಗಿ ಆಗಾಗ ಡಾಕ್ಟರ ಕ್ಲಿನಿಕಿಗೆ ಹೋಗಬೇಕಾಗುತ್ತಿತ್ತು. ಇಂಗ್ಲಿಷ್ ಮದ್ದು, ಇಂಜೆಕ್ಷನ್ ಭಯದಿಂದ ಅವರೊಂದಿಗೆ ಹೆದರಿಕೊಂಡೇ ಮಾತಾಡುತ್ತಿದ್ದೆ. ಒಮ್ಮೆ ಕಾಲು ಉಳುಕಿದಾಗ ಅಯೋಡೆಕ್ಸ್ ಪಡೆಯಲೆಂದು ಡಾಕ್ಟರಲ್ಲಿಗೆ ಹೋಗಿದ್ದೆ. ಆ ಕಾಲದಲ್ಲಿ ಅಯೋಡೆಕ್ಸನ್ನು ಚಿಲ್ಲರೆಯಾಗಿ ಮಾರಾಟ

ಮಾಡುತ್ತಿದ್ದರು. ಡಾಕ್ಟರ್ ಅಯೋಡೆಕ್ಸ್ ಪ್ಯಾಕ್ ಮಾಡಿಕೊಟ್ಟು 'ನಾಲ್ಕು ಆಣೆಯದ್ದು ಇದೆ' ಎಂದರು. ನನ್ನ ಬಳಿ ಅಷ್ಟು ದುಡ್ಡಿಲ್ಲವೆಂದೆ. 'ಎಷ್ಟಿದೆ?' ಎಂದು ಕೇಳಿದರು. ಬರೇ ೧೦ ಪೈಸೆಯ ಪಾವಲಿ ತೋರಿಸಿದಾಗ, 'ಸಾಕು ಹೋಗು' ಎಂದರು.ನಾವೂರು ಕೃಷ್ಣ ಆಳ್ವರ ನೆನಪುಗಳು ಹೀಗಿವೆ : ಡಾಕ್ಟರ್ ಸುಬ್ಬರಾಯರು, ನನ್ನಜ್ಜ ಅಪ್ಪಯ್ಯ ಭಂಡಾರಿಗಳ ಮನೆ ವೈದ್ಯರು. ನಾನು ಮೊದಲು ಅವರನ್ನು ಕಂಡದ್ದು ಹಾಗೆ. ದುರ್ಗಿಪಳ್ಳದಿಂದ ಬೆಜ್ಜದ ಮಾಗಂದಡಿ ತನಕ ಅವರು ನಡೆದುಬರುವಾಗ ದಾರಿಯುದ್ದಕ್ಕೂ ಅವರಿಗೆ ಜನರಿಂದ ವಂದನೆ. ಆಗ ಅವರಿಂದ ಕಷ್ಟ ಸುಖಗಳ ವಿಚಾರಣೆ.ಧೂಮಾವತಿಯ ಉಯ್ಯಾಲೆಯಿರುವ ನಮ್ಮ ಚಾವಡಿಗೆ ಹತ್ತಿ, ಇರುವ ಒಂದೇ ಕುರ್ಚಿಯಲ್ಲಿ ಅಂಗಿ ತೆಗೆದು ಕುಳಿತು ಮೊದಲ ಬೊಂಡ ಕುಡಿದು ಆರಾಮವಾಗಿ ಚಿಕಿತ್ಸೆ ಶುರು ಮಾಡುತ್ತಿದ್ದರು. ಡಾಕ್ಟರರ ಆಗಮನದ ಮುಂಚಿತವಾಗಿ ಬಿಸಿನೀರು, ಸಾಬೂನು ರೆಡಿಯಾಗಿರಬೇಕು. ಸ್ವಲ್ಪ ಹೆಚ್ಚು ಕಡಿಮೆಯಾದರೆ 'ಎಂಚಿನ ಮಾರಾಯ..' ಎಂಬಲ್ಲಿಂದ ಶುರುವಾಗುವ ಅವರ ಬೈಗುಳ ಕೇಳಬೇಕಾಗುತ್ತಿತ್ತು.ಚಿಕಿತ್ಸೆ ಮುಗಿದಾದ ಕೂಡಲೇ ಎರಡನೇ ಸೀಯಾಳ ಕುಡಿದು ಹೊರಡುತ್ತಾರೆ. ನನ್ನಜ್ಜನಿಗೂ ಕೆಲವು ಸಲ ಬೇಕಾದದ್ದು ಅಷ್ಟೇ. ಡಾಕ್ಟರರು (ಡಾಕ್ಟರರೆಂದರೆ ಒಬ್ಬರೇ) ಬಂದರೆ, ಬಂದು ಮಾತನಾಡಿದರೆ, 'ಇತ್ತೆ ದಾಲ ಸೈಪುಜರ್' (ಈಗ ಅಂತ್ಯಕಾಲ ಬಂದಿಲ್ಲ) ಅಂತ ಹೇಳಿದರೆ, ಸಂತೋಷದಿಂದ ಬೊಚ್ಚುಬಾಯಿ ಬಿರಿದು ನಗುತ್ತಾ ಬೀಳ್ಕೊಡುತ್ತಾರೆ.ಮಂಗಳೂರಿನಲ್ಲಿ ಕಾಲೇಜಿಗೆ ಹೋಗುತ್ತಿದ್ದಾಗ ಒಂದು ದಿನ ನನ್ನ ಹಳೆ ರೋಗವಾದ ತಲೆಸಿಡಿತ ಆರಂಭವಾಗಿ ಒಂದು ಬದಿ ಕಾಣದಂತಾಯಿತು. ಮಂಜೇಶ್ವರದ ರೈಲ್ವೆ ಸ್ಟೇಶನ್‌ನಲ್ಲಿ ವಾಂತಿ ಮಾಡಲಾರಂಬಿಸಿದೆ. ಸೀದಾ ಡಾಕ್ಟರರಲ್ಲಿಗೆ ಹೋಗು ಎಂದು ಗೋವಿಂದಣ್ಣ ಅಪ್ಪಣೆ ಮಾಡಿದಾಗ, ಸೀದಾ ಮಾಳಿಗೆ ತಲುಪಿದೆ. ಅಲ್ಲಿ ಎಷ್ಟು ಸಲ ಕಾರಿದೆ ಎಂದು ನೆನಪಿಲ್ಲ. ಕಂಪೌಂಡರಾಗಲಿ, ನರ್ಸ್ ಆಗಲೀ ಇಲ್ಲದ ಡಾಕ್ಟರರು ಸ್ವತಃ ಸ್ವಚ್ಛಗೊಳಿಸಿದರು. ಸಾಮಾನ್ಯ ಮದ್ದಿಗೆ ಗುಣವಾಗದ್ದರಿಂದ ಕೂಡಲೇ ಒಂದು ಕಾರು ತರಿಸಿದರು. ಹೊಳ್ಳರ ಆಸ್ಪತ್ರೆಗೆ ಹೋಗುವಾಗ ಹೊಸಂಗಡಿಯಿಂದ ಯಾರಲ್ಲಿಯೋ ನನ್ನ ಮಾವ ವಿಠಲ ಶೆಟ್ಟಿಗೆ ಹೇಳಿ ಕಳುಹಿಸಿದರು. ಉಪ್ಪಳದಲ್ಲಿ ಎಡ್ಮಿಟ್ ಮಾಡಿಸಿ ಹೊಳ್ಳರೊಂದಿಗೆ ಸೇರಿ ಡ್ರಿಪ್ ಹಾಕಿದ ನಂತರ ಮಾವ ಬಂದಾಗ, ಏಳು ಗಂಟೆ ಆಗಿತ್ತು. ಅನಂತರ ಅವರು ಮಂಜೇಶ್ವರಕ್ಕೆ ಹಿಂತಿರುಗಿದರು. ಒಂದು ವಾರದ ಅನಂತರ ಚಿಕಿತ್ಸೆ ಮುಗಿದು ಹೊರಡುವಾಗ, ಒಂದು ಮಾತ್ರೆಯ ಹೆಸರು ಬರೆದಿತ್ತರು. 'ಯಾವಾಗ ನಿನಗೆ ತಲೆಸಿಡಿತ ಆರಂಭವಾದರೂ ಈ ಮಾತ್ರೆ ತಗೋ' ಎಂದು ಅವರು ಹೇಳಿದ್ದು ಈಗ ಕೇಳಿದಂತಿದೆ.ಹಲವಾರು ವರ್ಷಗಳ ಕಾಲ ಬಡವರ ಮನೆಗಳಿಗೆ ಸೈಕಲಿನಲ್ಲಿ ಹೋಗಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರು ಡಾಕ್ಟರ್ ಸುಬ್ಬರಾವ್. ಔಷದಿಗೆ ಹಣ ಪಾವತಿಸಲಾಗದ ಬಡವರಿಂದ ಹಣವನ್ನು ಪಡೆಯುತ್ತಿರಲಿಲ್ಲ. ಇಂತಹ ಡಾಕ್ಟರನ್ನು ಜನರು 'ತಮ್ಮ ಪಾಲಿನ ದೇವರು' ಎಂದು ಪರಿಗಣಿಸಿದ್ದರಲ್ಲಿ ಅಚ್ಚರಿಯೇನಿದೆ? 'ಡಾಕ್ಟರರು ಪ್ರಾಕ್ಟೀಸು ನಡೆಸುತ್ತಿದ್ದುದು ಮಧ್ಯಾಹ್ನದವರೆಗೆ ಮಾತ್ರ' ಎಂದು ನೆನಪು ಮಾಡಿಕೊಳ್ಳುತ್ತಾರೆ ಬಿ.ವಿ. ರಾಜನ್. ಮಧ್ಯಾಹ್ನದ ಬಳಿಕ ಅವರ ಸಮಯವೆಲ್ಲ ಕಮ್ಯುನಿಸ್ಟ್ ಪಕ್ಷಕ್ಕೆ ಮೀಸಲಾಗಿತ್ತು. ಚುನಾವಣೆಯಲ್ಲಿ ಪ್ರಥಮ ಬಾರಿ ಗೆದ್ದು ಶಾಸಕರಾಗುವ ತನಕ ಡಾಕ್ಟರರು ಈ ರೂಡಿ ಮುಂದುವರಿಸಿಕೊಂಡು ಬಂದಿದ್ದರು. ಮಧ್ಯಾಹ್ನದ ಬಳಿಕ ಚಿಕಿತ್ಸೆಗಾಗಿ ಯಾರೇ ಬಂದರು ಡಾಕ್ಟರ್ ಜೋರು ಮಾಡುತ್ತಿದ್ದರು. ಆದರೆ ಕ್ಲಿನಿಕ್‌ನಲ್ಲಿದ್ದರೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ರೋಗಿಯನ್ನು ಪರೀಕ್ಷಿಸುತ್ತಿದ್ದರು. 'ಯಾರೆಲ್ಲ ರೋಗಿಗಳು ಬರುತ್ತಾರೆಂದು' ಬಕಪಕ್ಷಿಯಂತೆ ಕಾಯುವ ಸ್ವಭಾವ ಅವರದ್ದಲ್ಲ. ಆದ್ದರಿಂದಲೇ ಒಂದು ನರ್ಸಿಂಗ್ ಹೋಂ ಮಾಡುವ ಅಥವಾ ಕಾರು ಖರೀದಿಸುವ ಆಶೆ ಅವರಲ್ಲಿ ಯಾವತ್ತೂ ಸುಳಿಯಲಿಲ್ಲ.ರೋಗಿಗಳು ಗುಣಮುಖರಾಗುವ ಬಗ್ಗೆ ಡಾ. ಸುಬ್ಬರಾಯರಿಗೆ ಅತೀವ ಕಾಳಜಿ. ಔಷದಿ ಸೇವನೆ, ಆರೈಕೆ ಮತ್ತು ರೋಗಿಗಳ ಸ್ಥಿತಿ ತಿಳಿಸುವ ಬಗ್ಗೆ ತಾನಿತ್ತ ನಿರ್ದೇಶನಗಳ ಕುರಿತು ಅವರು ಬಹಳ ಕಟ್ಟುನಿಟ್ಟು. ಅವನ್ನು ಪಾಲಿಸದಿದ್ದರೆ ನಿಷ್ಠುರರಾಗಿ ವ್ಯವಹರಿಸುತ್ತಿದ್ದರು. ಅಂತಹ ಸಂದರ್ಭವೊಂದನ್ನು ಸ್ಮರಿಸುತ್ತಾರೆ ಸಿ.ಪಿ.ಐ. ಜಿಲ್ಲಾ ಸಮಿತಿ ಸದಸ್ಯರಾದ ಪಿ. ರಾಘವನ್ : ೧೯೬೫ರಲ್ಲಿ ಒಮ್ಮೆ ನನ್ನ ಮಗುವಿಗೆ ಜ್ವರ ಬಂದಾಗ ಅವರ ಕ್ಲಿನಿಕಿಗೆ ಮಗುವನ್ನು ಎತ್ತಿಕೊಂಡು ಹೋಗಿದ್ದೆ. ಅವರು ಮಗುವನ್ನು ಸೂಕ್ಷ್ಮವಾಗಿ ತಪಾಸಣೆ ಮಾಡಿ ಮದ್ದು ಕೊಟ್ಟರು. ಎರಡು ದಿನಗಳ ಮದ್ದು ನೀಡಿ, ಮಗುವನ್ನು ಜಾಗ್ರತೆಯಿಂದ ನೋಡಿಕೊಳ್ಳ ಬೇಕೆಂದೂ ಮರುದಿನವೇ ಬಂದು ಮಗುವಿಗೆ ಹೇಗಿದೆಂಯೆಂದು ತಿಳಿಸಬೇಕೆಂದೂ ಹೇಳಿದರು.ನಾನು ಮಗುವಿನೊಂದಿಗೆ ಮನೆಗೆ ಮರಳಿ ಆ ದಿನ ಮಧ್ಯಾಹ್ನ, ರಾತ್ರಿ ಹಾಗೂ ಮರುದಿನ ಬೆಳಗ್ಗೆ ಮದ್ದು ಕೊಡುವಷ್ಟರಲ್ಲಿ ಮಗು ಸಂಪೂರ್ಣ ಗುಣವಾಗಿ ಆಟವಾಡತೊಡಗಿತು. ಎರಡನೇ ದಿನದ ಮದ್ದು ಕೊಡಲಿಕ್ಕಿದೆ; ಆದ್ದರಿಂದ ಮೂರನೇ ದಿನವೇ ಡಾಕ್ಟರ ಕ್ಲಿನಿಕಿಗೆ ಹೋಗುವುದೆಂದು ನಿರ್ಧರಿಸಿದೆ. ಆದರೆ ಡಾಕ್ಟರ್ ಸುಬ್ಬರಾವ್ ಏನೆಂದುಕೊಳ್ಳುತ್ತಾರೆಂದು

ನಾನು ಯೋಚಿಸಲಿಲ್ಲ.ಮಗು ಗುಣವಾದ ಬಗ್ಗೆ ಡಾಕ್ಟರಿಗೆ ತಿಳಿಸಲು ಮೂರನೇ ದಿನ ನಾನು ಅವರ ಕ್ಲಿನಿಕಿಗೆ ಹೋದೆ. ಆಗ ಅಲ್ಲಿ ಹೆಚ್ಚು ಜನ ಇರಲಿಲ್ಲ. ನಾನು ಕಾದು ಕುಳಿತೆ. ನನ್ನ ಸರತಿ ಬಂದಾಗಲೂ ಡಾಕ್ಟರ್ ನನ್ನನ್ನು ಕರೆಯಲಿಲ್ಲ. ನನ್ನ ನಂತರ ಬಂದವರಿಗೆ ಔಷದಿ ನೀಡಿ ಕಳಿಸಿದರೂ ನನ್ನನ್ನು ಕರೆಯಲಿಲ್ಲ. ಕೊನೆಗೆ ನಾನೇ ಎದ್ದು ಹೋಗಿ ಡಾಕ್ಟರರ ಎದುರು ನಿಂತು, 'ನನ್ನ ಮಗು ಹುಷಾರಾಗಿದೆ' ಎಂದೆ. ಡಾಕ್ಟರ್ ಸಿಟ್ಟಿನಿಂದ ನನ್ನನ್ನು ನೋಡಿದರು. ಅವರ ತೀಕ್ಷ್ಣ ನೋಟ ದಿಂದಾಗಿ ಅವರ ಮುಖ ನೋಡಲು ನನಗೆ ಭಯವಾಯಿತು. "ಈಗ ಯಾಕೆ ಬಂದೆ?" ಎಂದು ಗಡಸು ದನಿಯಲ್ಲಿ ಕೇಳಿದರು. ಮಗುವಿಗೆ ಸಂಪೂರ್ಣ ಗುಣವಾಗಿದೆ ಎಂದು ತೊದಲುತ್ತಲೇ ಹೇಳಿದೆ. "ಹೌದು, ನಿನ್ನ ಮಗುವಿಗೆ ಗುಣವಾಗಿದೆ. ಆದರೆ ನನ್ನ ಆತಂಕ ನಿನಗೆ ಹೇಗೆ ಗೊತ್ತಾಗಬೇಕು? ನಿನ್ನ ಮಗುವಿಗೆ ಮೊನ್ನೆ ನಿಮೋನಿಯಾ ಜ್ವರ ಏರಿತ್ತು. ಅದಕ್ಕೇ ನಾನು ಹೇಳಿದ್ದು, ಮರುದಿನವೇ ಬಂದು ಮಗುವಿಗೆ ಹೇಗಿದೆ ಅಂತ ತಿಳಿಸಬೇಕು. ನನಗೆ ಆ ಮಗುವಿನ ಸ್ಥಿತಿ ತಿಳಿಯದೆ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ಕೊನೆಗೆ ನಿನ್ನ ನೆರೆಮನೆಯವರಿಂದ ವಿಷಯ ತಿಳಿದುಕೊಳ್ಳಬೇಕಾಯಿತು" ಎಂದು ರೇಗಿದರು. ಅಷ್ಟಕ್ಕೇ ಮಾತು ಮುಗಿಸದೆ, ಡಾಕ್ಟರ್ ಹೇಳಿದರು, "ಡಾಕ್ಟರ್ ಔಷದಿ ಕೊಟ್ಟರೆ ಅವರ ಜವಾಬ್ದಾರಿ ಮುಗಿಯುತ್ತದೇನು? ರೋಗಿ ಪೂರ್ಣ ಗುಣವಾಗುವವರೆಗೆ ಜವಾಬ್ದಾರಿ ವಹಿಸುವವನೇ ಸರಿಯಾದ ಡಾಕ್ಟರ್".ಜನತಾ ರಂಗಭೂಮಿ ಕಲಾವಿದಡಾ. ಸುಬ್ಬರಾಯರಿಗೆ ಕಲಾ ಚಟುವಟಿಕೆಗಳಲ್ಲಿ ಬಹಳ ಆಸಕ್ತಿ. ನಾಟಕ ಮಾಧ್ಯಮ ವನ್ನು ಜನಜಾಗೃತಿಗಾಗಿ ಪರಿಣಾಮಕಾರಿಯಾಗಿ ಬಳಸಿದವರು ಅವರು. ಸಭೆಗಳಲ್ಲಿ ಜನರನ್ನು ಹುರಿದುಂಬಿಸಲಿಕ್ಕಾಗಿ ಮತ್ತು ಜನಸಮೂಹಗಳಲ್ಲಿ ವಿದ್ಯುತ್ ಸಂಚಾರ ಉಂಟು ಮಾಡಲಿಕ್ಕಾಗಿ ಗೀತೆಗಳನ್ನು ಹಾಡುವುದರಲ್ಲಿ ಅವರು ಎತ್ತಿದ ಕೈ. ೧೯೪೩ರಲ್ಲಿ ಮಂಜೇಶ್ವರದಲ್ಲಿ ನೆಲೆಸಿ, ವೈದ್ಯವೃತ್ತಿ ಆರಂಬಿಸಿದಾಗ, ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಅವರು ಕಟ್ಟಿದ ವೇದಿಕೆ 'ಜನತಾ ರಂಗಭೂಮಿ'. ಇಂದು ಅದು ಸಕ್ರಿಯವಾಗಿಲ್ಲ. ಆದರೆ ಡಾ. ಸುಬ್ಬರಾಯರ ಯೌವನದ ದಿನಗಳಲ್ಲಿ ಜನಸಾಮಾನ್ಯರಿಗೆ ಜನಪರ ಸಂದೇಶಗಳನ್ನು ತಲುಪಿಸಲು ಅದು ಸಮರ್ಥ ಸಾಧನವಾಗಿತ್ತು. ಐದು ದಶಕಗಳ ಹಿಂದಿನ ಆ ದಿನಗಳಲ್ಲಿ, ಜನತಾ ರಂಗಭೂಮಿಯ ನಾಟಕ ಪ್ರದರ್ಶನಗಳು, ರೈತ ಸಂಘದ ಪ್ರತಿಭಟನೆಗಳು ಮತ್ತು ಕಮ್ಯುನಿಸ್ಟ್ ಪಕ್ಷದ ಸಂಘಟನಾ ಚಟುವಟಿಕೆಗಳು ಒಳ್ಳೆಯ ಬದುಕಿನ ಆಶಯದತ್ತ ಮಂಜೇಶ್ವರದ ಅನೇಕ ಯುವಕರನ್ನು ಸೆಳೆದದ್ದಂತೂ ನಿಜ. ಜನತಾ ರಂಗಭೂಮಿಯಲ್ಲಿ ಡಾ. ಸುಬ್ಬರಾಯರೊಂದಿಗೆ ಸಕ್ರಿಯರಾಗಿದ್ದವರು ಕುಂಞಿಕಣ್ಣ ಮಾಸ್ಟರ್, ಹರಿಶ್ಚಂದ್ರ ಮಾಸ್ಟರ್ (ಹರಿ ಮಾಸ್ಟರ್), ಮಂಜಪ್ಪ ಬಂಗೇರ, ಕೇಶವ ಕಾಮತ್ ಮತ್ತು ಬಾಲಚಂದ್ರ. ಇವರೆಲ್ಲ ಡಾ. ಸುಬ್ಬರಾಯರ ನಿಧನದ ಮುಂಚೆಯೇ ನಮ್ಮನ್ನಗಲಿದರು. ಇವರೆಲ್ಲ ಡಾ. ಸುಬ್ಬರಾವ್ ಅವರೊಂದಿಗೆ ಸೇರಿ ಹಲವಾರು ನಾಟಕಗಳನ್ನು ಪ್ರದರ್ಶಿಸಿದರು. ಅನೇಕ ನಾಟಕ ಸ್ಪರ್ಧೆಗಳಲ್ಲಿಯೂ ಭಾಗವಹಿಸಿದರು. ಕಾಸರಗೋಡಿನ ಲಲಿತಕಲಾ ಸದನದ ಸ್ಪರ್ಧೆಗಳಲ್ಲಿಯೂ ಪ್ರಶಸ್ತಿ ಪಡೆದರು. ಆ ಹಿರಿಯರೊಂದಿಗೆ ಬಿ.ಎಂ. ಅನಂತ, ಬಿ.ಎಂ. ಜಗನ್ನಾಥ್, ಶೇಷಗಿರಿ, ದಿನಕರ ಶೆಟ್ಟಿ ಹಾಗೂ ಇನ್ನೂ ಕೆಲವು ಪ್ರತಿಭಾವಂತರು ಜನತಾ ರಂಗಭೂಮಿಯ ಜನಪ್ರಿಯತೆಗೆ ಕಾರಣಪುರುಷರು.ಜನತಾ ರಂಗಭೂಮಿಗೆ ಮರುಜನ್ಮ ನೀಡಬೇಕೆಂಬುದು ಡಾ. ಸುಬ್ಬರಾಯರ ಆಶೆಯಾಗಿತ್ತು. ಯಾಕೆಂದರೆ ಅವರ ಕಲಾ ಆಸಕ್ತಿ ಯಾವತ್ತೂ ಹಸಿರಾಗಿತ್ತು. ಆದರೆ ಅವರ ಆಶೆ ಈಡೇರಲಿಲ್ಲ. ಅದೇನಿದ್ದರೂ ಜನಸಮುದಾಯಗಳಲ್ಲಿ ಜಾಗೃತಿ ಮೂಡಿಸಲು ನಾಟಕ ಮಾಧ್ಯಮದ ಶಕ್ತಿಯ ಬಗ್ಗೆ ತಿಳಿಯಬೇಕೆಂಬವರಿಗೆ ಜನತಾ ರಂಗಭೂಮಿ ಒಂದು ಚಾರಿತ್ರಿಕ ಪಾಠ.ಗಾಯಕ ಮತ್ತು ವಾಗ್ಮಿಡಾ. ಸುಬ್ಬರಾವ್ ಹಾಡುವುದನ್ನು ಕೇಳಿದವರಿಗೆ ಗೊತ್ತು ಅವರ ಕಂಠದ ತಾಕತ್ತು. ಸಂಘಟನೆ ಕಟ್ಟುವ ಆರಂಭದ ದಿನಗಳಲ್ಲಿ ಕೆ. ವೆಂಕಟರಾವ್ ಬರೆದ ಕ್ರಾಂತಿಯ ಹಾಡುಗಳನ್ನು ಸಭೆಗಳಲ್ಲಿ ಉತ್ಸಾಹದಿಂದ ಹಾಡುತ್ತಿದ್ದರು. ಅವರ ಹಾಡುಗಾರಿಕೆಯನ್ನು ಕೆ.ವಿ. ಕೃಷ್ಣನ್ ಹೀಗೆ ನೆನಪು ಮಾಡಿಕೊಳ್ಳುತ್ತಾರೆ : ಕಾಸರಗೋಡಿನಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು. ಅದರ ಮುಕ್ತಾಯದಲ್ಲಿ ಡಾ. ಸುಬ್ಬರಾವ್ ಹಾಡಿದ ಹಾಡು, 'ವಿಪ್ಲವ ಗಾನ'. ನೆರೆದಿದ್ದ ಸಾವಿರಾರು ಜನರ ಮನ ತಟ್ಟಿದ ಆ ಗಾನವೇ ಅಂದಿನ ಸಭೆಯ ವಿಶೇಷ. ಅನಂತರ ಹಲವಾರು ಸಭೆಗಳಲ್ಲಿ ಜನಸಾಗರದಲ್ಲಿ ಅಲೆಗಳನ್ನೆಬ್ಬಿಸಿದ ಗಾನವೆಂದೇ ಅದು ಜನಪ್ರಿಯವಾಯಿತು. ಈ ಬಗ್ಗೆ ನಾರಾಯಣನ್ ಪೆರಿಯ ಅವರೂ ಜ್ಞಾಪಿಸಿಕೊಳ್ಳುತ್ತಾರೆ, "ಕಾಂಞಂಗಾಡ್ ನಲ್ಲಿ ಜಿಲ್ಲಾ ಸಮ್ಮೇಳನದಲ್ಲಿ ಭಾಷಣಗಳು ಮುಗಿದ ಬಳಿಕ ಡಾ. ಸುಬ್ಬರಾವ್ ಎದ್ದುನಿಂತು ಹಾಡಿದ್ದು 'ವಿಪ್ಲವಗಾನ'. ಅದನ್ನು ಕೇಳುತ್ತಿದ್ದಂತೆ ಅಲ್ಲಿ ಸೇರಿದ್ದ ಜನರಿಗೆ ರೋಮಾಂಚನ. ಅಲ್ಲಿ ಸಾವಿರಾರು ಜನರು ಒಟ್ಟಾಗಿ ಎದ್ದು ನಿಂತು, ತಮ್ಮ ತಮ್ಮ ಬಿಗಿಮುಷ್ಠಿ ಮೇಲೆತ್ತಿ ಜಯಘೋಷವನ್ನು ಮಾಡಿದ ಚಿತ್ರ ಈಗಲೂ ನನ್ನ ಕಣ್ಣ ಮುಂದಿದೆ". ಡಾ. ಸುಬ್ಬರಾಯರ ಮಾತು ಕೇಳುವುದೇ

ಒಂದು ವಿಶೇಷ ಅನುಭವ. ಸತ್ಯಾಂಶಗಳನ್ನು ಆಧರಿಸಿ, ತರ್ಕಬದ್ಧವಾಗಿ ಅವರು ವಾದ ಮಂಡನೆ ಮಾಡುವ ರೀತಿ ಅಮೋಘ. (ರಾಜ್ಯಸಭೆ ಮತ್ತು ವಿಧಾನಸಭೆಗಳಲ್ಲಿ ಅವರು ಮಾಡಿದ ಭಾಷಣಗಳು ಮುಂದಿನ ಪುಟಗಳಲ್ಲಿವೆ.) ನಾರಾಯಣನ್ ಪೆರಿಯ ಸ್ಮರಿಸುತ್ತಾರೆ : "ಕಣ್ಣೂರಿನಲ್ಲಿ ಕಾಲೇಜು ಬೇಕೇ? ಬೇಡವೇ? ಎಂಬುದನ್ನು ಚರ್ಚಿಸಲು ಒಂದು ಸಭೆ ಏರ್ಪಡಿಸಲಾಗಿತ್ತು. ಅಲ್ಲಿ ಡಾಕ್ಟರ ಭಾಷಣ ಕೇಳಿ, ಭಾಷಣಗಳಿಗೆ ಪೂರ್ವತಯಾರಿ ಯಾಕೆ ಬೇಕು? ಎಂಬ ವಿಷಯ ನನಗೆ ತಿಳಿಯಿತು". ಯಾವುದೇ ಸಭೆಗೆ ಭಾಷಣ ಮಾಡಲು ಹೋಗುವುದಿದ್ದರೂ ಅವರು ಪೂರ್ವ ತಯಾರಿ ಮಾಡಿಯೇ ಹೋಗುತ್ತಿದ್ದರು.ನಾರಾಯಣನ್ ಪೆರಿಯ ಅವರು ಇನ್ನೊಂದು ವಿಷಯವನ್ನು ತಿಳಿಸಿದ್ದಾರೆ.

ಡಾ. ಸುಬ್ಬರಾಯರಿಗೆ ಜನರಿಗೆ ಅರ್ಥವಾಗುವ ಭಾಷೆಯಲ್ಲಿಯೇ ಭಾಷಣ ಮಾಡಲು ಆಸಕ್ತಿ. ಒಂದು ಸಭೆಯಲ್ಲಿ ಆಯೋಜಕರು "ಡಾಕ್ಟರೇ, ನೀವು ಇಂಗ್ಲಿಷಿನಲ್ಲಿ ಮಾತಾಡಿದರೂ ಆದೀತು" ಎಂದಾಗ, ತಟ್ಟನೆ ಡಾಕ್ಟರರ ಪ್ರತಿಕ್ರಿಯೆ "ನಿಮಗೆ ನನಗೆ ಇಂಗ್ಲಿಷ್ ಅರ್ಥವಾಗುತ್ತದೆ. ಅಲ್ಲಿ ಸೇರಿದ ಜನರಿಗೆ ಅರ್ಥವಾಗುತ್ತದೆಯೇ? ನನ್ನ ಮಲೆಯಾಳ ಕೆಟ್ಟದಾದರೂ ಪರವಾಗಿಲ್ಲ, ಅದರಲ್ಲೇ ಮಾತಾಡುತ್ತೇನೆ". ಅಂದಿನ ಡಾಕ್ಟರ ಮಲೆಯಾಳ ಭಾಷಣ ಮನಸ್ಸಿಗೆ ನಾಟಿದ್ದಂತೂ ನಿಜ.ಕರ್ನಾಟಕದ ಕಮ್ಯುನಿಸ್ಟ್ ನಾಯಕ ಬಿ.ವಿ. ಕಕ್ಕಿಲ್ಲಾಯರ ನೆನಪಿನಲ್ಲಿ ಹಸಿರಾಗಿರುವ ಒಂದು ಘಟನೆ : ಕಮ್ಯುನಿಸ್ಟ್ ಪಾರ್ಟಿಯ ಆಲ್ ಇಂಡಿಯಾ ಪಾರ್ಟಿ ಕಾಂಗ್ರೆಸ್‌ನಲ್ಲಿ ಕರ್ನಾಟಕದ ಪ್ರತಿನಿಧಿಗಳಿಗೆ ಒಂದು ಹಾಡು ಹಾಡಬೇಕೆಂದು ಸೂಚಿಸಲಾಯಿತು. ಆಗ ದುಡಿಯುವ ಜನರೆಲ್ಲಾ ಒಂದುಗೂಡಬೇಕೆಂದು ಕರೆ ನೀಡುವ ಹಾಡು ಹಾಡಿದವರು ಎಂ.ಎಸ್. ಕೃಷ್ಣನ್ ಮತ್ತು ಡಾ. ಸುಬ್ಬರಾವ್. ಆ ಮಹಾ ಸಮ್ಮೇಳನದಲ್ಲಿ ಆ ಹಾಡು ಎಂತಹ ಮಿಂಚಿನ ಸಂಚಾರ ಉಂಟುಮಾಡಿತೆಂದರೆ ಅಲ್ಲಿ ನೆರೆದವರೆಲ್ಲೂ ಎದ್ದು ನಿಂತು ಆ ಇಬ್ಬರು ಗಾಯಕರಿಗೆ ಗೌರವ ಸೂಚಿಸಿದರು.

**ಪ್ರಮುಖ ಸಾಧನೆಗಳು**

ದಿನೇಶ್ ಬೀಡಿ ಸೊಸೈಟಿ - ದೇಶಕ್ಕೊಂದು ಮಾದರಿಮಂಜೇಶ್ವರ ಪ್ರದೇಶದಲ್ಲಿ ೧೯೬೭ರಲ್ಲಿ ಮಂಗಳೂರಿನ ಖಾಸಗಿ 'ಗಣೇಶ್ ಬೀಡಿ ಕಂಪೆನಿ'ಯ ಫ್ಯಾಕ್ಟರಿಗಳಲ್ಲಿ ಸಾವಿರಾರು ಕಾರ್ಮಿಕರನ್ನು ಮಾಲೀಕರು ದುಡಿಸುತ್ತಿದ್ದರು. ಮಂಜೇಶ್ವರ, ಕಾಸರಗೋಡು, ಕಾಂಞಂಗಾಡು ಮೊದಲಾದ ಸ್ಥಳಗಳಲ್ಲಿ ಅವರ ಫ್ಯಾಕ್ಟರಿಗಳಿದ್ದವು. ಅಲ್ಲದೆ, ಕಂಟ್ರಾಕ್ಟರ್‌ಗಳ ಮೂಲಕ ಹೊಗೆಸೊಪ್ಪು ಎಲೆಗಳನ್ನು ಕಾರ್ಮಿಕರಿಗೆ ನೀಡಿ, ಮನೆಗಳಲ್ಲಿಯೂ ಬೀಡಿ ಕಟ್ಟಿಸುತ್ತಿದ್ದರು.ಆ ಸಮಯದಲ್ಲಿ ಕೇರಳದಲ್ಲಿ ಎಡಪಕ್ಷ ಸರಕಾರ ಅಧಿಕಾರಕ್ಕೆ ಬಂತು. ಬೀಡಿ ಕಾರ್ಮಿಕರಿಗೆ ಕನಿಷ್ಠ ಮಜೂರಿ ನಿಗದಿಪಡಿಸಿ ಸರಕಾರ ಆದೇಶ ಹೊರಡಿಸಿತು. ಆದರೆ ಕನಿಷ್ಠ ಮಜೂರಿಯನ್ನು ಕಾರ್ಮಿಕರಿಗೆ ಪಾವತಿಸಲು ಗಣೇಶ್ ಬೀಡಿ ಕಂಪೆನಿ ಸಿದ್ಧವಿರಲಿಲ್ಲ. ಹಾಗಾಗಿ ಡಾ. ಸುಬ್ಬರಾಯರ ಮುಂದಾಳುತನದಲ್ಲಿ ಎಡಪಕ್ಷಗಳ ಕಾರ್ಮಿಕ ಸಂಘಟನೆಗಳು ಗಣೇಶ್ ಬೀಡಿ ಕಂಪೆನಿ ಮಾಲಕರೊಂದಿಗೆ ಸಮಾಲೋಚನೆ ನಡೆಸಿದವು. ಕಾರ್ಮಿಕರಿಗೆ ನ್ಯಾಯಬದ್ಧ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಿದವು. ಆದರೆ ಮಾಲೀಕರು ಒಪ್ಪಲಿಲ್ಲ. ಕೊನೆಗೆ ತಮ್ಮ ಬೀಡಿ ಫ್ಯಾಕ್ಟರಿಗಳನ್ನು ಮುಚ್ಚಿಯೇ ಬಿಟ್ಟರು. ಸಾವಿರಾರು ಕಾರ್ಮಿಕರಿಗೂ, ಅವರ ಕುಟುಂಬಗಳಿಗೂ ಜೀವನೋಪಾಯವಿಲ್ಲದ ಸಂಕಟದ ಸನ್ನಿವೇಶ. ಗಣೇಶ್ ಬೀಡಿ ಕಂಪೆನಿಯ ಮಂಗಳೂರಿನ ಕಚೇರಿ ಎದುರು ನಡೆಸಿದ ದೀರ್ಘ ಪ್ರತಿಭಟನೆಯೂ ನಿಷ್ಫಲ.ಆಗಿನ ಕೈಗಾರಿಕಾ ಸಚಿವ ಸಿ.ಪಿ.ಐ. ನೇತಾರ ಟಿ.ವಿ. ಥಾಮಸ್‌ರನ್ನು ಡಾ. ಸುಬ್ಬರಾವ್, ರಾಮಪ್ಪ ಮಾಸ್ಟರ್, ಸಿ.ಎಚ್. ಕೃಷ್ಣನ್ ಹಾಗೂ ಇತರ ಮುಖಂಡರು ಭೇಟಿ ಮಾಡಿ ಚರ್ಚಿಸಿದರು. ಅನಂತರ ಜಿಲ್ಲಾ ಕೇಂದ್ರ ಕಣ್ಣಾನೂರಿನಲ್ಲಿ ಒಂದು ವಾರದ ಶಿಬಿರ ನಡೆಸಿ ಸುದೀರ್ಘ ಸಮಾಲೋಚನೆ ನಡೆಯಿತು. ಅಂತಿಮವಾಗಿ, ಕಾರ್ಮಿಕರೇ ನಿರ್ವಹಿಸುವ ಸಹಕಾರಿ ರಂಗದ ದಿನೇಶ್ ಬೀಡಿ ಸಹಕಾರಿ ಸೊಸೈಟಿ ಸ್ಥಾಪಿಸಲು ನಿರ್ಧಾರ.ಕಣ್ಣಾನೂರನ್ನು ಕೇಂದ್ರವಾಗಿರಿಸಿಕೊಂಡು ದಿನೇಶ್ ಬೀಡಿ ಸೊಸೈಟಿ ಕಾರ್ಯಾರಂಭ ಮಾಡಿತು. ತಲಶ್ಯೇರಿಯಿಂದ ಮಂಜೇಶ್ವರ ತನಕ ಅನೇಕ ಪ್ರಾದೇಶಿಕ ಸೊಸೈಟಿಗಳನ್ನು ಸ್ಥಾಪಿಸಿ, ಕೆಲಸಗಾರರನ್ನು ನೋಂದಾಯಿಸಿ, ಬೀಡಿ ಉತ್ಪಾದನೆ ಆರಂಭ. ಮಂಜೇಶ್ವರ ಪ್ರೈಮರಿ ಸೊಸೈಟಿಯ ಅಧ್ಯಕ್ಷರಾಗಿ ಡಾ. ಸುಬ್ಬರಾಯರ ಆಯ್ಕೆ. ಅವರು ಅದೇ ಸ್ಥಾನದಲ್ಲಿ ಮುಂದಿನ ೨೩ ವರುಷ ಮುಂದುವರಿದು, ದಿನೇಶ್ ಬೀಡಿ ಸೊಸೈಟಿಗೆ ಭದ್ರ ಬುನಾದಿ ಹಾಕಿದರು.ಆರಂಭದಲ್ಲಿ ಖಾಸಗಿ ಬೀಡಿ ಕಂಪೆನಿಗಳೊಂದಿಗೆ ಸ್ಪರ್ದಿಸುವುದು ಸುಲಭ ವಾಗಿರಲಿಲ್ಲ. ಆದರೂ ಕಾರ್ಮಿಕರ ಸಹಕಾರದಿಂದಾಗಿ

ದಿನೇಶ್ ಬೀಡಿ ಸೊಸೈಟಿ ಬೆಳೆಯಿತು. ಉತ್ತಮ ಗುಣಮಟ್ಟ ಕಾದುಕೊಂಡು ಜನಪ್ರಿಯವಾಯಿತು. ಖಾಸಗಿ ಬೀಡಿ ಕಂಪೆನಿಗಳಿಗಿಂತ ೩೦-೪೦% ಜಾಸ್ತಿ ಮಜೂರಿ ಪಾವತಿ ದಿನೇಶ್ ಬೀಡಿ ಸೊಸೈಟಿಯ ಹೆಗ್ಗಳಿಕೆ. ಜೊತೆಗೆ ಆದಿತ್ಯವಾರದ ರಜಾವೇತನ, ಹೆರಿಗೆ ಭತ್ತೆ, ವೈದ್ಯಕೀಯ ಚಿಕಿತ್ಸೆಗೆ ಸಹಾಯಧನ ಪಾವತಿ. ಇದರೊಂದಿಗೆ ಮರಣಾನಂತರ ಹಣ ಸಹಾಯ, ವಾರ್ಷಿಕ ರಜಾವೇತನ, ಹಬ್ಬ ಹರಿದಿನಗಳಿಗೆ ವಿಶೇಷ ವೇತನ ಪಾವತಿ. ಇಷ್ಟೆಲ್ಲ ಸವಲತ್ತುಗಳನ್ನು ಒದಗಿಸಿಯೂ ದಿನೇಶ್ ಬೀಡಿ ಸೊಸೈಟಿ ಲಾಭದಲ್ಲಿ ವಹಿವಾಟು ನಡೆಸಲು ಸಮರ್ಥವಾಯಿತು. ಇದಕ್ಕೆಲ್ಲಾ ಕಾರಣ ಡಾ. ಸುಬ್ಬರಾಯರಂತಹ ನಿಸ್ವಾರ್ಥಿ ನಾಯಕರು.ಮಂಜೇಶ್ವರದಲ್ಲಿ ಡಾ. ಸುಬ್ಬರಾಯರ ಕ್ಲಿನಿಕ್‌ನ ಹತ್ತಿರದಲ್ಲಿಯೇ ದಿನೇಶ್ ಬೀಡಿಯ ಮೈನ್ ಡಿಪೋ ಫ್ಯಾಕ್ಟರಿ. ಅಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ವಾರಕ್ಕೊಮ್ಮೆ ಒಟ್ಟು ಸೇರಿಸಿ ಸಭೆ ನಡೆಸುತ್ತಿದ್ದರು. ಇತ್ತೀಚೆಗಿನ ರಾಜಕೀಯ ಬೆಳವಣಿಗೆಗಳು, ಕಮ್ಯುನಿಸ್ಟ್ ಪಕ್ಷದ ಧೋರಣೆ, ಕಾರ್ಮಿಕ ವರ್ಗದ ಮುಂದಿರುವ ಸವಾಲುಗಳನ್ನು ಸರಳ ಭಾಷೆಯಲ್ಲಿ ವಿವರಿಸುತ್ತಿದ್ದರು. ಇತರ ಫ್ಯಾಕ್ಟರಿಗಳಲ್ಲಿಯೂ ತಿಂಗಳಿಗೊಮ್ಮೆ ಫ್ಯಾಕ್ಟರಿ ಸಮಿತಿಯ ಸಭೆ ನಡೆಸುತ್ತಿದ್ದರು. ಈ ರೀತಿಯಲ್ಲಿ ದಿನೇಶ್ ಬೀಡಿ ಕಾರ್ಮಿಕರೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡು ಕಾರ್ಯನಿರ್ವಹಿಸುತ್ತಿದ್ದರು. ಫ್ಯಾಕ್ಟರಿ ಸಮಿತಿಯ ವಾರ್ಷಿಕ ಮಹಾಸಭೆಯನ್ನು ಪ್ರತಿ ವರುಷವೂ ಜರಗಿಸಿ, ಎಐಟಿಯುಸಿ ಸಮಿತಿಯನ್ನು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಆರಿಸುತ್ತಿದ್ದರು. ಈ ಕ್ರಮವನ್ನು ಶಾಸಕರಾಗಿ ಹೋಗುವ ತನಕ ನಿಯಮಬದ್ಧವಾಗಿ ಶಿಸ್ತಿನಿಂದ ನಡೆಸಿದ ಹಿರಿಮೆ ಅವರದು.ಡಾ. ಸುಬ್ಬರಾವ್ ದಿನೇಶ್ ಬೀಡಿ ಸೊಸೈಟಿಯ ಕಣ್ಣಾನೂರಿನ ಕೇಂದ್ರ ಸಂಘದ ನಿರ್ದೇಶಕರು. ಕೇಂದ್ರ ಸಂಘದ ಸಭೆಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಕಾರ್ಮಿಕರ ಹಿತದ ಬಗ್ಗೆ ಅವರಿಗೆ ಸದಾ ಕಾಳಜಿ. ಆ ಸಭೆಗಳಲ್ಲಿ ಕಾರ್ಮಿಕರ ಸಮಸ್ಯೆಗಳನ್ನು ಪ್ರಸ್ತಾಪಿಸಿ, ಪರಿಹಾರ ಕ್ರಮಗಳಿಗಾಗಿ ಆಗ್ರಹಿಸುತ್ತಿದ್ದರು. ಕಾರ್ಮಿಕರಿಗೆ ಕಳಪೆ ಬೀಡಿ ಎಲೆಗಳನ್ನು ವಿತರಿಸಿದಾಗ, ಅದರ ಸ್ಯಾಂಪಲನ್ನು ಡಾ. ಸುಬ್ಬರಾವ್ ತನ್ನ ಬ್ಯಾಗಿನಲ್ಲಿ ಒಯ್ದು, ಕೇಂದ್ರ ಸಮಿತಿಯ ಸಭೆಯಲ್ಲೇ ಪ್ರದರ್ಶಿಸಿ, 'ಇಂತಹ ಎಲೆಗಳಿಂದ ಉತ್ತಮ ಬೀಡಿ ತಯಾರಿಸುವುದು ಹೇಗೆ?' ಎಂದು ಪ್ರಶ್ನಿಸಿದ್ದರು.ಮಂಜೇಶ್ವರದ ದಿನೇಶ್ ಬೀಡಿಯ ಮೈನ್ ಡಿಪೊ, ಉದ್ಯಾವರ, ಕುಂಜತ್ತೂರು, ಕೆದಂಬಾಡಿ, ವರ್ಕಾಡಿ, ಪಾವೂರು, ದೈಗೋಳಿ, ಕಡಂಬಾರ್, ಮಜಿಬೈಲು, ಮೂಡಂಬೈಲು, ಉಪ್ಪಳ, ಭಗವತೀ ಗೇಟ್, ಪುಳಿಕುತ್ತಿ - ಈ ೧೨ ಫ್ಯಾಕ್ಟರಿಗಳಲ್ಲಿ ದುಡಿಯುತ್ತಿದ್ದ ಸುಮಾರು ೧೫೦೦ ಕಾರ್ಮಿಕರ ಬದುಕಿಗೊಂದು ನೆಲೆ ಒದಗಿಸಿದವರು ಡಾ. ಸುಬ್ಬರಾವ್. ಇವೆಲ್ಲ ಫ್ಯಾಕ್ಟರಿಗಳು ಡಾ. ಸುಬ್ಬರಾವ್ ಅಧ್ಯಕ್ಷರಾಗಿದ್ದ ಅವದಿಯಲ್ಲೇ ಸ್ಥಾಪನೆಯಾದವುಗಳು. ಅವರು ಅಧ್ಯಕ್ಷ ಸ್ಥಾನ ತೆರವು ಮಾಡಿದ ಬಳಿಕ ಯಾವುದೇ ಹೊಸ ಫ್ಯಾಕ್ಟರಿ ಆರಂಭವಾಗಲಿಲ್ಲ ಎಂಬುದು ಗಮನಿಸಬೇಕಾದ ವಿಷಯ. 'ಕಾರ್ಮಿಕರಿಂದ ಕಾರ್ಮಿಕರಿಗಾಗಿ' ಎಂಬ ತತ್ವದ ನೆಲೆಯಲ್ಲಿ ದಿನೇಶ್ ಬೀಡಿ ಸೊಸೈಟಿಯನ್ನು ಮುನ್ನಡೆಸಿ, ಅದನ್ನು ದೇಶಕ್ಕೇ ಒಂದು ಮಾದರಿ ಉತ್ಪಾದನಾ ಸಂಸ್ಥೆಯಾಗಿ ಕಟ್ಟಿ ಬೆಳೆಸುವಲ್ಲಿ ಡಾ. ಸುಬ್ಬರಾಯರದು ಪ್ರಧಾನ ಪಾತ್ರ.ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜುಮಂಜೇಶ್ವರಕ್ಕೆ ಒಂದು ಕಾಲೇಜು ಬೇಕೆಂಬುದು ಅಲ್ಲಿನ ಜನರ ಬಹುದಿನಗಳ ಬೇಡಿಕೆ. ಅಲ್ಲಿನ ಹಲವಾರು ವಿದ್ಯಾರ್ಥಿಗಳು ಕಾಲೇಜು ಶಿಕ್ಷಣಕ್ಕಾಗಿ ದೂರದ ಮಂಗಳೂರಿಗೆ ಪ್ರತಿದಿನ ಹೋಗಿ ಬರಬೇಕಾದ ಪರಿಸ್ಥಿತಿ ಇತ್ತು. ಈ ಬವಣೆ ತಪ್ಪಿಸಲಿಕ್ಕಾಗಿ ರಾಷ್ಟ್ರಕವಿ ಗೋವಿಂದ ಪೈಗಳ ಸ್ಮಾರಕವಾಗಿ ಸರಕಾರಿ ಕಾಲೇಜನ್ನೇ ಸ್ಥಾಪಿಸಬೇಕೆಂಬುದು ಡಾ. ಸುಬ್ಬರಾಯರ ಕನಸು. ಈ ಕನಸು ನನಸಾಗುವ ಅವಕಾಶ ಒದಗಿದ್ದು ಅವರು ಶಾಸಕರಾದಾಗ.ಒಂದೂರಿಗೆ ಸರಕಾರಿ ಕಾಲೇಜು ಮಂಜೂರು ಮಾಡಿಸಿ, ಅಂತಿಮವಾಗಿ ಅದು ಕಾರ್ಯಾರಂಭ ಮಾಡುವವರೆಗಿನ ವಿವಿಧ ಹಂತಗಳ ಅಡಚಣೆಗಳು ಅವನ್ನೆಲ್ಲ ಅನುಭವಿಸಿದವರಿಗೇ ಗೊತ್ತು. ಅಂತೂ ಮಂಜೇಶ್ವರಕ್ಕೊಂದು ಕಾಲೇಜೆಂಬ ಕನಸು ನನಸಾಗುವಲ್ಲಿ ಹಲವರ ಶ್ರಮವಿದೆ. ಜಯಂತ ಕಿಣಿ, ಡಾ. ಗಣಪತಿ ಭಟ್, ದಿವಂಗತ ಎಂ. ರಾಮಪ್ಪ ಮಾಸ್ಟರ್ ಇವರೆಲ್ಲರೊಂದಿಗೆ ಛಲ ಬಿಡದೆ ಶ್ರಮಿಸಿದವರು ಡಾ. ಸುಬ್ಬರಾವ್. ಕಾಲೇಜು ಕಾರ್ಯಾರಂಭ ಮಾಡಿದ ನಂತರವೂ ಅದರ ಆಗುಹೋಗುಗಳಲ್ಲಿ ವಿಶೇಷ ಆಸಕ್ತಿ ವಹಿಸಿದವರು. ಸರಕಾರದ ಅನುದಾನಗಳು ಕಾಲ ಕಾಲಕ್ಕೆ ಕಾಲೇಜಿಗೆ ದೊರಕಲು ಅವರ ಮುತುವರ್ಜಿಯೇ ಕಾರಣ. ಅದೇ ರೀತಿಯಲ್ಲಿ ರಾಷ್ಟ್ರಕವಿಯ ನಿವಾಸವಿರುವ ಜಾಗದಲ್ಲೂ ಗ್ರಂಥಾಲಯ ಮತ್ತು ವಾಚನಾಲಯ ಸ್ಥಾಪನೆಗೂ ಡಾಕ್ಟರರ ಆಸಕ್ತಿಯೇ ಕಾರಣ.ಕಾಸರಗೋಡು ಜಿಲ್ಲೆಗಾಗಿಈಗ ಕಾಸರಗೋಡು ಒಂದು ಜಿಲ್ಲೆ. ಈ ಹೊಸ ಜಿಲ್ಲೆ ರಚನೆಯಾಗಲು ಶತಪ್ರಯತ್ನ ಮಾಡಿದವರಲ್ಲಿ ಡಾ. ಸುಬ್ಬರಾವ್ ಪ್ರಮುಖರು. ಆದರೆ ಡಾಕ್ಟರ್ ಅದು ತನ್ನ ಸಾಧನೆ ಎಂದು ಹೇಳಿಕೊಳ್ಳಲಿಲ್ಲ. ಯಾಕೆಂದರೆ ಅವರು ಹೆಸರಿಗಾಗಿ ಕೆಲಸ ಮಾಡಿದವರೇ ಅಲ್ಲ.ಈ ಬಗ್ಗೆ ಸಿ. ರಾಘವನ್ ಮುಖ್ಯ

ಸಂಗತಿಯೊಂದನ್ನು ತಿಳಿಸುತ್ತಾರೆ : "ಜಿಲ್ಲಾ ಸುವರ್ಣ ಸ್ವಾತಂತ್ರ್ಯ ಸಮಿತಿಯ ಸಮಾರಂಭಕ್ಕಾಗಿ ದಾಖಲೆಗಳನ್ನು ಹುಡುಕಾಡಿದಾಗ, ಕಾಸರಗೋಡು ಜಿಲ್ಲೆಯ ಸ್ಥಾಪನೆಗಾಗಿ ಡಾ. ಸುಬ್ಬರಾವ್ ಮಾಡಿದ ಕೆಲಸದ ಅಗಾಧತೆ ನನಗೆ ತಿಳಿಯಿತು".ಕಾಸರಗೋಡು ಜಿಲ್ಲೆ ರಚನೆಯಾದಾಗ, ಕಮ್ಯುನಿಸ್ಟ್ ಪಾರ್ಟಿಯ ಅಲ್ಲಿನ ಜಿಲ್ಲಾ ಸಮಿತಿಗೆ ಸಹಜವಾಗಿಯೇ ಡಾ. ಸುಬ್ಬರಾವ್ ಅಧ್ಯಕ್ಷರಾದರು. ಜಿಲ್ಲಾ ಸಮಿತಿಯ ಕಚೇರಿ ಸ್ಥಾಪಿಸಲು ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಸಮಿತಿ ನಿರ್ದೇಶನ ನೀಡಿತು. ಅದಕ್ಕಾಗಿ ರೂ. ೮ ಲಕ್ಷ ಹಣ ಬೇಕಾಗಿತ್ತು. ಡಾ. ಸುಬ್ಬರಾವ್ ಜಿಲ್ಲೆಯ ಪ್ರತಿಯೊಬ್ಬ ಕಾರ್ಯಕರ್ತನ ಮನೆಗೆ ಹೋಗಿ, ದೇಣಿಗೆ ವಿನಂತಿಸಿದರು. ಈ ರೀತಿಯಲ್ಲಿ ಒಂದು ತಿಂಗಳಿಡೀ ಕೆಲಸ ಮಾಡಿ ರೂ. ೮ ಲಕ್ಷ ಸಂಗ್ರಹಿಸಿ, ಜಿಲ್ಲಾ ಸಮಿತಿಯ ಕಚೇರಿ ಸ್ಥಾಪಿಸಿದರು. ಸಂಘಟನೆ ಕಟ್ಟುವುದರಲ್ಲಿ ಪ್ರತಿಯೊಬ್ಬ ಕಾರ್ಯಕರ್ತನ ಪಾತ್ರವೂ ಮುಖ್ಯ ಎಂಬುದನ್ನು ಅವರು ಕೊನೆಯವರೆಗೂ ಅನುಸರಿಸಿದರು. ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿಡಾಕ್ಟರ್ ಸುಬ್ಬರಾವ್ ತಾನು ಭಾಷಾ ಅಲ್ಪಸಂಖ್ಯಾತರ ಪ್ರತಿನಿಧಿ ಎಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತಿದ್ದರು. ಕೇರಳದ ಉತ್ತರ ಗಡಿನಾಡು ಕಾಸರಗೋಡಿನಲ್ಲಿ ಕನ್ನಡ ಮಾತನಾಡುವವರ ಮತ್ತು ತಮಿಳ್ನಾಡಿಗೆ ಹೊಂದಿಕೊಂಡ ಗಡಿಪ್ರದೇಶಗಳಲ್ಲಿ ತಮಿಳು ಮಾತನಾಡುವವರ ಹಿತರಕ್ಷಣೆ ಬಗ್ಗೆ ಅವರಿಗೆ ಸಮಾನ ಕಾಳಜಿಯಿತ್ತು. ಇದಕ್ಕೆ ಕಾರಣವೂ ಇತ್ತು. ಅವರ ಮನೆಮಾತು ಕನ್ನಡವಾದರೆ, ತಂಜಾವೂರು ಮತ್ತು ಮದ್ರಾಸಿನಲ್ಲಿ ಬಾಲ್ಯ ಹಾಗೂ ಯೌವನದಲ್ಲಿ ಅವರು ವಿದ್ಯಾಭ್ಯಾಸ ಪಡೆದ ಭಾಷೆ ತಮಿಳು.ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಮಾತಾಡಿ ಕೂರುವವರಲ್ಲ ಡಾ. ಸುಬ್ಬರಾವ್. ಕೇರಳದ ವಿಧಾನಸಭೆಯಲ್ಲಿಯೂ ಅವರು ಈ ವಿಷಯ ಪ್ರಸ್ತಾಪಿಸಿದ್ದರು. (ವಿವರಗಳಿಗಾಗಿ ಓದಿ : ವಿಧಾನಸಭೆಯಲ್ಲಿ ಡಾ. ಸುಬ್ಬರಾವ್). ಕಾಸರಗೋಡಿನ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಉತ್ತಮ ಪಠ್ಯಪುಸ್ತಕಗಳನ್ನು ಒದಗಿಸಬೇಕೆಂಬುದು ಅವರ ಅಭಿಪ್ರಾಯ. ಭಾಷಾವಾರು ರಾಜ್ಯ ಪುನರ್ರಚನೆ ಬಳಿಕ, ಕೇರಳದಲ್ಲಿ (ಮಲೆಯಾಳ ಭಾಷಾ ಪಠ್ಯಪುಸ್ತಕಗಳ ಹೊರತಾಗಿ) ಪಠ್ಯಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಬರೆಯಿಸಿ, ಅನಂತರ ಮಲೆಯಾಳ, ತಮಿಳು ಮತ್ತು ಕನ್ನಡ ಭಾಷೆಗಳಿಗೆ ಭಾಷಾಂತರಿಸಿ ಮುದ್ರಿಸಲಾಗುತ್ತಿತ್ತು. ಹೀಗೆ ಭಾಷಾಂತರಿಸಿದ ಪಠ್ಯಪುಸ್ತಕಗಳಲ್ಲಿ ತಪ್ಪುಗಳು ಇರುತ್ತಿದ್ದವು. ಇದು ಡಾ. ಸುಬ್ಬರಾಯರ ಗಮನಕ್ಕೆ ಬಂದಾಗ, ಅವನ್ನು ಪರೀಕ್ಷಿಸಬೇಕೆಂದು ಅವರು ಕೆಲವು ವಿದ್ವಾಂಸರನ್ನು ವಿನಂತಿಸಿದರು. ಅನಂತರ ಆ ತಪ್ಪುಗಳನ್ನು ಸರಕಾರದ ಗಮನಕ್ಕೆ ತಂದರು. ಭಾಷಾಂತರದ ತರುವಾಯ, ವಿದ್ವಾಂಸರು ಪರಿಶೀಲಿಸಿ, ಭಾಷಾದೋಷಗಳನ್ನೆಲ್ಲ ಸರಿಪಡಿಸಿದ ಬಳಿಕವೇ ಪುಸ್ತಕಗಳನ್ನು ಮುದ್ರಿಸಬೇಕೆಂದು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ಕೊಡಿಸಿದರು. ಹೀಗೆ ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಯಲ್ಲಿಯೂ ಅವರದು ರಚನಾತ್ಮಕ ಧೋರಣೆ.ಮಂಜೇಶ್ವರದ ಕರ್ಮಭೂಮಿಯಲ್ಲಿಡಾ. ಎ. ಸುಬ್ಬರಾಯರ ಕರ್ಮಭೂಮಿ ಕೇರಳದ ಉತ್ತರ ತುದಿಯ ಮಂಜೇಶ್ವರ. ಅವರಲ್ಲಿಗೆ ವೈದ್ಯರಾಗಿ ಕಾಲಿಟ್ಟದ್ದು ೧೯೪೩ರಲ್ಲಿ. ವೈದ್ಯವೃತ್ತಿಯಿಂದಲೂ, ಜನತಾ ರಂಗಭೂಮಿಯ ಕಲಾ ಚಟುವಟಿಕೆಗಳಿಂದಲೂ ಅಲ್ಲೇ ಜನಾನುರಾಗ ಗಳಿಸಿದರು. ಕಮ್ಯೂನಿಸ್ಟ್ ಪಕ್ಷ ಸೇರಿ ಸಂಘಟನೆ ಕಟ್ಟಿ ಬೆಳೆಸಿದರು. ದಿನೇಶ್ ಬೀಡಿ ಸೊಸೈಟಿ ಹಾಗೂ ಮಂಜೇಶ್ವರ ಸಹಕಾರಿ ಬ್ಯಾಂಕಿನಲ್ಲಿ ಜವಾಬ್ದಾರಿಯ ಸ್ಥಾನಗಳನ್ನು ಹಲವಾರು ವರುಷ ನಿರ್ವಹಿಸಿದರು. ನಿಸ್ವಾರ್ಥದಿಂದ ಜನಸೇವೆ ಮಾಡುತ್ತಲೇ ಜನನಾಯಕರಾದರು. ಸರಳತೆಯಿಂದಲೇ ಪ್ರತಿಯೊಬ್ಬರ ಮನ ಗೆದ್ದರು. ನೇರ ನಡೆನುಡಿ, ಶುದ್ಧ ಚಾರಿತ್ರ್ಯದಿಂದಾಗಿ ಎಲ್ಲರ ಗೌರವ ಗಳಿಸಿದರು. ರಾಜ್ಯಸಭಾ ಸದಸ್ಯರಾಗಿ, ಶಾಸಕರಾಗಿ, ಮಂತ್ರಿಯಾಗಿ ನಿಷ್ಕಳಂಕವಾಗಿ ಕರ್ತವ್ಯ ನಿರ್ವಹಣೆ ಮಾಡಿ, ಜನರ ಹೃದಯಗಳಲ್ಲಿ ಶಾಶ್ವತ ಸ್ಥಾನ ಗಳಿಸಿದರು. ೧೪ ಸಪ್ಟಂಬರ್ ೨೦೦೩ರಂದು ನಿಧನರಾದ ಅವರು ತನಗಾಗಿ ಏನನ್ನೂ ಬಯಸಲಿಲ್ಲ. ಕೂಡಿ ಹಾಕಲಿಲ್ಲ. ತನ್ನ ಮಕ್ಕಳು ಹಾಗೂ ಕುಟುಂಬದವರಿಗೂ ಪ್ರೀತಿ ವಿಶ್ವಾಸ ಗಳನ್ನಷ್ಟೇ ಕೊಟ್ಟರು. ಶ್ರೀಮದ್ ಅನಂತೇಶ್ವರ ದೇವಸ್ಥಾನದ ಎದುರಿನ ಕಟ್ಟಡದ ಮಾಳಿಗೆಯ ಕೋಣೆಯಲ್ಲಿ ಕ್ಲಿನಿಕ್ ಆರಂಬಿಸಿ, ಅಲ್ಲಿಯೇ ವೈದ್ಯವೃತ್ತಿ ನಡೆಸಿದರು. ಮಂತ್ರಿಯಾದಾಗ, ಅದನ್ನೂ ವೈದ್ಯರೊಬ್ಬರಿಗೆ ಧಾರೆಯೆರೆದರು. ಮಂಜೇಶ್ವರದ ಕ್ಲಿನಿಕ್‌ನ ಎದುರಿನ ಬಾಡಿಗೆ ಮನೆಯಲ್ಲೇ ಕೊನೆಯವರೆಗೂ ಬದುಕಿ, ಬಾಳಿ, ಮಹಾನ್ ವ್ಯಕ್ತಿಯಾಗಿ ಬೆಳೆದರು.

# ಕೃಷಿ ಪ್ರವಾಸ - ಅನುಭವ

ನನ್ನ ಕೃಷಿ ಜೀವನದಲ್ಲಿ ಕೃಷಿ ಪ್ರವಾಸಗಳಿಂದ ಬಹಳ ಪ್ರಯೋಜನವಾಗಿದೆ. ಕೃಷಿಕನಾದವನು ಕೇವಲ ತನ್ನ ತೋಟ-ಗದ್ದೆಗಳಲ್ಲಿ ಮಾತ್ರ ಓಡಾಡದೆ ಇತರೆಡೆಯೂ ಓಡಾಡಬೇಕು. ಆಗ ಕಾಲಕಾಲಕ್ಕೆ ಬದಲಾಗುತ್ತಿರುವ ಕೃಷಿ ವಿಚಾರಗಳು, ಮಾಹಿತಿಗಳು, ಕೃಷಿ ಸುಧಾರಣೆಗಳನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ. ಹಾಗೆ ತಿಳಿದ ವಿಚಾರಗಳನ್ನು ತನ್ನ ತೋಟದಲ್ಲಿ, ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಕೃಷಿ ಪ್ರವಾಸಗಳು ನನಗೆ ಹೊಸ ಪಾಠಗಳನ್ನು ಕಲಿಸಿದವು.

**ನಾನು ಮಾಡಿದ ಪ್ರವಾಸಗಳು:-**

1) ಸಿಂಡಿಕೇಟ್ ಕೃಷಿ ಪ್ರತಿಷ್ಠಾನವು ಉತ್ತಮ ಕೃಷಿಕರ ಆಯ್ಕೆಗಾಗಿ ಏರ್ಪಡಿಸಿದ ರಾಜ್ಯ ಮಟ್ಟದ ಕೃಷಿ ಕ್ಷೇತ್ರ ಪ್ರವಾಸ.

2) ಭಾರತ ಸರಕಾರದ ಕ್ಷೇತ್ರ ಪ್ರಚಾರ ಇಲಾಖೆಯವರು ಸಂಘಟಿಸಿದ ಕೃಷಿ ಕ್ಷೇತ್ರಗಳ ಪ್ರವಾಸ.

3) ಮೂಡಬಿದ್ರೆಯ ಕೃಷಿ ವಿಚಾರ ವಿನಿಮಯ ಕೇಂದ್ರ ಜರಗಿಸಿದ ಪ್ರವಾಸಗಳು.

4) ಅಡ್ದೂರು ಕೃಷಿ ವಿಚಾರ ವಿನಿಮಯ ಕೇಂದ್ರ ಸಂಘಟಿಸಿದ ಪ್ರವಾಸಗಳು.

5) ಡಾ. ಎಲ್.ಸಿ.ಸೋನ್ಸ್‌ರೊಂದಿಗೆ ಅಧ್ಯಯನ ಪ್ರವಾಸಗಳು.

***ಸಿಂಡಿಕೇಟ್ ಕೃಷಿ ಪ್ರತಿಷ್ಠಾನವು ಉತ್ತಮ ಕೃಷಿಕರ ಆಯ್ಕೆಗಾಗಿ ನಡೆಸಿದ ಪ್ರವಾಸ***

ನಾನು, ಪಂಚಮಾಲ್ ಅಚ್ಯುತ ಪ್ರಭು, ಮಂಚಿ ನಾರಾಯಣ ಆಚಾರ್, ಡಾ.ಎಲ್.ಸಿ.ಸೋನ್ಸ್, ಪಾಂಗಾಳ ಸಂಜೀವ ಶೆಟ್ಟಿ, ಬೊಂಡಾಲ ಶ್ರೀಧರ ನಾಕ್ - ಹೀಗೆ ಒಟ್ಟು ಆರು ಜನರು ಉತ್ತಮ ಕೃಷಿಕರ ಆಯ್ಕೆಗಾಗಿ ತೀರ್ಪುಗಾರರಾಗಿದ್ದೆವು.

ಉಡುಪಿಯಿಂದ ನಮ್ಮ ಪ್ರವಾಸ ಆರಂಭ. ಮೊದಲ ಭೇಟಿ ಧಾರವಾಡಕ್ಕೆ. ಅಲ್ಲಿ ಕುಲಕರ್ಣಿ ಎಂಬವರ ಸ್ಪ್ರಿಂಕ್ಲರ್ ನೀರಾವರಿ ವ್ಯವಸ್ಥೆಯನ್ನು ನೋಡಿದೆವು. ಹುಬ್ಬಳ್ಳಿಯಲ್ಲಿ ಒಬ್ಬ ಕೃಷಿಕರು ಹೈಬ್ರಿಡ್ ಜೋಳದ ಬೀಜ ತಯಾರಿಸಿ ಸರಕಾರಕ್ಕೆ ಕೊಡುತ್ತಿದ್ದರು. ಅವರು ಅದೇ ಹೈಬ್ರಿಡ್ ತಳಿಯನ್ನು ಬೆಳೆಯುತ್ತಿದ್ದರು. ಹೈಬ್ರಿಡ್ ಬೀಜ ಮಾಡುವ ತಂತ್ರಜ್ಞಾನ ನಮಗಲ್ಲಿ ತಿಳಿಯಿತು.

ಮುಂದೆ ನಿಪ್ಪಾಣಿಗೆ ಪಯಣ. ಅಲ್ಲಿನ ಒಬ್ಬ ರೈತ ಡ್ರೈ ರೈಸ್, ಹೊಗೆಸೊಪ್ಪು, ಮತ್ತು ವೀಳ್ಯದೆಲೆ ಕೃಷಿ ಮಾಡುತ್ತಿದ್ದರು. ದಿನಾ ವೀಳ್ಯದೆಲೆಯನ್ನು ಅವರು ಮುಂಬಯಿಗೆ ಕಳುಹಿಸುತ್ತಿದ್ದರು. ಅವರಲ್ಲಿ ಕಿಲಾರಿ ಜಾತಿಯ ಎತ್ತುಗಳು ಮತ್ತು ಬೀಜದ ಹೋರಿಗಳಿದ್ದುವು. ಅನಂತರ ಗದಗ, ಬಿಜಾಪುರ, ಬಸವಕಲ್ಯಾಣ, ಗುಲ್ಬರ್ಗ, ಗಂಗಾವತಿ, ಸಿಂಧನೂರುಗಳ ಕೃಷಿ ಕ್ಷೇತ್ರಗಳ ವೀಕ್ಷಣೆ.

ಬಾದಾಮಿ ಪಟ್ಟದಕಲ್ಲಿನ ರೈತರು ಜೋಳ (ಅಕ್ಕಿ ಜೋಳ) ಬೆಳೆದಿದ್ದರು. ತುಂಬಾ ರುಚಿ. ಡಾ.ಸೋನ್ಸರ ಪರಿಚಯವಾಗಿ ಅವರಿಂದ ಅಲ್ಲಿನ ರೈತರು ತೆಂಗು ಬೆಳೆ ಬೆಳೆಸುವುದರ ಬಗ್ಗೆ ಮಾಹಿತಿ ಕೇಳಿದರು. (ಹಲವು ವರುಷಗಳ ನಂತರ ಆ ಗ್ರಾಮದ ಕೆಲವು ಕೃಷಿ ಕಾರ್ಮಿಕರು ಕಬ್ಬಿನ ಕಟಾವಿಗಾಗಿ ಅಡ್ದೂರಿಗೆ ಬಂದಿದ್ದರು. ಈಗ ತಮ್ಮ ಊರಿನಲ್ಲಿ ಅನೇಕರು ತೆಂಗು ಬೆಳೆಯುತ್ತಿದ್ದಾರೆಂದು ತಿಳಿಸಿದರು)

ಸಿಂಧನೂರಿನಲ್ಲಿ ಶಿರ್ವ ಮೂಲದ ಒಬ್ಬ ವೈದ್ಯರು ಟ್ರಾಕ್ಟರ್ ಮೂಲಕ ಭತ್ತದ ಬೇಸಾಯ ಮಾಡುತ್ತಿದರು. ಬಾಂಗ್ಲಾದೇಶದಿಂದ ವಲಸೆ ಬಂದ ಅನೇಕರು ಅಲ್ಲಿ ಕೆಲಸ ಮಾಡುತ್ತಿದ್ದರು. ಮಜೂರಿ ಬಹಳ ಕಡಿಮೆ.

ಸಿಂಧನೂರಿನಿಂದ ಬಳ್ಳಾರಿ ಮಾರ್ಗವಾಗಿ ಬರುವಾಗ ಹೊಸಪೇಟೆ ಹತ್ತಿರ ಒಬ್ಬ ಆಂಧ್ರ ಮೂಲದ ಗುತ್ತಿಗೆದಾರರೊಬ್ಬರ ಹೊಲಕ್ಕೆ ಭೇಟಿ. ಆಂಧ್ರದ ವಿಜಯವಾಡದ ಹತ್ತಿರವಿದ್ದ ತನ್ನ ಎರಡೂವರೆ ಎಕ್ರೆ ಗದ್ದೆ ಮಾರಿ ಇಲ್ಲಿಗೆ ಬಂದು ನೆಲೆಸಿದ್ದರು. ಆಗ ಅಣೆಕಟ್ಟಿನ ನೀರಾವರಿ ಸ್ಥಳಗಳಲ್ಲಿ ಸರಕಾರ ಅನೇಕ ರೈತರಿಗೆ ಹತ್ತು ಎಕ್ರೆಯವರೆಗೆ ಜಮೀನು ನೀಡುತ್ತಿತ್ತು. ಒಡ್ಡು ನೀರಾವರಿ ವಿಧಾನದಿಂದ ತನ್ನ ಹತ್ತು ಎಕ್ರೆ ಫಲವತ್ತಾದ ಭೂಮಿಯನ್ನು ಕೃಷಿ ಮಾಡಲು ತೊಡಗಿದ ಈ ಗುತ್ತಿಗೆದಾರರು ತನ್ನ ಕುಟುಂಬದ ಸದಸ್ಯರ ಹೆಸರಿನಲ್ಲಿ ತಲಾ 10 ಎಕ್ರೆ ಭೂಮಿ ಖರೀದಿಸಿ ಒಟ್ಟು 300 ಎಕ್ರೆ ಭೂಮಿ ಹೊಂದಿದ್ದರು. ಇದಲ್ಲದೆ ಸ್ಥಳೀಯ ರೈತ ವರ್ಗದವರಿಂದಲೂ ನೂರು ಎಕ್ರೆ ಹೊಲವನ್ನು ಗೇಣಿಗೆ ಪಡೆದು ಒಟ್ಟು 400 ಎಕ್ರೆ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದರು. ಇವರ ಹೊಲದಲ್ಲಿ ವಿವಿಧ ಬೆಳೆಗಳಿದ್ದುವು. ಬಾಳೆ, ಕಬ್ಬು, ಭತ್ತ ಮುಖ್ಯ ಬೆಳೆ. ಅವರ ಒಬ್ಬ ತಮ್ಮ ತಾಂತ್ರಿಕ ಪದವೀಧರರಾಗಿದ್ದು ಕೈತುಂಬಾ ಹಣ ಬರುವ ಕೆಲಸದಲ್ಲಿದ್ದವರು ಅದನ್ನು ತೊರೆದು ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಉತ್ತಮ ಕೃಷಿಕ ಪ್ರಶಸ್ತಿಗೆ ಇವರು ಆಯ್ಕೆಯಾದರು.

ಬ್ರಹ್ಮಾವರದ ಸನಿಹ ಚಾಂತಾರು ಎಂಬಲ್ಲಿ ಚಾಂತಾರು ಭಟ್ಟರೆಂದೇ ಪ್ರಸಿದ್ಧರಾದವರ ತೋಟಕ್ಕೆ ಹೋದದ್ದು ಈ ಪ್ರವಾಸದ ಕೊನೆಯ ಘಟ್ಟ. ಅವರು ಹುಬ್ಬಳ್ಳಿಯಲ್ಲಿ ಹೋಟೆಲ್ ನಡೆಸುತ್ತಿದ್ದರು. ಇಲ್ಲಿ ಹಲವು ದನಗಳನ್ನು ಸಾಕುತ್ತಿದ್ದರು. ಅವುಗಳಲ್ಲಿ ಹೆಚ್ಚಿನವು ಗೊಡ್ಡು ದನಗಳು. ಹಾಗೆಂತ ಆ ದನಗಳು ಅವರದಲ್ಲ! ಅವೆಲ್ಲ ಇತರರ ದನಗಳು. ಹಾಲು ಬತ್ತಿದ ದನಗಳನ್ನು ಸಾಕಿ, ಅವು ಗರ್ಭ ಧರಿಸಿ ಕರು ಹಾಕಿದ ಕೂಡಲೇ ವಾರೀಸುದಾರರಿಗೆ ಮರಳಿಸುತ್ತಿದ್ದರು. ಅದಕ್ಕೆ ಶುಲ್ಕವನ್ನು ನಿಗದಿಪಡಿಸಿದ್ದರು.

***ಭಾರತ ಸರಕಾರದ ಕ್ಷೇತ್ರ ಪ್ರಚಾರ ಇಲಾಖೆಯ ಕೃಷಿ ಪ್ರವಾಸ***

ಪ್ರತೀ ಜಿಲ್ಲೆಯಿಂದ ಇಬ್ಬರಂತೆ ಒಟ್ಟು 20 ಮಂದಿ ತಂಡದಲ್ಲಿದ್ದೆವು. ಹೆಚ್ಚಿನವರು ಕೃಷಿಕರು. ಕೆಲವರು ಒತ್ತಾಯಕ್ಕೆ ಬಂದಂತಿತ್ತು! ಬೆಂಗಳೂರಿನಿಂದ ಪ್ರವಾಸ ಆರಂಭ. ಕೃಷಿ ವಿಶ್ವವಿದ್ಯಾಲಯಕ್ಕೆ ಮೊದಲ ಭೇಟಿ. ವಿಜ್ಞಾನಿಗಳೊಂದಿಗೆ ವಿಚಾರ ವಿನಿಮಯ. ಅನಂತರ ಹೇಸರಘಟ್ಟದ ಮೀನು ಮರಿ ಸಾಕಣೆ ಕೇಂದ್ರ ಮತ್ತು ದನ ಸಾಕಣೆ ಕೇಂದ್ರಗಳ ಭೇಟಿ. ಅಲ್ಲಿ ದನದ ಕೊಟ್ಟಿಗೆಯ ಸುತ್ತು ಅಗಳು ಹಾಕಿದ ಪ್ರದೇಶದಲ್ಲಿ ದನಗಳನ್ನೆಲ್ಲ ಬಿಡುವುದು ಪದ್ಧತಿ. ನಾವು ಹೋಗಿದ್ದಾಗ ಕೊಟ್ಟಿಗೆಯಲ್ಲಿ ದನಗಳಿರಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ದನಗಳೆಲ್ಲಾ ಅವುಗಳ ಸ್ವಸ್ಥಾನಕ್ಕೆ ಯಾರ ಸಹಾಯವೂ ಇಲ್ಲದೆ ಬಂದುವು. ಅಲ್ಲಿ ಆಹಾರ ಇಡಲಾಗಿತ್ತು. ಅವುಗಳೆಲ್ಲಾ ತಿನ್ನಲು ಶುರುಮಾಡುತ್ತಿದ್ದಂತೆ, ಅಲ್ಲಿ ಅಳವಡಿಸಿದ್ದ ಪಟ್ಟಿಗಳು ದನಗಳ ಕುತ್ತಿಗೆಯನ್ನು ಆಧರಿಸಿದವು. ಇದರಿಂದಾಗಿ ತಿನ್ನಲು ಬಾಗಿಸಿದ್ದ ಕುತ್ತಿಗೆಯನ್ನು ಹೊರ ತೆಗೆಯಲು ಸಾಧ್ಯವಾಗುತ್ತಿರಲಿಲ್ಲ. ಈ ಹೊತ್ತಿನಲ್ಲಿ ಹಾಲು ಕರೆಯಲಾಗುತ್ತಿತ್ತು. ಆಗ ಹಾಲು ಕರೆಯುವ ಯಂತ್ರಗಳ ಬಳಕೆ ಇರಲಿಲ್ಲ.

ಮುಂದೆ ಮಂಡ್ಯದ ವಿ.ಸಿ. ಫಾರ್ಮ್ ಮತ್ತು ಮೈಸೂರಿನ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿ ಕೊಯಂಬತ್ತೂರಿಗೆ ತೆರಳಿದೆವು. ಅಲ್ಲಿನ ಕೃಷಿ ವಿಶ್ವವಿದ್ಯಾಲಯದ ವಸತಿಗೃಹದಲ್ಲಿ ನಮಗೆ ವಸತಿ. ಮರುದಿನ ನನ್ನ ಜೊತೆ ಬಂದಿದ್ದವರು ಬೇರೆಲ್ಲೋ ತಿರುಗಾಡಲು ಹೋಗಿದ್ದರು. ನಾನು ಮಾತ್ರ ವಿ.ವಿ. ಯಲ್ಲೇ ಉಳಿದುಕೊಂಡು ಕೃಷಿ ವಿಸ್ತರಣಾ ವಿಜ್ಞಾನಿಗಳ ಪರಿಚಯ ಮಾಡಿಕೊಂಡೆ. ಅವರ ತಮಿಳು ಕೃಷಿ ಮಾಸಿಕಕ್ಕೆ ಚಂದಾದಾರನಾದೆ. ಕೃಷಿ ವಿಸ್ತರಣೆಯ ಪ್ರಾಧ್ಯಾಪಕರಾದ ಪ್ರೊ:ಕಂದಸ್ವಾಮಿ ಅಲ್ಲಿ ಪರಿಚಿತರಾದರು. ಊರಿಗೆ ಮರಳಿದ ಬಳಿಕ ಅವರೊಂದಿಗೆ ಪತ್ರ ವ್ಯವಹಾರ ಮಾಡುತ್ತಿದ್ದೆ. ಅನಂತರ ಮಲಪುಜಾ ಅಣೆಕಟ್ಟನ್ನು ಸಂದರ್ಶಿಸಿದೆವು.

ಕೃಷಿ ಬಗ್ಗೆ ಹೆಚ್ಚಿನ ಮಾಹಿತಿ ಸಿಗದಿದ್ದರೂ, ಅದೊಂದು ಸ್ಮರಣೀಯ ಪ್ರವಾಸ.

*ಮೂಡಬಿದ್ರೆ ಕೃಷಿ ವಿಚಾರ ವಿನಿಮಯ ಕೇಂದ್ರ ಜರಗಿಸಿದ ಪ್ರವಾಸಗಳಲ್ಲಿ ಸಂದರ್ಶಿಸಿದ ಕ್ಷೇತ್ರಗಳು*

v ಜೀವಂಧರ ಕುಮಾರರ ಮಂಗಳಾಫಾರ್ಮ್ v ಸುಳ್ಯದ ಕುರುಂಜಿಕಾರ್ ಕೆ.ಎಂ.ಗೋಪಾಲಕೃಷ್ಣ ಗೌಡರ ಮಾದರಿ ತೆಂಗಿನ ತೋಟ v ಚೆಟ್ಟಳ್ಳಿಯ ಲಿಂಬೆಜಾತಿ ಗಿಡಗಳ ಸಂಶೋಧನಾ ಕೇಂದ್ರ v ಮಾಟಕ್‌ನ ಅರಣ್ಯ ಸಂಶೋಧನಾ ಮತ್ತು ನರ್ಸರಿ ಕೇಂದ್ರ v ಕೃಷ್ಣರಾಜಸಾಗರ ಬಳಿ ಇದ್ದ ತೋಟಗಾರಿಕಾ ನರ್ಸರಿ ತೋಟ v ತಳಿಪರಂಬದ ತೋಟಗಾರಿಕಾ ಕೇಂದ್ರ v ಕಾಸರಗೋಡಿನ ಸಿಪಿಸಿಆರ್‌ಐ v ಬ್ರಹ್ಮಾವರದ ಕೃಷಿ ಸಂಶೋಧನಾ ಕ್ಷೇತ್ರ v ಚೇರ್ಕಾಡಿ ರಾಮಚಂದ್ರ ರಾಯರ ತೋಟ v ಆನಂದಪುರ ಗ್ರಾಮೀಣಾಭಿವೃದ್ಧಿ ಕೇಂದ್ರ ಮತ್ತು ಗೋಕುಲ ಕೃಷಿ ಕ್ಷೇತ್ರ, v ಬನವಾಸಿಯ ರಾವುಫ್ ಸಾಹೇಬರ ಅನಾನಸು ಬೆಳೆ v ಶಿರಸಿ ಭೈರುಂಭೆಯ ಹೆಗಡೆಯವರ ಕೃಷಿ ಕ್ಷೇತ್ರ v ತೀರ್ಥಹಳ್ಳಿ ಕುರುವಳ್ಳಿಯ ಪುರುಶೋತ್ತಮ ರಾಯರ ಕೃಷಿ ಕ್ಷೇತ್ರ

*ಅಡ್ಡೂರು ಮತ್ತು ಪೊಳಲಿ ಕೃಷಿ ವಿಚಾರ ವಿನಿಮಯ ಕೇಂದ್ರಗಳ ಕೃಷಿ ಪ್ರವಾಸ*

ಇವನ್ನು ಎರಡು ಬಾರಿ ನಾನೇ ಸಂಘಟಿಸಿದ್ದೆ. ಜೀವಂಧರ ಕುಮಾರರ ಮಂಗಳಾ ಫಾರ್ಮ್, ಕಾಂತ ರೈಗಳ ಕೃಷಿ ಕ್ಷೇತ್ರ, ಡಾ. ಸೋನ್ಸ್‌ರ ಫಾರ್ಮ್, ವಿಟ್ಲದ ಸಿ.ಪಿ.ಸಿ.ಆರ್.ಐ., ಉಳ್ಳಾಲದ ಗೇರು ಸಂಶೋಧನಾ ಕೇಂದ್ರ, ಕಂಕನಾಡಿ ಭತ್ತ ಸಂಶೋಧನಾ ಕೇಂದ್ರ, ಎ.ಜಿ.ಕೊಡ್ಗಿಯವರ ಕೃಷಿ ಕ್ಷೇತ್ರಗಳನ್ನು ಈ ಪ್ರವಾಸದಲ್ಲಿ ಸಂದರ್ಶಿಸಿದ್ದೆವು.

*ಡಾ. ಸೋನ್ಸರೊಂದಿಗೆ ಅಧ್ಯಯನ ಪ್ರವಾಸಗಳು*

ಇವುಗಳಲ್ಲದೆ ನಾನು ಡಾ.ಸೋನ್ಸ್ ರೊಂದಿಗೆ ಖಾಸಗಿಯಾಗಿ ಹೋದ ಪ್ರವಾಸಗಳು ಅನೇಕ. ಅವೆಲ್ಲಾ ಅಧ್ಯಯನ ಪ್ರವಾಸಗಳು. ಬೇರೆ ಪ್ರವಾಸದಲ್ಲಿ ವಿವಿಧ ಆಸಕ್ತಿ ಹೊಂದಿದ ಹೊಂದಿದ ವ್ಯಕ್ತಿಗಳಿದ್ದಾಗ ಕೃಷಿ ವಿಚಾರಗಳಲ್ಲದೆ ಇತರ ವಿಚಾರಗಳೂ ಚರ್ಚೆಯಲ್ಲಿ ನುಸುಳುತ್ತಿದ್ದುವು. ಸೋನ್ಸ್‌ರೊಂದಿಗೆ ಹೋದಾಗ ಹೀಗೆ ಆಗುತ್ತಿರಲಿಲ್ಲ. ಕೇವಲ ಕೃಷಿ ಕುತೂಹಲಗಳನ್ನು ಮಾತ್ರ ಮುಕ್ತವಾಗಿ ಚರ್ಚಿಸಲು ಅನುಕೂಲವಾಗುತ್ತಿತ್ತು.

ಡಾ.ಸೋನ್ಸರು ಕೃಷಿ ವಿಜ್ಞಾನಿ ಮತ್ತು ಕೃಷಿ ಸಾಧಕ. ಅವರ ಕೃಷಿ ಅನುಭವದ ಮುಂದೆ ನಮ್ಮ ಕೃಷಿ ವಿಜ್ಞಾನಿಗಳನೇಕರು ನಾಚಲೇಬೇಕು.

ಒಮ್ಮೆ ಅವರೊಂದಿಗೆ ಅರಸೀಕೆರೆಯ ತೆಂಗು ಸಂಶೋಧನಾ ಕೇಂದ್ರಕ್ಕೆ ಹೋಗಿದ್ದೆ. ಪೆರಾಜೆ ಶ್ರೀನಿವಾಸ ರಾಯರು ಜೊತೆಗಿದ್ದರು. ಈ ಸಂಶೋಧನಾ ಕೇಂದ್ರದ ಪ್ರವೇಶ ದ್ವಾರದಲ್ಲಿ ಗಂಗಾಪಾಣಿ ಎಂದು ಬರೆದಿದ್ದ ಫಲಕವೊಂದಿತ್ತು. ಅದರಲ್ಲಿ ತೆಂಗಿನ ಚಿತ್ರವೂ ಇತ್ತು. ಗಂಗಾಪಾಣಿ ತಿಪಟೂರಿನ ವಿಶಿಷ್ಠ ತೆಂಗಿನ ತಳಿ. ಅದರ ಕಾಯಿ ಉದ್ದ. ಗಂಗಬೊಂಡಂನ ಹಾಗೆ ವರ್ತುಲವಿಲ್ಲ. ಫಲಕದಲ್ಲಿ ಅದನ್ನು ಕಾಸರಗೋಡಿನ ಸಿಪಿಸಿಆರ್‌ಐನಿಂದ ತಂದಿರುವುದೆಂದೂ ನಮೂದಾಗಿತ್ತು. ಇದು ತಪ್ಪು. ಈ ನಮೂನೆಯ ತಪ್ಪು ಮಾಹಿತಿ ಕೃಷಿ ಸಂಶೋಧನಾ ಕೇಂದ್ರದಲ್ಲೇ ಇತ್ತು!

ಇನ್ನೊಮ್ಮೆ ಸೋನ್ಸ್‌ರೊಂದಿಗೆ ತಿಪಟೂರಿನ ಬೈಫ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಹೋಗಿದ್ದೆ. ಮರುಭೂಮಿಯಂತಿದ್ದ ಪ್ರದೇಶದಲ್ಲಿ ಕಾಡು ಬೆಳೆಸಿದ್ದರು. ಎಲ್ಲಾ ಜಾತಿಯ ಮರಗಳಿದ್ದವು. ಇವುಗಳ ನಿರ್ವಹಣೆ ಬಗ್ಗೆ ತಿಂಗಳಿಗೊಂದು ಸಲ ನೆರೆಯ ಗ್ರಾಮಗಳ ಕೃಷಿಕರ ಸಭೆಗಳನ್ನು ಜರುಗಿಸುತ್ತಿರುವ ವಿಚಾರ ತಿಳಿಯಿತು. ರೈತರೇನೋ ಬರುತ್ತಿದ್ದರು. ಆದರೆ ಅವರು ಅದರಿಂದ ಪ್ರಯೋಜನ ಪಡೆದಂತೆ ಕಾಣಲಿಲ್ಲ. ಯಾಕೆಂದರೆ ಅವರ್‍ಯಾರೂ ಕಾಡು ಬೆಳೆಸಿದ್ದು ಕಾಣಲಿಲ್ಲ. ಅನಂತರ ಮನಮೋಹನ್ ಅತ್ತಾವರ ಅವರ ಇಂಡೋ ಅಮೇರಿಕನ್ ಹೈಬ್ರೀಡ್ ಸಂಸ್ಥೆ, ಬೆಂಗಳೂರು ಕೃಷಿ ವಿವಿ ಮತ್ತು ಮೈಸೂರು ರಾಮಕೃಷ್ಣಾಶ್ರಮದ ತೋಟಗಳನ್ನು ಸಂದರ್ಶಿದೆವು.

ಮತ್ತೊಮ್ಮೆ ಡಾ.ಸೋನ್ಸರು, ಜೀವಂಧರ್ ಕುಮಾರ್ ಮತ್ತು ನಾನು ಜೊತೆಯಲ್ಲಿ ತ್ರಿಶೂರ್, ಕೊಟ್ಟಾಯಂ, ಕುಮರಕ್ಕೋಂ, ಮತ್ತು ತಮಿಳುನಾಡಿನ ಕುಟ್ರಾಲಂಗೆ ಹೋಗಿದ್ದೆವು. ಅಲ್ಲಿ ಜಲಪಾತವಿದೆ. ಅದರ ಹತ್ತಿರ ಪುಣ್ಯ ಕ್ಷೇತ್ರವಿದೆ. ಅಲ್ಲಿ ಸಂತೆಯಲ್ಲಿ ರಂಬುಟಾನ್ ಹಣ್ಣು ಮಾರಾಟವಾಗುತ್ತದೆ ಎಂಬ ಸುದ್ದಿ ಕೇಳಿ ಅಲ್ಲಿಗೆ ಹೋಗಿದ್ದೆವು. ಆಗಲೇ ಸೋನ್ಸರು ತಮ್ಮ ಕೃಷಿ ಕ್ಷೇತ್ರದಲ್ಲಿ ರಂಬುಟಾನ್ ಬೆಳೆಸಿದ್ದರು. ಅವುಗಳನ್ನು ಮಲೇಶಿಯಾದಿಂದ ತಂದು ಬೆಳೆಸಲು ಅವರಿಗೆ ತುಂಬಾ ವೆಚ್ಚವಾಗಿದೆ. ಈಗ ಅವುಗಳು ಫಲ ನೀಡುತ್ತಿವೆ. ಒಂದು ಮರ ತೊಂಭತ್ತು ಕಿಲೋ ಹಣ್ಣು ನೀಡಿದೆ. ಒಂದುಹಣ್ಣಿಗೆ ಎರಡು ರೂಪಾಯಿ ದರವಿದೆ.

ರಂಬುಟಾನ್‌ನ ದೊಡ್ಡ ಮಾರುಕಟ್ಟೆ ಎಲ್ಲಿ ಎಂದು ತಿಳಿದಿರಲಿಲ್ಲ. ಹಾಗಾಗಿ ರಂಬುಟಾನ್ ಮಾರಾಟ ಮಾಡುವ ಅಂಗಡಿಗಳಿಗೆ ಹೋದೆವು. ಒಂದೊಂದು ಹಣ್ಣಿಗೆ ಎರಡು ರೂಪಾಯಿ ಬೆಲೆ. ಹಣ್ಣಿನ ಬೆಳೆಗಾರರ ಬಗ್ಗೆ ವಿಚಾರಿಸಿದಾಗ ಮಾರಾಟಗಾರರು ಗುಟ್ಟು ಬಿಡಲಿಲ್ಲ. 'ತ್ರಿಚೂರಿನಿಂದ' ಎಂದಷ್ಟೇ ಉತ್ತರ ನೀಡಿದರು. 'ನಿಮಗೆ ಯಾಕೆ' ಎಂದೂ ಪ್ರಶ್ನಿಸಿದ್ದರು. ನಾವು ಅಲ್ಲಿನ ಬೆಳೆಗಾರರನ್ನು ಪತ್ತೆ ಮಾಡಿ ನಾವೇ ಹಣ್ಣಿನ ಮಾರಾಟ ಮಾಡುತ್ತೇವೆ ಎಂದು ಅವರು ಹೆದರಿರಬೇಕು. ಕೊನೆಗೆ ತ್ರಿಶೂರು ವಿವಿ ಯನ್ನು ಸಂಪರ್ಕಿಸಿದೆವು. ಅಲ್ಲಿನ ವಿಜ್ಞಾನಿಯೊಬ್ಬರು ಸೋನ್ಸರ ಪರಿಚಯದವರು. ಅವರು ಒಬ್ಬ ಸಹಾಯಕರನ್ನು ನಮ್ಮ ಜೊತೆಗೆ ಕಳುಹಿಸಿದರು. ಅಂತೂ ರಂಬುಟಾನ್ ಬೆಳೆಗಾರನಲ್ಲಿಗೆ ಹೋದೆವು. ಅಲ್ಲಿ ಕೆಲವೇ ಸಣ್ಣ ಮರಗಳಿದ್ದುವು. ಅವರು ನಮ್ಮ ಪ್ರಶ್ನೆಗೆ ಹಾರಿಕೆಯ ಉತ್ತರ ನೀಡಿದರು. ಸೋನ್ಸರ ತೋಟದಲ್ಲಿ ತೊಂಭತ್ತು ಕಿಲೋ ಹಣ್ಣು ನೀಡುವ ಮರ ಇದೆ ಎಂದು ತಿಳಿಸಿದಾಗ ಅವರಿಗೆ ಆಶ್ಚರ್ಯ. ಕೊನೆಗೆ ರಂಬುಟಾನ್ ಬಗ್ಗೆ ನಮ್ಮಿಂದ ಮಾಹಿತಿ ಪಡೆಯಲು ಉತ್ಸುಕರಾದರು!

*ಸಾವಯವ ಕೃಷಿಕರ ಭೇಟಿ*

ಕುಕ್ಕುಜಡ್ಕದಲ್ಲಿ ಜರುಗಿದ ಸಾವಯವ ಕೃಷಿ ವಿಚಾರ ಗೋಷ್ಠಿಯಲ್ಲಿ ಧಾರವಾಡದ ಭರಮ ಗೌಡರ್ ಮತ್ತು ದಿ. ಎ.ಎನ್.ಮೂರ್ತಿಯವರ ಪುತ್ರ ಡಾ.ಅ.ನ.ನಾಗರಾಜ್ ಪರಿಚಯ ನನಗಾಯಿತು. ಅವರು FAO ಸಲಹೆಗಾರನಾಗಿ ಬಹಳ ವರುಷ ಕೆಲಸ ಮಾಡಿದ್ದರು. ಅವರು ಜಗತ್ತಿನ ಕೃಷಿ ವಿಜ್ಞಾನಿಗಳು ವಿಷಮಯ ಕೀಟನಾಶಕಗಳ ಬಳಕೆಯನ್ನು ಶಿಫಾರಸು ಮಾಡುವುದನ್ನು ಒಪ್ಪದೆ ಆ ಹುದ್ದೆಯನ್ನು ತ್ಯಜಿಸಿ, ಮೈಸೂರಿನಲ್ಲಿ ನೆಲೆಸಿ ಸಾವಯವ ಕೃಷಿಗೆ ಇಳಿದರು. ಮೈಸೂರು ನಗರದ ತ್ಯಾಜ್ಯವನ್ನೆಲ್ಲ ಅವರ ಕ್ಷೇತ್ರದ ಬಳಿ ಬಿಟ್ಟು ಹೊಲಸು ಮಾಡುವುದನ್ನು ನೋಡಿ ಅಲ್ಲಿಗೆ ವಿದಾಯ ಹೇಳಿ ತೀರ್ಥಹಳ್ಳಿ ಹತ್ತಿರದ ಭೀಮನಕಟ್ಟೆಯಲ್ಲಿ ತೋಟ ಮಾಡಿದ್ದಾರೆ. ಅವರು ಈಗಲೂ ಸಾವಯವ ಕೃಷಿ ಮತ್ತು ಆರೋಗ್ಯ ಸಮಸ್ಯೆಗಳ ನಿವಾರಣೆಗಾಗಿ ಪರಿಪೂರ್ಣ ಜೀವನ ಶೈಲಿಯ ಪ್ರತಿಪಾದಕರು.

ಒಮ್ಮೆ ಕೃಷಿ ವಿ.ವಿ.ಯವರು ಪ್ರತೀ ಜಿಲ್ಲೆಯಿಂದ ಒಬ್ಬೊಬ್ಬ ಕೃಷಿಕರನ್ನು ರಾಜ್ಯ ಮಟ್ಟದ ಸಮ್ಮೇಳನಕ್ಕೆ ಕರೆದಿದ್ದರು. ದಕ್ಷಿಣ ಕನ್ನಡದಿಂದ ನಾನು ಹೋಗಿದ್ದೆ. ಅಲ್ಲಿ ಶಿವಮೊಗ್ಗ ಪ್ರಫುಲ್ಲಚಂದ್ರ, ಬೆಂಗಳೂರಿನ ದ್ರಾಕ್ಷಿ ಬೆಳೆಗಾರ ಅನಂತಪ್ಪ, ಬೆಂಗಳೂರು ಗ್ರಾಮಾಂತರದ ಸಾವಯವ ಕೃಷಿಕ ವರ್ತೂರಿನ ಜಿ.ನಾರಾಯಣ ರೆಡ್ಡಿ ಇವರ ಪರಿಚಯವಾಯಿತು.

*ದೆಹಲಿಯ ಜಾಗತಿಕ ಕೃಷಿ ಮೇಳ*

1961ರಲ್ಲಿ ದೆಹಲಿಯಲ್ಲಿ ಜರುಗಿದ ಜಾಗತಿಕ ಕೃಷಿ ಮೇಳಕ್ಕೆ ಹೋಗಿ ಬಂದದ್ದು ನನ್ನ ಮೊದಲನೆಯ ಕೃಷಿ ಪ್ರವಾಸ. ಪ್ರತೀ ಬ್ಲಾಕ್‌ನಿಂದ ಆರು ಜನರಂತೆ ದಕ್ಷಿಣ ಕನ್ನಡ ಜಿಲ್ಲೆಯಿಂದ 96 ಮಂದಿ ಕೃಷಿಕರು ಒಂದೇ ರೈಲಿನಲ್ಲಿ ದೆಹಲಿಗೆ ಪ್ರಯಾಣಿಸಿದ್ದೆವು. ನಮಗೆ ನಮ್ಮ ಜಿಲ್ಲೆಯ ಹಾಗೂ ಇತರ ಜಿಲ್ಲೆಗಳ ರೈತರ ಪರಿಚಯವಾಯಿತು. ಈ ಪರಿಚಯದ ಆಧಾರದಿಂದ ನಾವು ನಂತರ ಜಿಲ್ಲೆಯಲ್ಲಿ ಕೃಷಿ ಅನುಭವ ಕೂಟವನ್ನು ಸ್ಥಾಪಿಸಲು ಸಾಧ್ಯವಾಯಿತು.

ಅಲ್ಲಿ ಜಪಾನ್ ನಿರ್ಮಿತ ಪವರ್ ಟಿಲ್ಲರ್ ಪ್ರದರ್ಶಿಸಲಾಗಿತ್ತು. ಆಗ ಅದರ ಕ್ರಯ ರೂ.1500. ಅದನ್ನು ನಮ್ಮ ಜಿಲ್ಲೆಗೆ ಕಳುಹಿಸಿ ಪ್ರಯೋಗ ಮಾಡಬೇಕೆಂದು ವಿನಂತಿಸಿದೆವು. ಆಗ ಐ.ಸಿ.ಎ.ಆರ್.ನ ತಾಂತ್ರಿಕ ವಿಭಾಗದ ಮುಖ್ಯಸ್ಥರಾಗಿದ್ದವರು ಇ.ವಿಠಲರಾಯರ ಹಿರಿಯ ಸಹೋದರ ಇ.ಜಿ.ಕೆ.ರಾವ್. ಅವರು ನಮ್ಮ ಮನವಿಗೆ ಸ್ಪಂದಿಸಿ, ನಂತರ ಅದನ್ನು ಕಂಕನಾಡಿ ಭತ್ತ ಸಂಶೋಧನಾ ಕೇಂದ್ರಕ್ಕೆ ಕಳುಹಿಸಿದರು. ಅಲ್ಲಿ ಅದರ ಪ್ರದರ್ಶನವಾಯಿತು. ಅನಂತರ ನಮ್ಮ ಜಿಲ್ಲೆಗೆ ಪವರ್ ಟಿಲ್ಲರ್ ಪ್ರವೇಶ ಮಾಡಿತು. ಪ್ರಾರಂಭದಲ್ಲಿ ಕೇವಲ ಐದು ಸಾವಿರ ರೂಪಾಯಿಗಳಿಗೆ ಸಿಗುತ್ತಿದ್ದ ಜಪಾನ್ ನಿರ್ಮಿತ ಪವರ್ ಟಿಲ್ಲರ್‌ನ ಕ್ರಯ ಕ್ರಮೇಣ ಹತ್ತು ಸಾವಿರ ರೂಪಾಯಿಗಳಿಗೆ ಏರಿತು. ಈಗ ಅದರ ಬೆಲೆ ಸುಮಾರು ಒಂದು ಲಕ್ಷ ರೂಪಾಯಿ!

ಮೂಡಬಿದ್ರೆಯ ಕೇಂದ್ರವು ಇತ್ತೀಚೆಗೆ (2003) ಮಿಜಾರಿನ ಡಾ.ಮೋಹನ ಆಳ್ವರ 'ಶೋಭಾವನ'ದಲ್ಲಿ ಚರ್ಚಾ ಕಾರ್ಯಕ್ರಮ ಏರ್ಪಡಿಸಿತ್ತು. ಬಾಳಸಂಜೆಯಲ್ಲಿರುವ ನನಗೆ ನಾಳೆ ಏನಾಗುತ್ತದೆಂದು ತಿಳಿಯದು. ಇನ್ನು ಮುಂಚಿನಂತೆ ಕೃಷಿ ಕ್ಷೇತ್ರಗಳಿಗೆ ಪ್ರವಾಸ ಹೋಗಲು ಸಾಧ್ಯವಾಗದು. ಹಾಗಾಗಿ ಎಲ್ಲರನ್ನು ಕಂಡು ಮಾತನಾಡಿ ಬೀಳ್ಕೊಟ್ಟು ಬರುವ ಉದ್ದೇಶದಿಂದ ಹೋಗಿದ್ದೆ. ನನ್ನ ಬದುಕಿನ ಕೃಷಿ ಪ್ರವಾಸಗಳ ಘಟನೆಗಳನ್ನೂ, ಅವುಗಳಿಂದ ಕಲಿತ ವಿಷಯಗಳನ್ನೂ ನೆನಪು ಮಾಡಿಕೊಳ್ಳುತ್ತಾ ಅಲ್ಲಿಂದ ಹಿಂತಿರುಗಿದೆ.

**ನನ್ನ ತೋಟದಲ್ಲಿರುವ ಬೆಳೆಗಳು**

**ತೆಂಗು, ಹಲಸು, ಮಾವು (ಕಾಟು), ಕಸಿಮಾವು, ದೀವೀ ಹಲಸು, ಗೇರು, ಸಕ್ಕರೆಕಂಚಿ, ಕೊಕ್ಕೋ, ಒಳ್ಳೆಮೆಣಸು, ದಾಲ್ಚಿನ್ನಿ, ಲವಂಗ, ಜಾಯಿಕಾಯಿ, ಅನಾನಸು, ಸರ್ವಸಾಂಬಾರ, ಪುನರ್ಪುಳಿ, ಗಾರ್ಸೀನಿಯಾ, ಜಾಂಬುಳು, ಮಲೇಶಿಯನ್ ಸ್ಟಾರ್‌ಅಪಲ್, ಎಗ್‌ಫ್ರುಟ್, ಪೇರಳೆ, ಬಾದಾಂ, ಬೂರುಗ, ಗುಗ್ಗುಳುದೂಪ, ಬಾರ್ಬಡ್‌ಚೆರ್ರಿ, ಮರುವಳ, ನುಗ್ಗೆ, ಬರ್ಮಾಬಿದಿರು, ಲೆಂಕಿರಿ, ಕಹಿಬೇವು, ಕರಿಬೇವು, Laquat.**

***